ಶುಕ್ರವಾರ, ನವೆಂಬರ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 318 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



‘ಆರ್ಥಿಕ ಹಿಂಜರಿತದಲ್ಲಿ ಬ್ರಿಟನ್’ 10
ಗುಂಬಜ್: ತಜ್ಞರ ವರದಿ ಬಳಿಕ ಕ್ರಮ–ಬೊಮ್ಮಾಯಿ 4
ಇಂದು ಸಿನಿಮಾ ಪುರವಣಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,750	18,343	₹54,530 (ಬೆಂಗಳೂರು)	₹63,100 (ಬೆಂಗಳೂರು)	81.64

ಆರೋಪದಲ್ಲಿ ಹುರುಳಿಲ್ಲ, ಆದರೂ ಸಮಗ್ರ ತನಿಖೆ – ಮುಖ್ಯಮಂತ್ರಿ

ಮತ ಪಟ್ಟಿಗೆ ಕನ್ನ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಸಂಸ್ಥೆಯೊಂದಕ್ಕೆ ಮತದಾರರ ಪಟ್ಟಿ ಪರಿಷ್ಕರಣೆಯ ಅನುಮತಿ ನೀಡಿ, ಮತದಾರರ ಮಾಹಿತಿ ಕಳವಿಗೆ ಬೆಂಗಳೂರು ಉಸ್ತುವಾರಿ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರಣರಾಗಿದ್ದಾರೆ’ ಎಂದು ಆರೋಪಿಸಿರುವ ಪ್ರತಿಪಕ್ಷ ಕಾಂಗ್ರೆಸ್, ‘ಮುಖ್ಯಮಂತ್ರಿ ಸ್ಥಾನಕ್ಕೆ ಅವರು ತಕ್ಷಣ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದೆ.

‘ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಸಬೇಕು. ಇಡೀ ಪ್ರಕರಣದ ಬಗ್ಗೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು’ ಎಂದೂ ಒತ್ತಾಯಿಸಿರುವ ಕಾಂಗ್ರೆಸ್ ನಾಯಕರು, ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದಾರೆ.

ಈ ಬೆನ್ನಲ್ಲೇ, ಬಿಬಿಎಂಪಿ ವಿಶೇಷ ಆಯುಕ್ತ ಎಸ್. ರಂಗಪ್ಪ ಅವರು ನೀಡಿದ ದೂರಿನ ಅನ್ವಯ ಚಿಲುಮೆ ಸಂಸ್ಥೆಯ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

4ನೇ ಪುಟ ನೋಡಿ

ಆರೋಪ ಹಾಸ್ಯಾಸ್ಪದ: ಬೊಮ್ಮಾಯಿ

‘ಕಾಂಗ್ರೆಸ್ ಆರೋಪ ಹಾಸ್ಯಾಸ್ಪದ. ಆದರೂ, ಈ ಆರೋಪದ ಕುರಿತು ಪೊಲೀಸ್ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಕಾಂಗ್ರೆಸ್ ಪಕ್ಷ ವೈಚಾರಿಕವಾಗಿ ದಿವಾಳಿ ಆಗಿದೆ. ಚುನಾವಣಾ ಆಯೋಗವು ಮತಜಾಗೃತಿಗೆ ‘ಸ್ವೀಪ್’ ಎನ್ನುವ ಕಾರ್ಯಕ್ರಮವನ್ನು ಹಲವು ವರ್ಷಗಳಿಂದ ಮಾಡಿಕೊಂಡು ಬರುತ್ತಿದೆ. ಈ ಕಾರ್ಯಕ್ಕೆ ಚುನಾವಣಾ ಆಯೋಗ ಮತ್ತು ಬಿಬಿಎಂಪಿ ಕೆಲವು ಸರ್ಕಾರೇತರ ಸಂಸ್ಥೆಗಳನ್ನು ಬಳಸಿಕೊಳ್ಳುತ್ತವೆ. ಮತದಾರರ ಮಾಹಿತಿ ಸೋರಿಕೆಯಾಗಿದೆ ಎನ್ನುವುದರಲ್ಲಿ ಹುರುಳಿಲ್ಲ. ಈ ಬಗ್ಗೆ ತನಿಖೆಗೆ ಕ್ರಮ ವಹಿಸುವಂತೆ ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದ್ದೇನೆ’ ಎಂದರು.

‘ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ₹ 130 ಕೋಟಿ ಖರ್ಚು ಮಾಡಿ, ರಾಜ್ಯದಲ್ಲಿ ಸಾಮಾಜಿಕ ಆರ್ಥಿಕ ಸಮೀಕ್ಷೆ ನಡೆಸಿತು. ಜಾತಿ, ಉಪಜಾತಿ, ಮರಿಜಾತಿಗಳ ಮಾಹಿತಿ ಸಂಗ್ರಹಿಸಿ, ದಾಖಲೆ ಸಿದ್ಧಪಡಿಸಲಾಯಿತು. ಇದನ್ನು ಗುಪ್ತವಾಗಿ ಇರಿಸಿಕೊಂಡು ಚುನಾವಣೆ ನಡೆಸಲಾಯಿತು. ಆದರೂ ಸೋತ ಕಾಂಗ್ರೆಸ್ ಪಕ್ಷ, ಈಗ ಅನಗತ್ಯವಾಗಿ ಆರೋಪ ಮಾಡುತ್ತಿದೆ. ಈ ಪ್ರಕರಣದಲ್ಲಿ ಶಿಕ್ಷೆ ಆಗಬೇಕಾದರೆ ಮೊದಲು ಸಿದ್ದರಾಮಯ್ಯ ಹಾಗೂ ಅವರ ಸರ್ಕಾರಕ್ಕೆ ಆಗಬೇಕು’ ಎಂದರು.

‘ಚಿಲುಮೆ’, ಲೋಕೇಶ್ ವಿರುದ್ಧ ಎಫ್‌ಐಆರ್

ಅನುಮತಿಯಿಲ್ಲದೇ ಬೂತ್‌ಮಟ್ಟದ ಅಧಿಕಾರಿಗಳ (ಬಿಎಲ್‌ಒ) ನಕಲಿ ಗುರುತಿನ ಚೀಟಿಯನ್ನು ಸೃಷ್ಟಿಸಿಕೊಂಡು ಮನೆಗಳಿಗೆ ತೆರಳಿ ಮತದಾರರ ಗುರುತಿನ ಚೀಟಿ, ‘ಆಧಾರ್’ ಸಂಗ್ರಹಿಸಿ ಆ್ಯಪ್‌ವೊಂದಕ್ಕೆ ಮತದಾರರ ವೈಯಕ್ತಿಕ ಮಾಹಿತಿ ಅಪ್‌ಲೋಡ್ ಮಾಡಿದ್ದಕ್ಕೆ ಸಂಬಂಧಿಸಿದಂತೆ ‘ಚಿಲುಮೆ’ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಆ ಸಂಸ್ಥೆಯ ಕೆ.ಎಂ.ಲೋಕೇಶ್ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಿಬಿಎಂಪಿ ವಿಶೇಷ ಆಯುಕ್ತ ಎಸ್. ರಂಗಪ್ಪ (ಆಡಳಿತ ಹಾಗೂ ಚುನಾವಣೆ ಶಾಖೆ) ಈ ದೂರು ನೀಡಿದ್ದಾರೆ.

‘2018ರ ಡಿ.22ರಂದು ಚಿಲುಮೆ ಸಂಸ್ಥೆಗೆ ಮತದಾರರ ಪಟ್ಟಿ ಪರಿಷ್ಕರಣೆಯ ಜಾಗೃತಿ ಹಾಗೂ ಆಧಾರ್ ಸಂಖ್ಯೆ ಲಿಂಕ್ ಮಾಡಲು ಷರತ್ತು ವಿಧಿಸಿ ಅನುಮತಿ ನೀಡಲಾಗಿತ್ತು. ಬಿಎಲ್‌ಒ ಹಾಗೂ ಮತದಾರರ ನೋಂದಣಾಧಿಕಾರಿಗಳ ಸಹಯೋಗಕ್ಕೆ ಸೂಚಿಸಲಾಗಿತ್ತು. ಆದರೆ, ಸಂಸ್ಥೆಯು ಷರತ್ತು ಉಲ್ಲಂಘಿಸಿದ್ದರಿಂದ ಇದೇ ನ.2ರಂದು ಅನುಮತಿ ರದ್ದುಪಡಿಸಲಾಗಿತ್ತು. ಆದರೂ, ಸಂಸ್ಥೆ ಹಾಗೂ ಲೋಕೇಶ್ ಅನುಮತಿಯಿಲ್ಲದೆ ಬಿಎಲ್‌ಒ ಹೆಸರಿನಲ್ಲಿ ಗುರುತಿನ ಚೀಟಿ ಸೃಷ್ಟಿಸಿಕೊಂಡು ಮನೆಮನೆಗೆ ತೆರಳಿ ಮತದಾರರ ವೈಯಕ್ತಿಕ ಮಾಹಿತಿ ಸಂಗ್ರಹಿಸಿದ್ದಾರೆ. ಮತದಾರರ ವೈಯಕ್ತಿಕ ಮಾಹಿತಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೂರಿನಲ್ಲಿ ರಂಗಪ್ಪ ಉಲ್ಲೇಖಿಸಿದ್ದಾರೆ.



ಟೆಕ್ ಸಮ್ಮಿಟ್ ಬೆಂಗಳೂರಿನಲ್ಲಿ ನಡೆಯುತ್ತಿರುವ ‘ಬೆಂಗಳೂರು ಟೆಕ್ ಸಮ್ಮಿಟ್’ನ ಎರಡನೇ ದಿನವಾದ ಗುರುವಾರ ಶಾಲಾ ಮಕ್ಕಳು ಭೇಟಿ ನೀಡಿದರು – ಪ್ರಜಾವಾಣಿ ಚಿತ್ರ

ಸುದ್ದಿಗಳು 2,9

ಸಿ ಮತ್ತು ಡಿ ಶ್ರೇಣಿ: ಪತಿ,ಪತ್ನಿ ವರ್ಗಾವಣೆ ನೀತಿ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ‘ಸಿ’ ಮತ್ತು ‘ಡಿ’ ಶ್ರೇಣಿ ನೌಕರರ ಪತಿ ಮತ್ತು ಪತ್ನಿ ಪ್ರಕರಣಗಳ ವರ್ಗಾವಣೆ ನಿಯಮಾವಳಿಯ ತಿದ್ದುಪಡಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಹೊಸ ನಿಯಮದ ಪ್ರಕಾರ ಆಯಾ ಇಲಾಖೆಯ ಸೇವಾ ನಿಯಮದ ಅನ್ವಯ ನಿಗದಿ ಮಾಡಿರುವ ಕನಿಷ್ಠ ಸೇವಾ ಅವಧಿ (ನೇಮಕಗೊಂಡ ಸ್ಥಳದಲ್ಲಿ) ಪೂರ್ಣಗೊಳಿಸಿದ ನಂತರ ಪತಿ– ಪತ್ನಿ ಪ್ರಕರಣದಲ್ಲಿ ಮಾತ್ರ ಅಂತರ್ ಜಿಲ್ಲೆ ವರ್ಗಾವಣೆಗೆ ಅವಕಾಶ ನೀಡಲಾಗುವುದು. ಈ ಬದಲಾವಣೆಯನ್ನು ನೌಕರರ ವರ್ಗಾವಣೆ ನಿಯಮಕ್ಕೆ ಸೇರಿಸಲಾಗುವುದು ಎಂದು ಸಚಿವ ಸಂಪುಟ ಸಭೆಯ ಬಳಿಕ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಿಕ್ಷಣ ಇಲಾಖೆಯಲ್ಲಿ ನೇಮಕಗೊಂಡ ಸ್ಥಳದಲ್ಲಿ ಕನಿಷ್ಠ ಸೇವಾ ಅವಧಿ 5 ವರ್ಷ ಇದ್ದರೆ, ಗೃಹ ಇಲಾಖೆಯಲ್ಲಿ ಕಾನ್‌ಸ್ಟೆಬಲ್‌ಗಳಿಗೆ 7 ವರ್ಷ ನಿಗದಿ ಮಾಡಲಾಗಿದೆ. ಅದೇ ರೀತಿ ಇತರ ಇಲಾಖೆಗಳಲ್ಲೂ ಕನಿಷ್ಠ ಸೇವಾ ಅವಧಿ ನಿಗದಿ ಮಾಡಲಾಗಿದೆ. ಈ ಅವಧಿ ಮುಗಿಸಿದ ನಂತರ ವರ್ಗಾವಣೆಗೆ ಅವಕಾಶ ನೀಡಲಾಗುವುದು. ಕೆಲವು ಇಲಾಖೆಗಳಲ್ಲಿ ನೌಕರರು 10–15 ವರ್ಷಗಳು ಕಳೆದರೂ ಪತಿ– ಪತ್ನಿ ಪ್ರಕರಣಗಳಲ್ಲಿ ವರ್ಗಾವಣೆ ಪಡೆಯಲು ಸಾಧ್ಯ ಆಗುತ್ತಿಲ್ಲ. ವಿಶೇಷವಾಗಿ ಕಾನ್‌ಸ್ಟೆಬಲ್‌ಗಳು ತೊಂದರೆಗೀಡಾಗಿದ್ದು, ನಿಯಮ ಬದಲಾವಣೆಯಿಂದ ಅವರಿಗೆ ಪ್ರಯೋಜನವಾಗಲಿದೆ ಎಂದು ಸುಧಾಕರ್ ತಿಳಿಸಿದರು.

ವನ್ಯಜೀವಿಧಾಮಗಳಿಗೆ ಒಪ್ಪಿಗೆ: ರಾಜ್ಯದಲ್ಲಿ ಹೊಸದಾಗಿ ಉತ್ತಾರೆಗುಡ್ಡ ವನ್ಯಜೀವಿಧಾಮ, ಬಂಕಾಪುರ ವನ್ಯಜೀವಿಧಾಮ ಮತ್ತು ಅರಸೀಕೆರೆ ಕರಡಿಧಾಮಗಳ ಘೋಷಣೆಗೆ ಅನುಮೋದನೆ ನೀಡಲಾಗಿದೆ ಎಂದರು.

ಅಲ್ಲದೆ, ಹಿರೆಸೂಲೆಕೆರೆ ಕರಡಿ ಸಂರಕ್ಷಣಾ ಮೀಸಲು ಪ್ರದೇಶ, ಚಿಕ್ಕಸಂಗಮ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ, ಮುಂಡಿಗೆ ಕೆರೆ ಮತ್ತು ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ ಮತ್ತು ಬೋನಾಳ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶಗಳನ್ನು ಘೋಷಿಸಬೇಕೆಂಬ ಅರಣ್ಯ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಯಿತು ಎಂದು ಸುಧಾಕರ್ ಹೇಳಿದರು.

ಡಿ.19ರಿಂದ ಬೆಳಗಾವಿ ಅಧಿವೇಶನ

ವಿಧಾನಮಂಡಲದ ಉಭಯ ಸದನಗಳ ಚಳಿಗಾಲದ ಅಧಿವೇಶನವನ್ನು ಡಿಸೆಂಬರ್ 19 ರಿಂದ 30 ರವರೆಗೆ ಬೆಳಗಾವಿಯಲ್ಲಿ ನಡೆಸಲಾಗುವುದು ಎಂದು ಸಚಿವ ಡಾ. ಸುಧಾಕರ್ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪದವಿ ತರಗತಿಯ ವೈದ್ಯಕೀಯ ಸಮಾಜಶಾಸ್ತ್ರ ಪುಸ್ತಕದಲ್ಲಿ ಉಲ್ಲೇಖ

ಏಡ್ಸ್, ಕ್ಯಾನ್ಸರ್‌ಗೆ ಸ್ವಮೂತ್ರಪಾನವೇ ಮದ್ದು!

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಮೂತ್ರ ಚಿಕಿತ್ಸೆಯು ಪ್ರಕೃತಿ ಚಿಕಿತ್ಸೆಯ ಒಂದು ಭಾಗ. ಸ್ವಮೂತ್ರ ಪಾನ, ಮೂತ್ರ ಲೇಪನದಿಂದ ಏಡ್ಸ್, ಕ್ಯಾನ್ಸರ್, ಕಣ್ಣು, ಕಿವಿ, ಹಲ್ಲು, ಚರ್ಮ ರೋಗಗಳನ್ನು ನಿಯಂತ್ರಿಸಬಹುದು…’

–ಇದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪಠ್ಯಕ್ರಮದ ಅನ್ವಯ ಕೆಲ ಲೇಖಕರು ಮೈಸೂರು ವಿಶ್ವವಿದ್ಯಾಲಯದ ಪದವಿ (ಬಿ.ಎ) ತರಗತಿಗೆಂದು ಬರೆದ ‘ವೈದ್ಯಕೀಯ ಸಮಾಜಶಾಸ್ತ್ರ’ ಪುಸ್ತಕದ ಒಂದು ಅಧ್ಯಾಯದಲ್ಲಿರುವ ವಿವರ.

‘ಪ್ರಕೃತಿಯು ರೋಗನಿರೋಧಕ ಶಕ್ತಿಯನ್ನು ಮನುಷ್ಯನಿಗೆ ಆತನ ದೇಹದಲ್ಲೇ ನೀಡಿದೆ. ಆ ಶಕ್ತಿಯೇ ಮೂತ್ರ. ಸಹಸ್ರಾರು ವರ್ಷಗಳಿಂದ ಯೋಗಿಗಳು ಮೂತ್ರ ಸೇವಿಸುತ್ತಿದ್ದರು’ ಎಂಬ ವಿವರಗಳಿವೆ.

‘ಚಿಕಿತ್ಸೆಯ ಪರಿಣಾಮ ಹಾಗೂ ಮಹತ್ವ ವಿವರಿಸಲು ಲೇಖನದಲ್ಲಿ ಹಲವು ಸಾಧಕರ ಹೆಸರು ಬಳಸಿಕೊಳ್ಳಲಾಗಿದೆ. ಭಾರತದ ದಿವಂಗತ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಸಂಸ್ಕೃತ ಸಾಹಿತ್ಯ ನಿಧಿಯಲ್ಲಿ ‘ಶಿವಾಂಬು ಸಂಹಿತೆ’ಯಲ್ಲಿ ಈ ಬಗ್ಗೆ ಮಾಹಿತಿ ದೊರೆಯುತ್ತದೆ’ ಎಂದು ಮಾಹಿತಿ ನೀಡಲಾಗಿದೆ.

‘ನಿಮ್ಮ ಆರೋಗ್ಯ ರಕ್ಷಣೆಗಾಗಿ ನಿಮ್ಮ ದೇಹವನ್ನೇ ಅವಲಂಬಿಸಿ ಎಂಬ ಉಲ್ಲೇಖ ಬೈಬಲ್‌ನಲ್ಲೂ ಇದೆ. ಚಂದ್ರನ ಮೇಲೆ ಕಾಲಿಟ್ಟ ಮೊದಲ ಮಾನವ ನೀಲ್ ಆರ್ಮ್‌ಸ್ಟ್ರಾಂಗ್ ಬರೆದಿರುವ ‘ವಾಟರ್ ಆಫ್ ಲೈಫ್’ ಪುಸ್ತಕದಲ್ಲೂ ಸ್ವಮೂತ್ರ ಪಾನದ ವಿವರಣೆ ಇದೆ’ ಎಂಬ ಮಾಹಿತಿ ಇದೆ.

ಗೋಮೂತ್ರ ಚಿಕಿತ್ಸೆಗೂ ಒತ್ತು: ‘ಪವಿತ್ರ ವೈದ್ಯ ಪದ್ಧತಿ ಅಧ್ಯಾಯದ ಪ್ರಕೃತಿ ಚಿಕಿತ್ಸೆ ಪಾಠದಲ್ಲಿ ಗೋಮೂತ್ರ ಚಿಕಿತ್ಸೆಯ ವಿಧಾನಗಳನ್ನೂ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ಹಿಂದೂಗಳಲ್ಲಿ ಗೋಮೂತ್ರ ಸೇವನೆ ಪವಿತ್ರವಾದುದು. ಇದು ಕ್ಯಾನ್ಸರ್, ಮೈಗ್ರೇನ್, ಆಸ್ತಮಾ, ಅರ್ಥ್ರೈಟಿಸ್, ಮಧುಮೇಹ ಮೊದಲಾದ ರೋಗಗಳನ್ನು ನಿವಾರಣೆ ಮಾಡುತ್ತದೆ. ಗೋಮೂತ್ರದಿಂದ ಕಣ್ಣುಗಳನ್ನು ತೊಳೆದುಕೊಂಡಾಗ ಸುತ್ತಲೂ ಇರುವ ಕಪ್ಪುಕಲೆಗಳು ಇಲ್ಲವಾಗುತ್ತವೆ. ಕಣ್ಣಿನ ಜ್ಯೋತಿಯ ಹೊಳಪು ಹೆಚ್ಚಾಗುತ್ತದೆ’ ಎಂಬ ವಿವರಗಳಿವೆ.

5ನೇ ಪುಟ ನೋಡಿ



ಜೆಡಿಎಸ್: ಅಭ್ಯರ್ಥಿ ಪಟ್ಟಿ ಬಿಡುಗಡೆ ಇಂದು?

ಕೋಲಾರ: ಮುಂಬರುವ ವಿಧಾನಸಭಾ ಚುನಾವಣೆಗೆ ಸಜ್ಜಾಗಲು ಜೆಡಿಎಸ್ ಪಕ್ಷದ ಮಹತ್ವಾಕಾಂಕ್ಷಿ 'ಪಂಚರತ್ನ' ರಥಯಾತ್ರೆಯು ಜಿಲ್ಲೆಯ ಮುಳಬಾಗಿಲು ನಗರದಲ್ಲಿ ಶುಕ್ರವಾರ ಪುನರಾರಂಭ ವಾಗಲಿದ್ದು, ಬೃಹತ್ ಸಮಾವೇಶ ಆಯೋಜಿಸಲಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿರುವ 100 ಅಭ್ಯರ್ಥಿಗಳ ಪಟ್ಟಿಯನ್ನು ಈ ಸಮಾವೇಶದಲ್ಲಿ ಬಿಡುಗಡೆ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ಸಂಭಾವ್ಯ ಅಭ್ಯರ್ಥಿಗಳೂ ವೇದಿಕೆಯಲ್ಲೇ ಇರುತ್ತಾರೆ ಎಂದು ಮೂಲಗಳು ತಿಳಿಸಿವೆ.

ಟೆಕ್ ಸಮ್ಮಿಟ್: 'ಕರ್ನಾಟಕ ಐಟಿ ರತ್ನ' ಪ್ರಶಸ್ತಿ ಪ್ರದಾನ

ಇನ್ಫೊಸಿಸ್, ಇಂಟೆಲ್‌ಗೆ ಪ್ರಶಸ್ತಿ ಗರಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ವಲಯದಲ್ಲಿ ವಾರ್ಷಿಕ ₹10 ಸಾವಿರ ಕೋಟಿಗೂ ಹೆಚ್ಚಿನ ಮೊತ್ತದ ರಫ್ತು ವಹಿವಾಟು ನಡೆಸುತ್ತಿರುವ 'ಇನ್ಫೊಸಿಸ್' ಮತ್ತು 'ಇಂಟೆಲ್' ಕಂಪನಿಗಳಿಗೆ ಭಾರತೀಯ ಸಾಫ್ಟ್‌ವೇರ್ ಪಾರ್ಕ್‌ಗಳ ಒಕ್ಕೂಟದ ಪ್ರತಿಷ್ಠಿತ 'ಕರ್ನಾಟಕ ಐಟಿ ರತ್ನ' ಪ್ರಶಸ್ತಿಯನ್ನು 'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ ಗುರುವಾರ ಪ್ರದಾನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು, ವಾರ್ಷಿಕ ಕನಿಷ್ಠ ₹2 ಸಾವಿರ ಕೋಟಿಗಳಿಂದ ಗರಿಷ್ಠ ₹10 ಸಾವಿರ ಕೋಟಿವರೆಗಿನ ರಫ್ತು ವಹಿವಾಟು ನಡೆಸಿರುವ ಟಿಸಿಎಸ್, ಬಾಷ್, ಮೈಂಡ್‌ಟ್ರೀ ಸೇರಿ 21 ಕಂಪನಿಗಳಿಗೆ 'ಐಟಿ ಪ್ರೈಡ್ ಆಫ್ ಕರ್ನಾಟಕ' ಪ್ರಶಸ್ತಿಯನ್ನು ನೀಡಿ, ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, 'ರಾಜ್ಯದಿಂದ ಈಗ ವರ್ಷಕ್ಕೆ ಐಟಿ ವಲಯದ ₹6 ಲಕ್ಷ ಕೋಟಿ ಮೊತ್ತದ ರಫ್ತು ವಹಿವಾಟು ನಡೆಸುತ್ತಿದೆ. ಮುಂದಿನ ಮೂರು ವರ್ಷಗಳಲ್ಲಿ ಇದನ್ನು ಇನ್ನೂ ಹೆಚ್ಚಿಸಲಿವೆ' ಎಂದರು.

ಎಸ್‌ಟಿಪಿಐನ ಅರವಿಂದಕುಮಾರ್, ಶೈಲೇಂದ್ರ ತ್ಯಾಗಿ, ಐಟಿ ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಐಟಿ-ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ನಿರ್ದೇಶಕಿ ಮೀನಾ ನಾಗರಾಜ್ ಇದ್ದರು.



ಪ್ರಶಸ್ತಿ ಪುರಸ್ಕೃತರೊಂದಿಗೆ ಐಟಿಬಿಟಿ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ಐಟಿ ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಸಚಿವ ಡಾ. ಸಿ.ಎನ್ ಅಶ್ವತ್ಥನಾರಾಯಣ, ಎಸ್‌ಟಿಪಿಐನ ಅರವಿಂದಕುಮಾರ್ ಮತ್ತು ಶೈಲೇಂದ್ರ ತ್ಯಾಗಿ ಇದ್ದರು.

'ಐಟಿ ಪ್ರೈಡ್ ಆಫ್ ಕರ್ನಾಟಕ'

ಅಕ್ಸೆಂಚರ್, ಅಮೆಜಾನ್ ಡೆವಲಪ್‌ಮೆಂಟ್ ಸೆಂಟರ್, ಡೆಲ್, ಇಂಟಿ ಸರ್ವೀಸಸ್, ಗೋಲ್ಡ್‌ಮನ್ ಸ್ಯಾಕ್ಸ್, ಎಚ್‌ಪಿಎಸ್‌ಐ, ಐಬಿಎಂ, ಜೆ.ಪಿ.ಮಾರ್ಗನ್, ಜುನಿಪರ್ ನೆಟ್‌ವರ್ಕ್, ಮರ್ಸಿಡಿಸ್ ಬೆಂಜ್, ಮೈಕ್ರೋಸಾಫ್ಟ್, ಕ್ವಾಲ್‌ಕಾಂ, ಸ್ಯಾಮ್‌ಸಂಗ್, ಎಸ್‌ಎಪಿ ಲ್ಯಾಬ್ಸ್, ಸ್ಟ್ಯಾಂಡರ್ಡ್ ಚಾರ್ಟರ್ಡ್, ವಿಎಂವೇರ್ ಮತ್ತು ವಿಪ್ರೊ.

ಇತರೆ ಪ್ರಶಸ್ತಿ ಪುರಸ್ಕೃತ ಕಂಪನಿಗಳು

- ವಿಜಯಾ ಸ್ವ, 'ಇನ್ನೋವರ್ ಟೆಕ್ನಾಲಜೀಸ್', ಮಂಗಳೂರು (ವರ್ಷದ ಮಹಿಳಾ ಉದ್ಯಮಿ)
- 'ಇನ್ಫೋಸಿಸ್ ಬಿಪಿಎಂ (ಮಹಿಳಾ ಸಬಲೀಕರಣ)
- ಎಕ್ಸೊಲರ್ ಕ್ಯಾಪಿಟಲ್ (ಉದ್ಯೋಗಿಗಳ ಅತ್ಯಧಿಕ ರಫ್ತು)
- ಟಿಐಎಲ್ ಇಂಡಿಯಾ (ಐಟಿ ಬೆಂಬಲಿತ ಸೇವೆಗಳ ವಲಯದಲ್ಲಿ ಅತ್ಯಧಿಕ ಉದ್ಯೋಗ ಸೃಷ್ಟಿ)
- ಫಿಡೆಲಿಟಿ ಇಂಡಿಯಾ (ಐಟಿ ವಲಯದಲ್ಲಿ ಅತ್ಯಧಿಕ ಉದ್ಯೋಗಸೃಷ್ಟಿ ಮತ್ತು ಮಹಿಳಾ ಸಬಲೀಕರಣ)
- ಎಕ್ಸೆಲ್‌ಸಾಫ್ಟ್ (ಮೈಸೂರು ವಲಯದಲ್ಲಿ ಅತ್ಯುತ್ತಮ ಸಾಧನೆ, ಐಟಿ/ಐಟಿಇಎಸ್)
- ದಿಯಾ ಸಿಸ್ಟಮ್ಸ್ (ಮಂಗಳೂರು ವಲಯದಲ್ಲಿ ಅತ್ಯುತ್ತಮ ಸಾಧನೆ, ಐಟಿ/ಐಟಿಇಎಸ್)
- ಸಂಕಲ್ಪ್ ಸೆಮಿಕಂಡಕ್ಟರ್ (ಹುಬ್ಬಳ್ಳಿ ವಲಯದಲ್ಲಿ ಅತ್ಯುತ್ತಮ ಸಾಧನೆ, ಐಟಿ/ಐಟಿಇಎಸ್)
- ಕೇನ್ಸ್ ಟೆಕ್ನಾಲಜಿ (ಮೈಸೂರು, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ರಫ್ತು)
- ವಿಪ್ರೊ ಜಿಇ ಹೆಲ್ತ್‌ಕೇರ್ (ಬೆಂಗಳೂರು, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ರಫ್ತು)
- ಎಂಫಸಿಸ್ (₹1,000 ಕೋಟಿಗಳಿಂದ ₹2,000 ಕೋಟಿವರೆಗಿನ ರಫ್ತು ವಹಿವಾಟಿನಲ್ಲಿ ಅತ್ಯುತ್ತಮ ಬೆಳವಣಿಗೆ)
- ಕೋಫೋರ್ಜ್ ಲಿಮಿಟೆಡ್ (₹100 ಕೋಟಿಗಳಿಂದ ₹1,000 ಕೋಟಿವರೆಗಿನ ರಫ್ತು ವಹಿವಾಟಿನಲ್ಲಿ ಅತ್ಯುತ್ತಮ ಬೆಳವಣಿಗೆ)
- ಇನ್ನೋವಸರ್ (₹5 ಕೋಟಿಗಳಿಂದ ಗರಿಷ್ಠ 100 ಕೋಟಿಗಳವರೆಗಿನ ರಫ್ತಿನಲ್ಲಿ ಅತ್ಯುತ್ತಮ ಬೆಳವಣಿಗೆ)

'ಹತ್ತು ವರ್ಷಗಳಲ್ಲಿ ಬೆಂಗಳೂರಿನ ಜನಸಂಖ್ಯೆ ದುಪ್ಪಟ್ಟು'



ತ್ರಿಲೋಕಚಂದ್ರ

ಬೆಂಗಳೂರು: 'ಈಗ 1.30 ಕೋಟಿ ಇರುವ ಬೆಂಗಳೂರು ನಗರದ ಜನಸಂಖ್ಯೆಯು ಮುಂದಿನ ಹತ್ತು ವರ್ಷಗಳಲ್ಲಿ 2.50 ಕೋಟಿ ತಲುಪಲಿದೆ. ಅವೈಜ್ಞಾನಿಕ ನಗರೀಕರಣ ಮತ್ತು ಅತಿಕ್ರಮಣಗಳಿಂದಾಗಿ ಆರೋಗ್ಯಕ್ಕೆ ಸಂಬಂಧಿಸಿದ ಸವಾಲುಗಳು ಸಹ ಬೃಹದಾಗಿವೆ. ಇವುಗಳನ್ನು ಬಗೆಹರಿಸಲು ನಿರಂತರ ನಿಗಾ ವ್ಯವಸ್ಥೆ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ತ್ರಿಲೋಕಚಂದ್ರ ಪ್ರತಿಪಾದಿಸಿದರು.

'ಬೆಂಗಳೂರು ಟೆಕ್ ಸಮ್ಮಿಟ್' ಎರಡನೇ ದಿನವಾದ ಗುರುವಾರ ಅವರು 'ಒನ್ ಹೆಲ್ತ್ ಮತ್ತು ಸಾಂಕ್ರಾಮಿಕಗಳ ತಡೆ' ಎಂಬ ಗೋಷ್ಠಿಯಲ್ಲಿ ಮಾತನಾಡಿದರು.

'ಜನರು ವಿವಿಧ ಕಾರಣಗಳಿಂದ ನಗರಗಳತ್ತ ವಲಸೆ ಬರುತ್ತಿದ್ದಾರೆ. ಆದರೆ, ನಮ್ಮ ನಗರಗಳ ಧಾರಣಾಶಕ್ತಿ ಬರಿದಾಗಿದೆ. ಬೆಂಗಳೂರಿನಂತಹ ಬೃಹತ್ ನಗರಗಳಲ್ಲಿ ಜನರ ಆರೋಗ್ಯ ಕಾಪಾಡಲು ಸರಿಯಾದ ನೀತಿ ಮತ್ತು ಆಡಳಿತ ಪ್ರಮುಖವಾಗಿವೆ' ಎಂದು ಎಚ್ಚರಿಕೆ ನೀಡಿದರು.

'ಆರೋಗ್ಯ ಎಂದರೆ ಕೇವಲ ಮನುಷ್ಯ ಕೇಂದ್ರಿತವಲ್ಲ. ಇದರಲ್ಲಿ ಪರಿಸರ, ಪ್ರಾಣಿ ಮತ್ತು ಅರಣ್ಯಗಳನ್ನು ಸಹ ಒಳಗೊಳ್ಳಬೇಕು. ಏಕೆಂದರೆ, ಇತ್ತೀಚಿನ ವರ್ಷಗಳಲ್ಲಿ ಡೆಂಗೆ, ಚಿಕೂನ್‌ಗುನ್ಯ ಸೇರಿದಂತೆ ಹಲವು ಪ್ರಾಣಿಜನ್ಯ ರೋಗಗಳನ್ನು ಎದುರಿಸಿದ್ದೇವೆ. ಹೀಗಾಗಿ, ಪ್ರಾಣಿಗಳಿಂದ ಹಬ್ಬುವ ರೋಗಗಳ ಪ್ರಮಾಣ ಶೇ 75ರಷ್ಟು ಇರುವುದು ಕಳವಳಕಾರಿಯಾಗಿದೆ' ಎಂದು ಅವರು ವಿವರಿಸಿದರು.

'ನಗರಗಳಲ್ಲಿ ತ್ಯಾಜ್ಯ, ಮಾಲಿನ್ಯ, ಧೂಳು, ಇಂಗಾಲದ ಕಾರುವಿಕೆ ಎಲ್ಲವೂ ಅಂಕೆ ಮೀರಿವೆ. ಇವುಗಳನ್ನು ಬಗೆಹರಿಸಲು ಎಷ್ಟೇ ಪ್ರಯತ್ನ ಪಟ್ಟರೂ ಅವು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಇವುಗಳನ್ನು ಬಗೆಹರಿಸಲು ವಾರ್ಡ್ ಮತ್ತು ಸಮುದಾಯಗಳ ಮಟ್ಟದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ' ಎಂದು ಹೇಳಿದರು.

ಇದೇ ಗೋಷ್ಠಿಯಲ್ಲಿ ಮಾತನಾಡಿದ ಡಾ.ಫರಾ ಇಷ್ತಿಯಾಕ್ ಅವರು, 'ನಗರೀಕರಣದ ಸ್ವರೂಪವೇ ಹಲವು ಸಮಸ್ಯೆಗಳ ಮೂಲವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಆಧಾರದ ಮೇಲೆ ನಗರೀಕರಣದ ಸ್ವರೂಪವನ್ನೇ ಆಮೂಲಾಗ್ರವಾಗಿ ಬದಲಿಸಿಕೊಳ್ಳಬೇಕಾದ ತುರ್ತು ನಮ್ಮ ಎದುರು ಇದೆ. ಮುಖ್ಯವಾಗಿ ಎಲ್ಲ ನಗರಗಳಲ್ಲೂ ಅಲ್ಲಿರುವ ಕೆರೆಕಟ್ಟೆ ಮತ್ತು ಇನ್ನಿತರ ನೀರಿನ ಮೂಲಗಳನ್ನು ಸುಸ್ಥಿತಿಯಲ್ಲಿ ಸಂರಕ್ಷಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಗೋಷ್ಠಿಯಲ್ಲಿ ಡಾ.ಪರಮೇಶ್, ಡಾ.ವರ್ಷಾ ಶ್ರೀಧರ್ ಮತ್ತು ಡಾ.ಸಿಂಧೂರ ಗಣಪತಿ ಅವರು ಇದ್ದರು.

ರಾಜಧಾನಿಯಲ್ಲಿ ಸೆಮಿಕಂಡಕ್ಟರ್ ಸಂಶೋಧನಾ ಕೇಂದ್ರ: ಸಚಿವ ರಾಜೀವ್ ಚಂದ್ರಶೇಖರ್

ಬೆಂಗಳೂರು: 'ದೇಶದ ಐಟಿ ರಾಜಧಾನಿಯಾಗಿರುವ ಬೆಂಗಳೂರಿನಲ್ಲಿ ಎರಡನೇ ಸೆಮಿಕಂಡಕ್ಟರ್ ಸಂಶೋಧನಾ ಕೇಂದ್ರ ಆರಂಭಿಸಲಾಗುವುದು' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಗುರುವಾರ ಮಾತನಾಡಿದ ಅವರು, 'ಭಾರತವು 2024ರ ಹೊತ್ತಿಗೆ ಸೆಮಿಕಂಡಕ್ಟರ್ ಉತ್ಪಾದನಾ ಕ್ಷೇತ್ರಕ್ಕೆ ಧುಮುಕಲಿದ್ದು, ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ 2025ರ ಹೊತ್ತಿಗೆ ₹300 ಶತಕೋಟಿ ಡಾಲರ್ ವಹಿವಾಟು ನಡೆಸುವ ಮಟ್ಟಕ್ಕೆ ಬೆಳೆಯುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು.

'ಮುಂದಿನ ಎರಡು ವರ್ಷಗಳಲ್ಲಿ ಸೆಮಿಕಂಡಕ್ಟರ್ ವಿನ್ಯಾಸ ಕ್ಷೇತ್ರದಲ್ಲಿ 100 ನವೋದ್ಯಮಗಳನ್ನು ಬೆಳೆಸಲು ₹20 ಸಾವಿರ ಕೋಟಿ ವಿನಿಯೋಗಿಸಲಾಗುವುದು. ಇದಕ್ಕೆ ರಾಜ್ಯ ಸರ್ಕಾರಗಳು ಕೂಡ ಸಮಾನ ಕೊಡುಗೆ ನೀಡಲಿವೆ' ಎಂದರು. 'ಜಗತ್ತಿನಲ್ಲಿ ಡಿಜಿಟಲ್ ಉತ್ಪನ್ನ ಮತ್ತು ಸೇವೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಭಾರತವು ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಲಿದೆ. ಈಗ ಚೀನಾದ ಮೇಲೆ ಅವಲಂಬನೆಯಾಗುವ ಅನಿವಾರ್ಯ ಇಲ್ಲ' ಎಂದು ಪ್ರತಿಪಾದಿಸಿದರು.

'ದೇಶದಲ್ಲಿ ಎಂಟು ವರ್ಷಗಳ ಹಿಂದೆ ₹12 ಶತಕೋಟಿ ಡಾಲರ್ ಮೊತ್ತದ ಎಲೆಕ್ಟ್ರಾನಿಕ್ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಈಗ ವರ್ಷಕ್ಕೆ ₹70 ಸಾವಿರ ಕೋಟಿ ಮೊತ್ತದ ಎಲೆಕ್ಟ್ರಾನಿಕ್ ವಸ್ತುಗಳ ರಫ್ತು ವಹಿವಾಟು ನಡೆಸಲಾಗುತ್ತಿದೆ. ದೇಶದಲ್ಲಿ ಬಳಕೆಯಾಗುತ್ತಿರುವ ಮೊಬೈಲ್‌ಗಳಲ್ಲಿ ಶೇ 97ರಷ್ಟು ವಸ್ತುಗಳು ಈಗ ಭಾರತದಲ್ಲೇ ತಯಾರಾಗುತ್ತಿವೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

'ಮತದಾರರ ಮಾಹಿತಿ ಸಂಗ್ರಹ: ಸಮ್ಮಿಶ್ರ ಸರ್ಕಾರವೇ ಹೊಣೆ'

ಬೆಂಗಳೂರು: ಮತದಾರರ ಮಾಹಿತಿ ಸಂಗ್ರಹ ಮತ್ತು ಮತದಾರರ ಜಾಗೃತಿ ಕೆಲಸವನ್ನು 'ಚಿಲುಮೆ' ಸಂಸ್ಥೆಗೆ 2018 ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಕೊಟ್ಟಿದ್ದು; ಈ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜ್ಯದ ಜನತೆಗೆ ವಿವರಣೆ ನೀಡಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಆಗ್ರಹಿಸಿದ್ದಾರೆ.

ಆಗ ಇವರಿಬ್ಬರೂ ಮಾತನಾಡದೇ ಬಾಯಿ ಮುಚ್ಚಿ ಕುಳಿತಿದ್ದು ಏಕೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಟೆಂಡರ್ ನಡೆದಿದ್ದರಿಂದ ರಾಜೀನಾಮೆ ಕೊಡಬೇಕಾದವರು ಯಾರು? ಅಂದಿನ ಸರ್ಕಾರದ ಭಾಗವಾಗಿದ್ದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೈತಿಕ ಜವಾಬ್ದಾರಿಯನ್ನು ಹೊರಬೇಕು. ಅಷ್ಟಕ್ಕೂ ಇದರಲ್ಲೇನೂ ಅವ್ಯವಹಾರವಾಗಿಲ್ಲ. ಬಿಎಲ್‌ಒಗಳಿಗೆ ಐಡಿ ಕೊಟ್ಟ ವಿಚಾರ ಗೊತ್ತಾದೊಡನೆ ಚಿಲುಮೆ ಸಂಸ್ಥೆಗೆ ಕೊಟ್ಟಿದ್ದ ಆದೇಶವನ್ನು ಬಿಬಿಎಂಪಿ ಹಿಂದಕ್ಕೆ ಪಡೆದಿದೆ ಎಂದರು.

2018 ರಲ್ಲಿ ಒಂದು ದಿನಕ್ಕೆ ₹5,000 ದಂತೆ ಈ ಸಂಸ್ಥೆಗೆ ಕೊಟ್ಟಿದ್ದಾರೆ. ಬಿಬಿಎಂಪಿ ಕಡೆಯಿಂದ ಲ್ಯಾಪ್‌ಟಾಪ್ ಕೊಟ್ಟಿದ್ದು, ಜಾಗೃತಿ ಮೂಡಿಸಲು ಬೇಕಿದ್ದ ಕರಪತ್ರಗಳು, ಬ್ಯಾನರ್‌ಗಳು, ಶಾಮಿಯಾನ ಮೈಕ್ ವ್ಯವಸ್ಥೆಗೆ ಸ್ವಲ್ಪ ಹಣ ಖರ್ಚು ಮಾಡಿದ್ದಾರೆ. ಇದರಲ್ಲಿ ಅವ್ಯವಹಾರ ಆಗಿದ್ದರೆ, ನ್ಯೂನತೆ ಇದ್ದರೆ ಪೊಲೀಸ್ ಕಮಿಷನರ್‌ಗೆ ದೂರು ಕೊಡಲಾಗುತ್ತದೆ. ಅಗತ್ಯ ಕ್ರಮ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ ಎಂದು ವಿವರಿಸಿದರು.

ಪ್ರತಿ ವಿಷಯಕ್ಕೂ ಮುಖ್ಯಮಂತ್ರಿ ರಾಜೀನಾಮೆ ಕೇಳುವುದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಬಾಲಿಶ ವರ್ತನೆ. ಇದು ಕಾಂಗ್ರೆಸ್ ಪಕ್ಷದ ಟೂಲ್‌ಕಿಟ್‌ನ ಒಂದು ಭಾಗ ಎಂದು ಹರಿಹಾಯ್ದರು. ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರೂ ಮಾತನಾಡಿದರು.



'ನಂದಿ' ಪ್ರವೇಶ; 5.30ಕ್ಕೆ ಅವಕಾಶ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿಗಿರಿಧಾಮಕ್ಕೆ ಪ್ರವಾಸಿಗರು ಬೆಳಿಗ್ಗೆ 5.30ಕ್ಕೆ ಪ್ರವೇಶಿಸಲು ಸಮಯ ನಿಗದಿಗೊಳಿಸುವಂತೆ ಜಿಲ್ಲಾ ಪ್ರವಾಸೋದ್ಯಮ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದಾರೆ.

ಇಲ್ಲಿಯವರೆಗೂ ಬೆಳಿಗ್ಗೆ 6ಕ್ಕೆ ಗಿರಿಧಾಮದ ಪ್ರವೇಶಕ್ಕೆ ಅವಕಾಶವಿತ್ತು.

ಸರ್ಕಾರದ ಉಪಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗಿರಿಧಾಮದ ಅಭಿವೃದ್ಧಿ ವಿಚಾರವಾಗಿ ಚರ್ಚಿಸಲಾಗಿದೆ. ಬಹುತೇಕ ಪ್ರವಾಸಿಗರು ಗಿರಿಧಾಮಕ್ಕೆ ಸೂರ್ಯೋದಯ ವೀಕ್ಷಣೆಗೆ ಬರುವರು. ಈ ಪ್ರಯುಕ್ತ ಸಮಯವನ್ನು 5.30ಕ್ಕೆ ನಿಗದಿಗೊಳಿಸಿ ಸಂಬಂಧಿಸಿದ ಪೊಲೀಸ್ ಅಧಿಕಾರಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬಿಲ್ ಪಾವತಿಸದಿದ್ದರೆ ವಿದ್ಯುತ್ ಸಂಪರ್ಕ ಕಡಿತ!

ಬೆಂಗಳೂರು: ಸತತ ಮೂರು ತಿಂಗಳು ಕಾಲ ಬಿಲ್ ಪಾವತಿಸದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಬೆಸ್ಕಾಂ ಎಚ್ಚರಿಕೆ ನೀಡಿದೆ.

'ಗ್ರಾಹಕರು ಸತತ ಮೂರು ತಿಂಗಳುಗಳ ಕಾಲ ಬಿಲ್ ಪಾವತಿಸದಿದ್ದಲ್ಲಿ, ವಿದ್ಯುತ್ ಸಂಪರ್ಕ ಒಪ್ಪಂದ ರದ್ದುಗೊಳಿಸಲು ಬೆಸ್ಕಾಂ ಕ್ರಮ ಕೈಗೊಳ್ಳಲಿದೆ. ಒಪ್ಪಂದ ರದ್ದತಿಯ ನಂತರ ವಿದ್ಯುತ್ ಸಂಪರ್ಕ ಪಡೆಯಲು ಗ್ರಾಹಕರು ಹೊಸ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ' ಎಂದು ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಟ್ವೀಟ್ ಮಾಡಿದ್ದಾರೆ.

'ಜತೆಗೆ ಬಾಕಿ ಹಣವನ್ನು ಸಹ ವಸೂಲಿ ಮಾಡಲು ಕ್ರಮಕೈಗೊಳ್ಳಲಾಗುವುದು. ಹೀಗಾಗಿ, ವಿದ್ಯುತ್ ಸಂಪರ್ಕ ಕಡಿತಗೊಳಿಸುವುದನ್ನು ತಪ್ಪಿಸಲು ಗ್ರಾಹಕರು ತಕ್ಷಣವೇ ಬಾಕಿ ಹಣ ಪಾವತಿಸಬೇಕು' ಎಂದು ಕೋರಿದ್ದಾರೆ.

21ಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಕೊಳವೆ ಮಾರ್ಗಗಳ ಬದಲಾವಣೆಯ ಕಾಮಗಾರಿಯನ್ನು ಕೈಗೊಂಡಿರುವುದರಿಂದ ನ.21ರಂದು ವಿವಿಧೆಡೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ. ಅಂದು ಬೆಳಿಗ್ಗೆ 6ರಿಂದ ಸಂಜೆ 6 ರವರೆಗೆ ನೀರು ಪೂರೈಕೆ ವ್ಯತ್ಯಯವಾಗಲಿದೆ.

ಸ್ಥಳಗಳು: ಜಂಬೂಸವಾರಿ ದಿಣ್ಣೆ, ಪುಟ್ಟೇನಹಳ್ಳಿ, ಕೋಣನಕುಂಟೆ ಕ್ರಾಸ್, ಜರಗನಹಳ್ಳಿ, ಜೆ.ಪಿ. ನಗರ 4,5, 6,7ನೇ ಹಂತ, ಚುಂಚಕಟ್ಟೆ ಮುಖ್ಯ ರಸ್ತೆ, ದೊರೆಸಾನಿಪಾಳ್ಯ, ಬನ್ನೇರುಘಟ್ಟ ಮುಖ್ಯ ರಸ್ತೆ, ಜಯದೇವ ಆಸ್ಪತ್ರೆ, ಬಿಳೇಕಹಳ್ಳಿ, ಕೋಡಿಚಿಕ್ಕನಹಳ್ಳಿ, ಬೊಮ್ಮನಹಳ್ಳಿ, ಹೊಂಗಸಂದ್ರ, ಮಂಗಮ್ಮನಪಾಳ್ಯ, ಹೊಸಪಾಳ್ಯ, 3ನೇ ಬ್ಲಾಕ್ ಕೋರಮಂಗಳ, ಶ್ರೀನಿವಾಗಿಲು, ಬಿಸ್ಮಿಲ್ಲಾ ನಗರ, ನಾರಾಯಣಪ್ಪ ಗಾರ್ಡನ್, ಬಾಲಾಜಿ ನಗರ, ಭವಾನಿ ನಗರ, ಎನ್.ಎಸ್. ಪಾಳ್ಯ ಸುತ್ತಮುತ್ತಲಿನ ಪ್ರದೇಶಗಳು.

ಕುಸಿದ ತಾಪಮಾನ: ತೀವ್ರಗೊಂಡ ಚಳಿ

ಬೆಂಗಳೂರು: ನಗರದಲ್ಲಿ ಮಳೆ ತಗ್ಗಿದ ಬೆನ್ನಲ್ಲಿಯೇ ತಾಪಮಾನ ದಿನೇ ದಿನೇ ಕುಸಿತ ಕಾಣುತ್ತಿದೆ. ಇದರಿಂದಾಗಿ ಚಳಿಯ ತೀವ್ರತೆಯೂ ಹೆಚ್ಚಾಗುತ್ತಿದೆ.

ವಾರದಿಂದ ತಂಪಾದ ವಾತಾವರಣ ಕಂಡುಬರುತ್ತಿದ್ದು, ರಾತ್ರಿ ಹಾಗೂ ಮುಂಜಾನೆಯ ಅವಧಿಯಲ್ಲಿ ಚಳಿ ಹೆಚ್ಚಳವಾಗುತ್ತಿದೆ. ಮೋಡ ಕವಿದ ವಾತಾವರಣದ ಸಹಿತ ಆಗಾಗ ಸುರಿಯುತ್ತಿರುವ ಜಿಟಿಜಿಟಿ ಮಳೆಯಿಂದಾಗಿ ತಾಪಮಾನ ಕುಸಿತಗೊಳ್ಳುತ್ತಿದೆ. ವಾರದಿಂದ ಗರಿಷ್ಠ 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 16 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ.

ಈ ವಾರ ಹಲವು ಸ್ಥಳಗಳಲ್ಲಿ ಕನಿಷ್ಠ ತಾಪಮಾನ ಪ್ರಮಾಣವೂ ಕ್ಷೀಣಿಸಿದೆ. ರಾತ್ರಿ ಸಮಯದಲ್ಲಿ ತಾಪಮಾನ ಮತ್ತಷ್ಟು ಕುಸಿದು, ಮುಂಜಾನೆ ದಟ್ಟವಾದ ಮಂಜು ಆವರಿಸುತ್ತಿದೆ.

ಬೊಮ್ಮನಹಳ್ಳಿ ವಲಯದಲ್ಲಿ ಗರಿಷ್ಠ 30 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 14 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ. ಮಹದೇವಪುರ ವಲಯದಲ್ಲಿ 28ರಿಂದ 17 ಡಿಗ್ರಿ ಸೆಲ್ಸಿಯಸ್, ಪಶ್ಚಿಮ ವಲಯದಲ್ಲಿ 28ರಿಂದ 16 ಡಿಗ್ರಿ ಸೆಲ್ಸಿಯಸ್, ದಾಸರಹಳ್ಳಿ ವಲಯದಲ್ಲಿ 28ರಿಂದ 17 ಡಿಗ್ರಿ ಸೆಲ್ಸಿಯಸ್ ತಾಪಮಾನ ವರದಿಯಾಗುತ್ತಿದೆ.

ರಾಜರಾಜೇಶ್ವರಿ ನಗರ ವಲಯದಲ್ಲಿ 28ರಿಂದ 16 ಡಿಗ್ರಿ ಸೆಲ್ಸಿಯಸ್, ಪೂರ್ವ ವಲಯದಲ್ಲಿ 29ರಿಂದ 17 ಡಿಗ್ರಿ ಸೆಲ್ಸಿಯಸ್, ಯಲಹಂಕ ವಲಯದಲ್ಲಿ 27ರಿಂದ 16 ಡಿಗ್ರಿ ಸೆಲ್ಸಿಯಸ್ ಹಾಗೂ ದಕ್ಷಿಣ ವಲಯದಲ್ಲಿ 28ರಿಂದ 16 ಡಿಗ್ರಿ ಸೆಲ್ಸಿಯಸ್‌ಗೆ ತಾಪಮಾನ ಇಳಿಕೆಯಾಗುತ್ತಿದೆ.


ಯುವ ಕವಿಗಳಿಂದ ಕವನಗಳ ಆಹ್ವಾನ

ಬೆಂಗಳೂರು: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘವು 'ಎಚ್‌ಎಎಲ್ ಕಾವ್ಯ ಸಂಭ್ರಮ-2022' ಶೀರ್ಷಿಕೆಯಡಿ ರಾಜ್ಯ ಮಟ್ಟದ ಕವಿ-ಕಾವ್ಯ ಸಮಾಗಮ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದರ ಭಾಗವಾಗಿ ಸಂಘವು ಯುವ ಕವಿಗಳಿಂದ ಕವನಗಳನ್ನು ಆಹ್ವಾನಿಸಿದೆ.

ಕವನದ ವಿಷಯ ಹಾಗೂ ಶೀರ್ಷಿಕೆ ಕವಿಗಳ ಸ್ವ-ಇಚ್ಛೆಯಾಗಿರುತ್ತದೆ. ಆಯ್ಕೆಯಾದ ಕವಿಗಳಿಗೆ ಪ್ರಶಂಸನಾ ಪತ್ರ, ₹ 1 ಸಾವಿರ ಹಾಗೂ ಕವನ ಸಂಕಲನದ ಪ್ರತಿಯನ್ನು ಕೊಡಲಾಗುವುದು. ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಆಯ್ಕೆಯಾದ ಕವಿಗಳಿಗೆ ತಮ್ಮ ಕವನವನ್ನು ಬೆಂಗಳೂರಿನ ಎಚ್‌ಎಎಲ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಾಚನ ಮಾಡಲು ಅವಕಾಶ ನೀಡಲಾಗುತ್ತದೆ. ಕವಿಗಳ ಕವನ ಸಂಕಲನವನ್ನು ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ರಾಮಸ್ವಾಮಿ ಆರ್. ತಿಳಿಸಿದ್ದಾರೆ.

ಭಾಗವಹಿಸಲು ಇಚ್ಛಿಸುವ ಯುವ ಕವಿಗಳು ತಮ್ಮ ಇತ್ತೀಚಿನ ಎರಡು ಭಾವಚಿತ್ರಗಳ ಜತೆಗೆ ಸ್ವ ವಿವರ, ಎರಡು ಸ್ವರಚಿತ ಕವನಗಳನ್ನು halksrmkks2022@gmail.comಗೆ ಇದೇ 30ರೊಳಗೆ ಕಳುಹಿಸಬೇಕು. ಆಯ್ಕೆಯಾದ ಕವಿಗಳಿಗೆ ಕಾರ್ಯಕ್ರಮದ ದಿನಾಂಕ, ಸ್ಥಳ ಮತ್ತು ಸಮಯವನ್ನು ತಿಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು



'ಸರಸ ವಿರಸ ಸಮರಸ' ಕಿರುನಾಟಕ ಪ್ರದರ್ಶನ: ಆಯೋಜನೆ: ಅಂತರಂಗ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ಇಕ್ಕೇರಿ ಮೊಹಮ್ಮದ್ ಮುದಸಿರ್, ಅತಿಥಿಗಳು: ಸುರೇಶ ಎನ್., ಅಧ್ಯಕ್ಷತೆ: ಕೆ.ವಿ. ಮುನಿಸ್ವಾಮಿ, ಆಯೋಜನೆ: ವೆಂಕಟೇಶ್ವರ ಎಜುಕೇಷನಲ್ ಇನ್‌ಸ್ಟಿಟ್ಯೂಟ್ಸ್, ಸ್ಥಳ: ಐಟಿಐ ಅಂಬೇಡ್ಕರ್ ಸ್ಟೇಡಿಯಂ, ಕೆ. ಆರ್. ಪುರ, ಬೆಳಿಗ್ಗೆ 9

ಸುವರ್ಣ ಮಹೋತ್ಸವ ಸಮಾರಂಭ: ಸಾನ್ನಿಧ್ಯ: ಸ್ವಾತ್ಮಾರಾಮಾನಂದ ಸ್ವಾಮೀಜಿ, ಅಧ್ಯಕ್ಷತೆ: ಜೆಸ್ಸಿ ಥಾಮಸ್, ಸುನಂದ ಪ್ರಭಾಕರ್ ಜಾಧವ, ಆಯೋಜನೆ: ಬಿ.ಎನ್.ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.30

ಮೌಲ್ಯಾಧಾರಿತ ಶಿಕ್ಷಣದ ಕುರಿತು ಉಪನ್ಯಾಸ: ಸ್ವಾಮಿ ಸರ್ವಪ್ರಿಯಾನಂದ ಮಹಾರಾಜ, ಆಯೋಜನೆ ಮತ್ತು ಸ್ಥಳ: ಆರ್.ವಿ. ವಿಶ್ವವಿದ್ಯಾಲಯ, ವಿದ್ಯಾನಿಕೇತನ, ಮೈಸೂರು ರಸ್ತೆ, ಬೆಳಿಗ್ಗೆ 10

ಕರ್ನಾಟಕ ರಾಜ್ಯೋತ್ಸವ ಆಚರಣೆ: ಅತಿಥಿಗಳು: ಎಚ್.ಎಸ್. ವೆಂಕಟೇಶಮೂರ್ತಿ, ವೆಂಕಟೇಶ್ ಕೆ.ವೈ., ಆಯೋಜನೆ ಮತ್ತು ಸ್ಥಳ: ವಿ.ಎಂ ವೇರ್ ಸಾಫ್ಟ್‌ವೇರ್ ಇಂಡಿಯಾ, ಕಲ್ಯಾಣಿ ವಿಸ್ತಾ, ಜೆ.ಪಿ. ನಗರ 4ನೇ ಹಂತ, ಬೆಳಿಗ್ಗೆ 11

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ-8: ಅತಿಥಿಗಳು: ಮನು ಬಳಿಗಾರ್, ವ.ಚ. ಚನ್ನೇಗೌಡ, ಅಧ್ಯಕ್ಷತೆ: ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿಎಂಶ್ರೀ ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಕನ್ನಡ ರಾಜ್ಯೋತ್ಸವ ಆಚರಣೆ: ಅಧ್ಯಕ್ಷತೆ: ಎಂ.ಎಸ್. ಶ್ರೀಕರ್, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಎನ್. ಎಸ್. ಶ್ರೀಧರಮೂರ್ತಿ, ಆಯೋಜನೆ: ಶಕ್ತಿವಾಹಿನಿ ಕನ್ನಡ ಬಳಗ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಮಧ್ಯಾಹ್ನ 1

ಕರ್ನಾಟಕ ರಾಜ್ಯೋತ್ಸವ ಆಚರಣೆ: ಅಧ್ಯಕ್ಷತೆ: ದಿಲೀಪ್ ವೈ., ಅತಿಥಿಗಳು: ಗೋಪಾಲನ್ ಜಗದೀಶ್, ಆಯೋಜನೆ ಸ್ಥಳ: ಎಡಿಇ ಸಾಂಸ್ಕೃತಿಕ ಸಂಘ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ವೇದಿಕೆ, ಮಧ್ಯಾಹ್ನ, 1.30

ಮೆಲೋಡಿ ಕಿಂಗ್ ರಾಜನ್-ನಾಗೇಂದ್ರ ಅವರ ಸುಮಧುರ ಗೀತೆಗಳ ರಸಸಂಜೆ: ಅತಿಥಿಗಳು: ಭಾರ್ಗವ, ಗಿರಿಜಾ ಲೋಕೇಶ್, ಸನ್ಮಾನಿತರು: ಜಯಲಕ್ಷ್ಮಿ ನಾಗೇಂದ್ರ, ಅತಿಥಿಗಳು: ಡಿ.ಕೆ. ಬಾಬು, ಮಂಜುನಾಥ್‌ಸ್ವಾಮಿ ಎಲ್., ಕೆ. ಗುರುರಾಜ್, ಗಾಯತ್ರಿ ಮೋಹನ್, ಗೋಪಿ ಸಂಗೀತ ಶ್ರೀಕಿಶನ್, ವಿನಾಯಕ್ ಭಟ್, ಪಿ. ರಾಜೇಂದ್ರ, ಆಯೋಜನೆ: ಶೃತಿ ಲಯ ಸಂಗೀತ ಕಲ್ಚರಲ್, ಅಕಾಡೆಮಿ, ಸ್ಥಳ: ಶುಕ್ರ ಸಭಾಂಗಣ, ಮಲ್ಲೇಶ್ವರ, ಸಂಜೆ 5

'ಸಿಹ್ರಾ' ವಾರ್ಷಿಕ ಸಮ್ಮೇಳನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಜಿ. ಕೃಷ್ಣ ರೆಡ್ಡಿ, ಆನಂದ ಸಿಂಗ್, ಮತಿವೆಂಥನ್, ಆರ್.ಕೆ. ರೋಜಾ, ವಿ. ಶ್ರೀನಿವಾಸ್‌ಗೌಡ, ಕೆ. ಲಕ್ಷ್ಮೀನಾರಾಯಣನ್, ಆಯೋಜನೆ: ಸೌತ್ ಇಂಡಿಯಾ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್, ಸ್ಥಳ: ಶಾಂಗ್ರಿಲಾ ಹೋಟೆಲ್, ಅರಮನೆ ರಸ್ತೆ, ಸಂಜೆ 5

ವಿವೇಕ ಶಾನಭಾಗ್ ಅವರ 'ಇಲ್ಲಿರುವುದು ಸುಮ್ಮನೆ' ನಾಟಕ ಪ್ರದರ್ಶನ: ಆಯೋಜನೆ: ಲೋಕಚರಿತ, ಸ್ಥಳ: ರಂಗಶಂಕರ, ಸಂಜೆ 7.30

ಅಪಘಾತ: ಯೋಧ ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಯೋಧ ಚೇತನ್ ಗುರುವಾರ ಮೃತಪಟ್ಟಿದ್ದಾರೆ.

ಕೋಲಾರ ಜಿಲ್ಲೆ ಬಂಗಾರಪೇಟೆಯ ಚೇತನ್ (24) ಅವರು ನ.7ರಂದು ಬೈಕ್‌ನಲ್ಲಿ ತೆರಳುತ್ತಿದ್ದಾಗ ಅಪಘಾತ ಸಂಭವಿಸಿತ್ತು.

ಚೇತನ್ ಅವರು ಸ್ನೇಹಿತನ ಜೊತೆಗೆ ನಾಗರಬಾವಿ ಹೊರವಲಯದ ರಿಂಗ್ ರಸ್ತೆಯಲ್ಲಿ ಸುಮನಹಳ್ಳಿ ಕಡೆಯಿಂದ ಲಗ್ಗೆರೆ ಕಡೆಗೆ ತೆರಳುತ್ತಿದ್ದಾಗ ಬಿ.ಎಂ. ಟಿ.ಸಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿತ್ತು.

‘ಸಸ್ಯಕಾಶಿ..ಸಮಸ್ಯೆಗಳ ರಾಶಿ’ ಪ್ರತಿಕ್ರಿಯೆಗಳು

ಸಸ್ಯಕಾಶಿಯಲ್ಲಿ ಸಮಸ್ಯೆಗಳ ರಾಶಿ ಇರುವುದಕ್ಕೆ ಜನರಿಂದ ಬಂದಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ತೋಟಗಾರಿಕಾ ಸಚಿವ ಮುನಿರತ್ನ ಅವರು ಅಲ್ಲಿ ‘ಜನಸ್ಪಂದನ’ ನಡೆಸಬೇಕೆಂಬ ವಿನಂತಿಗೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಜನರಿಗೆ ಅಹವಾಲು ಹೇಳಿಕೊಂಡು, ಅಲ್ಲಿಯೇ ಪರಿಹಾರ ಪಡೆಯುವ ಅವಕಾಶವೊಂದನ್ನು ತಪ್ಪಿಸಿದಂತೆ ಆಗಿದೆ. ಅಂತಹ ಜನದನಿಗೆ ‘ಪ್ರಜಾವಾಣಿ’ ಈ ಮೂಲಕ ವೇದಿಕೆ ಒದಗಿಸಿದೆ.

ಖಾಸಗಿ ವ್ಯಾಪಾರಸ್ಥರ ಹಾವಳಿ


ರವಿಚಂದ್ರ

ಲಾಲ್‌ಬಾಗ್‌ನಲ್ಲಿ ವಾಣಿಜ್ಯ ಉದ್ದೇಶದಿಂದ ಯಾವುದೇ ರೀತಿಯ ಚಟುವಟಿಕೆಗಳನ್ನು ಮಾಡಲು ಬಿಡುವುದಿಲ್ಲ. ಮಳೆಯಿಂದ ಪಾದಚಾರಿಮಾರ್ಗ ಕಿತ್ತುಹೋಗಿದೆ. ಅದಕ್ಕೆ ಕೆಂಪು ಮಣ್ಣ ಹಾಕಿಸಬೇಕು ಎಂದು ಲಾಲ್‌ಬಾಗ್ ನಡಿಗೆದಾರರ ಸಂಘದ ಅಧ್ಯಕ್ಷ ಸಿ.ಕೆ. ರವಿಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಲಾಲ್‌ಬಾಗ್ ಕೆರೆಯಲ್ಲಿ ಬೋಟಿಂಗ್ ಮಾಡಲು ಖಾಸಗಿ ಸಂಸ್ಥೆಗಳಿಗೆ ಅವಕಾಶ ನೀಡಬಾರದು. ಅದರಿಂದ ಹಕ್ಕಿಗಳಿಗೆ ಸಮಸ್ಯೆಯಾಗುತ್ತಿದೆ. ಮಳೆ ಬಂದಾಗ ನಿಂತುಕೊಳ್ಳಲು ಪರಿಸರಸ್ನೇಹಿ ಕುಟೀರಗಳನ್ನು ನಿರ್ಮಿಸಬೇಕು. ಮತ್ಸ್ಯಾಲಯವನ್ನು ಅಭಿವೃದ್ಧಿಗೊಳಿಸಬೇಕು. ಲಾಲ್‌ಬಾಗ್ ಈಗ ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕು ಎಂದರು.



ಪ್ರಜಾವಾಣಿ @75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256



ಲಾಲ್‌ಬಾಗ್‌ನಲ್ಲಿ ಸರಿಯಾದ ಅಹಾರ ದೊರೆಯುತ್ತಿಲ್ಲ. ಖಾಸಗಿ ವ್ಯಾಪಾರಸ್ಥರ ಹಾವಳಿ ಹೆಚ್ಚಾಗಿದೆ. ಯವುದೇ ತಿಂಡಿ ತಿನಿಸುಗಳನ್ನು ತೆಗೆದುಕೊಂಡರೂ ದುಪ್ಪಟ್ಟು ಹಣ ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರವೇ ಒಂದು ಉತ್ತಮವಾದ ಹೋಟೆಲ್ ತೆರೆದು ರಿಯಾಯ್ತಿ ದರದಲ್ಲಿ ಮಾರಾಟ ಮಾಡಿದರೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆ.

ಶಿಲ್ಪಾ ಲಕ್ಷ್ಮೀನಾರಾಯಣ, ವಿಕಾಸನಗರ, ನಾಗಸಂದ್ರ



ಕಬ್ಬನ್ ಪಾರ್ಕ್‌ಗೆ ಹೋಲಿಸಿದರೆ ಲಾಲ್‌ಬಾಗ್‌ನಲ್ಲಿ ಯಾವುದೇ ರೀತಿಯ ಸಮಸ್ಯೆಯಿಲ್ಲ. ಸತತವಾಗಿ ಗಸ್ತು ತಿರುಗುವ ಕಾವಲುಗಾರರು, ವಿದ್ಯುದ್ದೀಪದ ವ್ಯವಸ್ಥೆ, ಸ್ವಚ್ಛತೆ, ಶೌಚಾಲಯ ಸಿಬ್ಬಂದಿ, ಇಂಗುಗುಂಡಿಗಳು, ಕೆರೆಯ ಸ್ವಚ್ಛತೆ ಎಲ್ಲವೂ ಸಮರ್ಪಕವಾಗಿವೆ. ವ್ಯಾಯಾಮ ಮಾಡಲು ಒಂದು ಸ್ಥಳಾವಕಾಶ ಹಾಗೂ ಒಳಗೆ ಪ್ರಾಣಿಗಳಿಗೆ ಆಹಾರ ನೀಡುವವರನ್ನು ನಿಯಂತ್ರಿಸಿದರೆ ಇಲ್ಲಿನ ಕಿರೀಟಕ್ಕೊಂದು ಗರಿ ಮೂಡಿದಂತಾಗುತ್ತದೆ.

ಟಿ.ಉಮಾ ಶಂಕರ, ಲಕ್ಷ್ಮೀಪುರ, ಹನುಮಂತ ನಗರ


ಲಾಲ್‌ಬಾಗ್ ಆವರಣದ ಪಾದಚಾರಿಮಾರ್ಗದಲ್ಲಿ ಕಟ್ಟಿಗೆ ರಾಶಿ ಪ್ರಜಾವಾಣಿ ಚಿತ್ರ/ ರಂಜು ಪಿ

ಲಾಲ್‌ಬಾಗ್ ಸಸ್ಯತೋಟದಲ್ಲಿ ಹಲವಾರು ವರ್ಷಗಳಿಂದ ಪಾನಿಪುರಿ ವ್ಯಾಪಾರ ಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದೇನೆ. ಉದ್ಯಾನಕ್ಕೆ ಬರುವ ಪ್ರವಾಸಿಗರಿಗೆ ಉತ್ತಮ ತಿಂಡಿ ನೀಡುವುದರ ಜೊತೆಗೆ ಪರಿಸರದ ಸ್ವಚ್ಛತೆಗೆ ಆದ್ಯತೆ ನೀಡುತ್ತಿದ್ದೇನೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯಾಪಾರ–ವಹಿವಾಟು ನಡೆಸುತ್ತಿದ್ದೇನೆ.

ಸುರೇಶ್ ಎಸ್ ಎಮ್., ಲಾಲ್‌ಬಾಗ್ ವ್ಯಾಪಾರಿ

ಸುಂದರವಾದ ಲಾಲ್‌ಬಾಗ್ ಸಸ್ಯೋದ್ಯಾನದಲ್ಲಿ ನಿಯಮಿತವಾಗಿ ವಾಕಿಂಗ್ ಮಾಡುತ್ತೇನೆ. ಉದ್ಯಾನವು ದೇಹ ಮತ್ತು ಮನಸ್ಸನ್ನು ವಿಶ್ರಾಂತಿಗೊಳಿಸುವ ಉತ್ತಮ ಸ್ಥಳ. ಇಲ್ಲಿನ ಪರಿಸರವನ್ನು ಸ್ವಚ್ಛ ಮತ್ತು ಸುಂದರವಾಗಿಡಲು ಅಧಿಕಾರಿಗಳು ಮತ್ತು ಸಿಬ್ಬಂದಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಇಲ್ಲಿನ ಪಾದಚಾರಿಮಾರ್ಗ ಮಳೆಯಿಂದ ಕೊಚ್ಚಿಹೋಗಿದ್ದು, ಮುಂದಿನ ದಿನಗಳಲ್ಲಿ ಅಭಿವೃದ್ಧಿಗೊಳಿಸಬೇಕು.

ಸುಬ್ರಹ್ಮಣ್ಯ ಬಿ.ಪಿ., ಬಸವನಗುಡಿ

ಲಾಲ್‌ಬಾಗ್‌ನಲ್ಲಿ ಹಲವಾರು ಸಮಸ್ಯೆಗಳಿದ್ದು, ನಾನು 1980ರ ದಶಕದಿಂದ ಉದ್ಯಾನಕ್ಕೆ ಭೇಟಿ ನೀಡುತ್ತಿದ್ದೇನೆ. ನಿರ್ವಹಣೆಗೆ ಸರ್ಕಾರ ಅನುದಾನ ನೀಡುತ್ತದೆ. ಆದರೆ ಅದರ ಉಪಯೋಗ ಮಾತ್ರ ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳ ಖರ್ಚಿಗೆ ಬಳಸಿಕೊಳ್ಳುತ್ತಿದ್ದಾರೆ. ಇಂತಹವರ ವಿರುದ್ಧ ನ್ಯಾಯಾಲಯದಲ್ಲಿ ಪಿಐಎಲ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು.

ವೆಂಕಟರಮಣ, ಆರ್. ಆರ್. ನಗರ, ಬೆಂಗಳೂರು

ಶ್ರೀರಂಗಪಟ್ಟಣ ಜಾಮಿಯಾ ಮಸೀದಿ ಆಂಜನೇಯ ದೇಗುಲ: ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀರಂಗಪಟ್ಟಣದ ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಾಲಯವನ್ನು ಧ್ವಂಸಗೊಳಿಸಿದ ಟಿಪ್ಪು ಸುಲ್ತಾನ್ ವಿವಾದಿತ ಜಾಮಿಯಾ ಮಸೀದಿ ನಿರ್ಮಾಣ ಮಾಡಿದ್ದಾನೆ’ ಎಂದು ಆಪಾದಿಸಿ ಭಜರಂಗ ಸೇನೆ ಹೈಕೋರ್ಟ್ ಮೆಟ್ಟಿಲೇರಿದೆ.

ಮಂಡ್ಯ ಜಿಲ್ಲೆಯ ಹಾಲಹಳ್ಳಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಭಜರಂಗ ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಬಿ. ಮಂಜುನಾಥ್ ಈ ಕುರಿತಂತೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು ಇದು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಅರ್ಜಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಮುಜರಾಯಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಮಂಡ್ಯ ಜಿಲ್ಲಾಧಿಕಾರಿ, ರಾಜ್ಯ ಧಾರ್ಮಿಕ ಪರಿಷತ್, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಆಪಾದನೆ: ‘ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಾಲಯವನ್ನು ವಿಜಯನಗರ ಸಾಮ್ರಾಜ್ಯ, ಮೈಸೂರು ಸಾಮ್ರಾಜ್ಯ ಹಾಗೂ ದಳವಾಯಿ ದೊಡ್ಡಯ್ಯ ಸೇರಿದಂತೆ ಅನೇಕ ಆಡಳಿತಗಾರರು ಪೋಷಿಸಿಕೊಂಡು ಬಂದಿದ್ದರು. ಆದರೆ, ಇದನ್ನು ಧ್ವಂಸಗೊಳಿಸಿದ ಟಿಪ್ಪು ಸುಲ್ತಾನ್, ಮಸೀದಿಯನ್ನಾಗಿ ಪರಿವರ್ತಿಸಿದ್ದಾನೆ’ ಎಂಬುದು ಅರ್ಜಿದಾರರ ಆರೋಪ.

‘ಈ ಬಗ್ಗೆ ಅಧ್ಯಯನ, ಸರ್ವೆ ಹಾಗೂ ಉತ್ಖನನ ನಡೆಸಿ 30 ದಿನಗಳ ಒಳಗಾಗಿ ಹೈಕೋರ್ಟ್‌ಗೆ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯಕ್ಕೆ ನಿರ್ದೇಶಿಸಬೇಕು. ದೇವಾಲಯದ ಆವರಣದಲ್ಲಿರುವ ಹಿಂದೂ ಸಂಸ್ಕೃತಿ ಹಾಗೂ ಪರಂಪರೆಯ ಕುರುಹುಗಳಾಗಿರುವ ಗರುಡ ಕಂಬ, ಕಲ್ಯಾಣಿ, ಸ್ತೂಪ, ಸ್ತಂಭ, ಹಿಂದೂ ದೇವ-ದೇವತೆಗಳ ಕಲ್ಲಿನ ಕೆತ್ತನೆಗಳು ಹಾಗೂ ಭೂಗತ ದೇವಸ್ಥಾನದ ಭಾಗ, ವಾಸ್ತು ಶಿಲ್ಪ, ಹೂತಿಟ್ಟ ವಿಗ್ರಹಗಳನ್ನು ಸಂರಕ್ಷಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ, ರಾಜ್ಯ ಸರ್ಕಾರ, ಜಿಲ್ಲಾಡಳಿತಕ್ಕೆ ನಿರ್ದೇಶಿಸಬೇಕು’ ಎಂದೂ ಅವರು ಮನವಿ ಮಾಡಿದ್ದಾರೆ.

‘ಕುಟುಂಬ ವೈದ್ಯಶಾಸ್ತ್ರ:ಪಿಜಿ ಕೋರ್ಸ್ ಆರಂಭಿಸಿ’

ಬೆಂಗಳೂರು: ‘ಸರ್ಕಾರ ಕುಟುಂಬ ವೈದ್ಯಶಾಸ್ತ್ರದಲ್ಲಿ ಹೊಸದಾಗಿ ಸ್ನಾತಕೋತ್ತರ ಪದವಿ ಆರಂಭಿಸಬೇಕು. ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಪ್ರಸ್ತಾವದ ನಿಯಮ ಮತ್ತು ನಿಬಂಧನೆಗಳಲ್ಲಿ ಸೂಕ್ತವಾದ ಬದಲಾವಣೆ ಮಾಡಬೇಕು’ಎಂದು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ (ಐಎಂಎ) ಆಗ್ರಹಿಸಿದೆ.

‘ಆಯೋಗ ಸ್ವಾಯತ್ತತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಬಾರದು. ಆಧುನಿಕ ವೈದ್ಯಕೀಯ ಕ್ಷೇತ್ರಕ್ಕೆ ಮಾರಕವಾಗುವ ಮತ್ತು ಅರೆಬೆಂದ ವೈದ್ಯರನ್ನು ಹೊರತಂದು ಜನರ ಜೀವಗಳ ಜೊತೆ ಚೆಲ್ಲಾಟವಾಡುವ ಸೆಕ್ಷನ್‌ಗಳನ್ನು ತೆಗೆದುಹಾಕಬೇಕು. ತಜ್ಞ ವೈದ್ಯರ ಹಾಗೂ ಕಾರ್ಪೊರೇಟ್ ಸಂಸ್ಕೃತಿಯಿಂದ ವೈದ್ಯಕೀಯ ಸೇವೆ ಜನಸಾಮಾನ್ಯರಿಗೆ ಕೈಗೆಟುಕದಂತಾಗಿದೆ. ಕುಟುಂಬ ವೈದ್ಯ ಪದ್ಧತಿಯನ್ನು ಪುನಃ ಮುಖ್ಯವಾಹಿನಿಗೆ ತರುವ ಸಮಯ ಬಂದಿದೆ’ ಎಂದು ಅಸೋಸಿಯೇಷನ್ ಅಧ್ಯಕ್ಷ ಶಿವಕುಮಾರ್ ಬಿ. ಲಕ್ಕೋಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ಪ್ರಕರಣಗಳಲ್ಲಿ ವೈದ್ಯರನ್ನು ಪಿಸಿಪಿಎನ್‌ಡಿಟಿ ಕಾನೂನಿನ ಮೂಲಕ ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು. ಆಧುನಿಕ ವೈದ್ಯ ಪದ್ಧತಿಯನ್ನು ಇತರೆ ವೈದ್ಯ ಪದ್ಧತಿಗಳೊಂದಿಗೆ ಸೇರಿಸುವ ಅವೈಜ್ಞಾನಿಕ ವಿಧಾನವನ್ನು ಕೈಬಿಡಬೇಕು. ಅಲೋಪತಿಕ್ ಔಷಧಗಳನ್ನು ಆಧುನಿಕ ವೈದ್ಯರು ಮಾತ್ರ ಉಪಯೋಗಿಸುವ ಪದ್ಧತಿ ಜಾರಿಗೊಳಿಸಬೇಕು ಎಂದರು.

‘ಮಕ್ಕಳ ಆರೋಗ್ಯಕ್ಕೆ ಆದ್ಯತೆ’

ಬೆಂಗಳೂರು: ‘ಮಹಿಳೆಯರು ಮತ್ತು ಮಕ್ಕಳಿಗೆ ಉತ್ತಮ ಆರೋಗ್ಯ ಸೌಲಭ್ಯ ಒದಗಿಸಲು ಮೈಸೂರಿನ ಎಲ್ಲ ಅರಸರೂ ಶ್ರಮಿಸಿದ್ದರು’ ಎಂದು ಮೈಸೂರು ಮಹಾರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮಾರತ್ ಹಳ್ಳಿಯ ರೈನ್ ಬೋ ಆಸ್ಪತ್ರೆಯ ಬರ್ತ್ ರೈಟ್ ಮಹಡಿಯನ್ನು ಗುರುವಾರ ಉದ್ಘಾಟಿಸಿದ ಅವರು, ‘ಗರ್ಭಾವಸ್ಥೆಯಲ್ಲಿ ಹೆಚ್ಚಿನ ಆರೈಕೆ ಅಗತ್ಯ’ ಎಂದು ಹೇಳಿದರು.

ಮಕ್ಕಳ ತಜ್ಞರ ವಿಭಾಗದ ಕ್ಲಿನಿಕಲ್ ನಿರ್ದೇಶಕ ಡಾ. ಅರವಿಂದ್ ಶೆಣೈ, ‘ಆಸ್ಪತ್ರೆಯ ಬರ್ತ್ ರೈಟ್ ಮಹಡಿಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗಶಾಸ್ತ್ರದ ಕಾರ್ಯವಿಧಾನ ನಡೆಯಲಿವೆ’ಎಂದರು.

ಇ.ಡಿ: ಮುಖ್ಯಸ್ಥರ ಅಧಿಕಾರ ವಿಸ್ತರಣೆ

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಮುಖ್ಯಸ್ಥ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರ ಅವಧಿಯನ್ನು ಮತ್ತೊಂದು ವರ್ಷ ವಿಸ್ತರಿಸಿ ಕೇಂದ್ರ ಸರ್ಕಾರ ಗುರುವಾರ ಆದೇಶಿಸಿದೆ. ಈ ಮೂಲಕ ಅವರ ಅಧಿಕಾರ ಅವಧಿಯು 2023ರ ನ. 18ರವರೆಗೆ ವಿಸ್ತರಿಸಿದಂತಾಗಿದೆ.

2018ರ ನ.19ರಂದು 2 ವರ್ಷಗಳ ಅವಧಿಗೆ ಇ.ಡಿ ನಿರ್ದೇಶಕರಾಗಿ ಮಿಶ್ರಾ ನೇಮಕವಾಗಿದ್ದರು. 2020ರ ನ. 13 ರಂದು ಅವರ ನೇಮಕಾತಿ ಆದೇಶ ಮಾರ್ಪಡಿಸಿ, 2 ವರ್ಷ ಅಧಿಕಾರಾವಧಿಯನ್ನು 3 ವರ್ಷಕ್ಕೆ ಕೇಂದ್ರ ವಿಸ್ತರಿಸಿತ್ತು.

ನಾಳೆ ಎಎಪಿ ಪ್ರತಿಭಟನೆ

ಬೆಂಗಳೂರು: ರಸ್ತೆ ಗುಂಡಿಗಳಿಗೆ ವಾಹನ ಸವಾರರು ಬಲಿಯಾಗುತ್ತಿರುವುದು ಹೆಚ್ಚುತ್ತಿದ್ದು, ಗುಂಡಿಗಳನ್ನು ಮುಚ್ಚುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷ ಇದೇ 19ಕ್ಕೆ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

‘ರಸ್ತೆಗುಂಡಿಗಳಿಂದ ಅಪಘಾತ, ಸಾವು ಸಾಮಾನ್ಯವಾಗಿವೆ. ಸರ್ಕಾರದ ನಿರ್ಲಕ್ಷ್ಯ ಹಾಗೂ ಭ್ರಷ್ಟಾಚಾರದಿಂದಾಗಿ ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆಗುಂಡಿಗಳಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವ ತಾಕತ್ತು ಈ ಸರ್ಕಾರಕ್ಕೆ ಇಲ್ಲ’ ಎಂದು ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಗುರುವಾರ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

‘ಮುಸ್ಲಿಮರಿಗೆ ದೊರಕದ ಅರ್ಹತೆಯ ಅವಕಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಮುಸ್ಲಿಮರು ಉತ್ತಮ ಶಿಕ್ಷಣ ಪಡೆದಿದ್ದರೂ, ಅರ್ಹತೆಗೆ ತಕ್ಕ ಅವಕಾಶಗಳು ದೊರೆತಿಲ್ಲ. ರಾಜಕೀಯ ಸ್ಥಾನಮಾನಗಳೂ ದೂರವೇ ಉಳಿದಿವೆ ಎಂದು ಮೈಸೂರು ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಮುಜಾಫರ್ ಅಸ್ಸಾದಿ ತಮ್ಮ ಸಮುದಾಯದ ಸ್ಥಿತಿಗತಿ ತೆರೆದಿಟ್ಟರು.

ಸೆಂಟರ್ ಫಾರ್ ಸೆಕ್ಯುಲರ್ ಡೆಮಾಕ್ರಸಿ ಬಿ.ಎ. ಮೊಹಿದ್ದೀನ್ ಸ್ಮಾರಣಾರ್ಥ ‘ರಾಜ್ಯ ರಾಜಕಾರಣದಲ್ಲಿ ಮುಸ್ಲಿಮರು: ನಿನ್ನೆ–ಇಂದು–ನಾಳೆ’ ವಿಷಯ ಕುರಿತು ಗುರುವಾರ ಹಮ್ಮಿಕೊಂಡಿದ್ದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶತಮಾನಗಳ ಇತಿಹಾಸ ಹೊಂದಿರುವ ಮೈಸೂರು ವಿಶ್ವವಿದ್ಯಾಲಯದಲ್ಲಿ ಇದುವರೆಗೂ ಒಬ್ಬ ಮುಸ್ಲಿಂ ಪ್ರಾಧ್ಯಾಪಕ ಕುಲಪತಿ ಹುದ್ದೆ ಅಲಂಕರಿಸಿಲ್ಲ. ಎಷ್ಟೋ ಅರ್ಹರು ಇದ್ದರೂ, ಸ್ಥಾನಮಾನ ನೀಡುವಾಗ ಪರಿಗಣಿಸಿಲ್ಲ. ಮೊಹಿದ್ದೀನ್ ಅವರು ಕುಲಪತಿ ಹುದ್ದೆ ಕೊಡಿಸಲು ಪ್ರಯತ್ನಿಸಿದರೂ, ಫಲ ಸಿಗಲಿಲ್ಲ. ಕಾಂಗ್ರೆಸ್ ಸೇರಿ ಯಾವ ರಾಜಕೀಯ ಪಕ್ಷಗಳೂ ಇಂತಹ ವಿಷಯಗಳ ಬಗ್ಗೆ ಗಮನ ಹರಿಸಿಲ್ಲ ಎಂದು ಬೇಸರ ತೋಡಿಕೊಂಡರು.

ಕರ್ನಾಟಕ ಸಹಿಷ್ಣುತೆ ಇರುವ ರಾಜ್ಯ. ಹಿಂದೆ ಕೋಮು ಗಲಭೆಗಳು ನಡೆದಿದ್ದರೂ, ಸಮಾಜ ಶಾಂತಿ ಮರುಸ್ಥಾಪನೆಯಲ್ಲಿ ಎಲ್ಲರೂ ಶ್ರಮಿಸಿದ್ದಾರೆ. ಮಂಗಳೂರು ಸೇರಿದಂತೆ ಕೆಲ ಭಾಗಗಳಲ್ಲಿ ಪ್ರಕರಣಗಳು ಮರುಕಳಿಸಿದರೂ, ಬೆಂಗಳೂರು ಸೇರಿದಂತೆ ಬೇರೆ ಭಾಗಗಳಲ್ಲಿ ಸೌಹಾರ್ದತೆ ನೆಲೆಸಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಆರ್. ರಮೇಶ್ ಕುಮಾರ್, ‘ಮುಸ್ಲಿಮರು ಮತದಾನದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಉತ್ತಮ ನಾಯಕರನ್ನು ಆಯ್ಕೆ ಮಾಡಬೇಕು. ಸಿಕ್ಕ ಅವಕಾಶಗಳನ್ನು ಕಳೆದುಕೊಳ್ಳಬಾರದು’ ಎಂದು ಕಿವಿಮಾತು ಹೇಳಿದರು.

ಕೆಲ ರಾಜಕಾರಣಿಗಳು ಮುಸ್ಲಿಮರ ಮತ ಪಡೆದು ಗೆಲವು ಪಡೆದಿದ್ದನ್ನು ಮರೆತಿದ್ದಾರೆ. ಮುಖಂಡರು ಸಮುದಾಯದ ಜನರನ್ನು ಜಾಗೃತಗೊಳಿಸಬೇಕು ಎಂದು ಸಲಹೆ ನೀಡಿದರು.

ಮಾಜಿ ಸಚಿವ ಬಿ.ಎಲ್. ಶಂಕರ್, ರಾಜಕೀಯ ವಿಶ್ಲೇಷಕ ಅತ್ತರುಲ್ಲಾ ಶರೀಫ್, ಪತ್ರಕರ್ತ ಬಿ.ಎಂ. ಹನೀಫ್, ಎ.ಕೆ. ಮುಶ್ತಾಕ್ ಉಪಸ್ಥಿತರಿದ್ದರು.

ಅನಧಿಕೃತ ಗೈರು: ವೇತನಕ್ಕೆ ಕತ್ತರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲ ಕಚೇರಿಗಳು ಸೇರಿ ಸ್ನಾತಕೋತ್ತರ ಕೇಂದ್ರಗಳಲ್ಲಿ ನೌಕರರು ಕಚೇರಿಗೆ ನಿಗದಿತ ಅವಧಿಯಲ್ಲಿ ಹಾಜರಾಗಬೇಕು ಮತ್ತು ಎರಡು ಬಾರಿ ಸಹಿ ಹಾಕಬೇಕು ಎಂದು ಕುಲಸಚಿವರು ಸುತ್ತೋಲೆ ಹೊರಡಿಸಿದ್ದಾರೆ.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನೌಕರರು ಸರಿಯಾದ ಸಮಯಕ್ಕೆ ಹಾಜರಾಗದಿರುವುದು ಕಂಡುಬಂದಿದೆ.

ಬೆಳಿಗ್ಗೆ 10ರಿಂದ ಸಂಜೆ 5.15ರವರೆಗೆ ವಿಶ್ವವಿದ್ಯಾಲಯದ ಕೆಲಸದ ಸಮಯವಾಗಿದೆ. ಮಧ್ಯಾಹ್ನ 1.30ರಿಂದ 2ರವರೆಗೆ ಊಟಕ್ಕೆ ಬಿಡುವು ನೀಡಲಾಗುತ್ತಿದೆ. ವಿಶ್ವವಿದ್ಯಾಲಯದ ಆಡಳಿತ ಕಚೇರಿ ಸೇರಿದಂತೆ ಎಲ್ಲ ಕಚೇರಿಗಳು, ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಿಗೆ ಇದು ಅನ್ವಯವಾಗುತ್ತದೆ. 2001ರ ಜುಲೈ 1ರಿಂದ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಈ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದ್ದಾರೆ.

ಸರ್ಕಾರಿ ನೌಕರರ ಕರ್ತವ್ಯ ನಿರ್ವಹಣೆಯ ಒಂದು ದಿನದ ಅವಧಿಯನ್ನು ಎರಡು ಭಾಗ ಎಂದು ಪರಿಗಣಿಸಲಾಗಿದೆ. ಬೆಳಿಗ್ಗೆ ಅಥವಾ ಮಧ್ಯಾಹ್ನದ ಅನಧಿಕೃತ ಗೈರುಹಾಜರಿಗೆ ಅರ್ಧ ದಿನದ ವೇತನ ಮತ್ತು ಭತ್ಯೆಗಳ ಮುಟ್ಟುಗೋಲಿಗೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕಚೇರಿ ಕೈಪಿಡಿ ಅನ್ವಯ ಕಚೇರಿಯಲ್ಲಿರುವ ಎಲ್ಲ ನೌಕರರ ಸಹಿಯಾದ ನಂತರ ಅಂದರೆ, ಕಚೇರಿ ವೇಳೆ ಆರಂಭದ 15 ನಿಮಿಷದ ನಂತರ ಮುಖ್ಯಸ್ಥರು ಹಾಜರಾತಿಯನ್ನು ದೃಢೀಕರಿಸಬೇಕು. ವಿಶ್ವವಿದ್ಯಾಲಯದಲ್ಲಿ ಬಯೋಮೆಟ್ರಿಕ್ ಹಾಜರಾತಿ ಪದ್ಧತಿ ವ್ಯವಸ್ಥೆ ಜಾರಿಗೆ ಬರುವವರೆಗೂ ಮಾರ್ಗಸೂಚಿಗಳನ್ನು ಎಲ್ಲ ನೌಕರರು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಲಾಗಿದೆ.

ಕುಲಪತಿ ಅನುಮತಿ ಕಡ್ಡಾಯ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲ ವಿಭಾಗ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಅತಿಥಿಗಳನ್ನು ಆಹ್ವಾನಿಸುವ ಮೊದಲು ಕುಲಪತಿ ಅವರ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಬಗ್ಗೆ ಕುಲಸಚಿವರು ಸುತ್ತೋಲೆ ಹೊರಡಿಸಿದ್ದಾರೆ. ಎಲ್ಲ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಸಿಂಡಿಕೇಟ್ ಸದಸ್ಯರನ್ನು ಆಹ್ವಾನಿಸಬೇಕು ಹಾಗೂ ಆಹ್ವಾನಪತ್ರಿಕೆಯಲ್ಲೂ ಸಿಂಡಿಕೇಟ್ ಸದಸ್ಯರ ಹೆಸರುಗಳನ್ನು ನಮೂದಿಸಬೇಕು ಎಂದು ಸೂಚಿಸಿದ್ದಾರೆ.

ಅರ್ಜಿ ಆಹ್ವಾನ: 2022–23ನೇ ಶೈಕ್ಷಣಿಕ ವರ್ಷಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ರಾಮನಗರದಲ್ಲಿ ಬೋಧಿಸಲು ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಾಹಿತಿಗೆ www.bangaloreuniversity.ac.in ವೆಬ್‌ಸೈಟ್ ವೀಕ್ಷಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಭಾರಿ ವಂಚನೆ ಹಗರಣ: ಆರೋಪಿ ಬಂಧನ

ಬೆಂಗಳೂರು: ಭಾರಿ ಹಣ ವಂಚನೆ ಹಗರಣದ ಆರೋಪಿ ಇಂಜಾಜ್ ಇಂಟರ್‌ನ್ಯಾಷನಲ್‌ನ ವ್ಯವಸ್ಥಾಪಕ ನಿರ್ದೇಶಕ ಮಿಸ್ಬಾಉದ್ದೀನ್ ಎಂಬಾತನನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ನ.11ರ ತನಕ ವಶಕ್ಕೆ ಪಡೆದಿದ್ದಾರೆ.

ಹೂಡಿಕೆದಾರರಿಗೆ ಭಾರಿ ಮೊತ್ತದ ಹಣ ಹಿಂದಿರುಗಿಸುವ ಆಮಿಷವೊಡ್ಡಿ ವಂಚಿಸುತ್ತಿದ್ದ ಆರೋಪದಲ್ಲಿ ಇಂಜಾಜ್ ಇಂಟರ್‌ನ್ಯಾಷನಲ್ ಮತ್ತು ಅಸೋಸಿಯೇಟ್ಸ್ ಗ್ರೂಪ್ ವಿರುದ್ಧ 2017ರಲ್ಲಿ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ಯಲಹಂಕ ತಹಶೀಲ್ದಾರ್ ಕಚೇರಿಯ ಕಂದಾಯ ಅಧಿಕಾರಿ ಅನಂತ ಪದ್ಮನಾಭ್ ಅವರು ಪೊಲೀಸರಿಗೆ ದೂರು ನೀಡಿದ್ದರು. ಬಳಿಕ ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಇ.ಡಿ ಪ್ರಕರಣ ದಾಖಲಿಸಿಕೊಂಡಿತ್ತು. ಸಾವಿರಾರು ಮಂದಿಗೆ ₹250 ಕೋಟಿಯಷ್ಟು ವಂಚಿಸುತ್ತಿದ್ದ ಆರೋಪದಲ್ಲಿ ಮಿಸ್ಬಾ ಉದ್ದೀನ್ ಬಂಧಿತರಾಗಿದ್ದರು.

ಪಾಲಿಕೆ ವ್ಯಾಪ್ತಿಗೆ ಸೇರ್ಪಡೆ: ಬಿಬಿಎಂಪಿ–ಕೆಎಚ್‌ಬಿ ನಡುವೆ ಹಗ್ಗಜಗ್ಗಾಟ

ಬಂಡೆಮಠ: ಇತ್ಯರ್ಥಕ್ಕೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಬಳಿಯ ಬಂಡೆಮಠ ಬಡಾವಣೆಯನ್ನು ಬಿಬಿಎಂಪಿ ವ್ಯಾಪ್ತಿಗೆ ಪಡೆಯಲು ಪಾಲಿಕೆ ಮತ್ತು ಕರ್ನಾಟಕ ಗೃಹ ಮಂಡಳಿ ನಡುವೆ ಹಗ್ಗಜಗ್ಗಾಟ ಮುಂದುವರಿದಿದೆ. ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಸಂಬಂಧ 10 ದಿನಗಳಲ್ಲಿ ಒಮ್ಮತದ ನಿರ್ಧಾರಕ್ಕೆ ಬರುವಂತೆ ವಿಧಾನಸಭೆ ಅರ್ಜಿಗಳ ಸಮಿತಿ ನಿರ್ದೇಶನ ನೀಡಿದೆ.

ಶಾಸಕ ಎಸ್.ಸುರೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯಲ್ಲಿ ಬಂಡೆಮಠ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ವಿಷಯ ಚರ್ಚಿಸಲಾಯಿತು. ಎರಡು ಸಂಸ್ಥೆಗಳ ನಡುವಿನ ಸಂಘರ್ಷ ಕೊನೆಗೊಳಿಸಿ ಬಿಕ್ಕಟ್ಟು ನಿವಾರಿಸುವ ಜವಾಬ್ದಾರಿಯನ್ನು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಸಮಿತಿ ನೀಡಿತು. 10 ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿತು.

ಪಾಲಿಕೆ ಮತ್ತು ಕೆಎಚ್‌ಬಿ ನಡುವಿನ ಗೊಂದಲದಲ್ಲಿ ನಾಗರಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಜನರ ಸಮಸ್ಯೆಗೆ ಪರಿಹಾರ ಬೇಕೆ ಹೊರತು, ಸಂಘರ್ಷವಲ್ಲ ಎಂದು ಸಮಿತಿ ಅಧ್ಯಕ್ಷ ಸುರೇಶ್‌ಕುಮಾರ್ ಹೇಳಿದರು.

‘ಬಡಾವಣೆಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಕೆಎಚ್‌ಬಿ ₹2 ಕೋಟಿ ನೀಡಿದೆ. ಇದರಿಂದ ಗುಣಮಟ್ಟದ ಕಾಮಗಾರಿ ನಿರ್ವಹಿಸಲು ಸಾಧ್ಯವಿಲ್ಲ. ಕನಿಷ್ಠ ₹10 ಕೋಟಿ ಅಗತ್ಯವಿದೆ ಎಂದು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪ್ರತಿಪಾದಿಸಿದರು. 2016ರಿಂದ ಕೆಎಚ್‌ಬಿ ಬಡಾವಣೆಯಲ್ಲಿ ಮನೆಗಳ ನಕ್ಷೆಯನ್ನು ಬಿಬಿಎಂಪಿ ಮಂಜೂರು ಮಾಡುತ್ತಿದೆ. ಅಭಿವೃದ್ಧಿ ಶುಲ್ಕ ಸೇರಿ ₹6 ಕೋಟಿಗೂ ಹೆಚ್ಚು ಶುಲ್ಕ ಸಂಗ್ರಹ ಮಾಡಿದೆ. ಮುಂದೆಯೂ ಇಲ್ಲಿನ ನಾಗರಿಕರು ಮನೆ ಕಂದಾಯವನ್ನು ಬಿಬಿಎಂಪಿಗೆ ಪಾವತಿಸುತ್ತಾರೆ. ಆದ್ದರಿಂದ ಬಡಾವಣೆಯನ್ನು ಬಿಬಿಎಂಪಿ ವಹಿಸಿಕೊಂಡು ಅಭಿವೃದ್ಧಿ ಮಾಡಬೇಕು ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ರವಿಶಂಕರ್ ಪಟ್ಟು ಹಿಡಿದರು’ ಎಂದು ಮೂಲಗಳು ತಿಳಿಸಿವೆ.

ಬಡಾವಣೆ ನಿರ್ಮಾಣವಾಗಿ 20 ವರ್ಷಗಳು ಕಳೆದರೂ ಮೂಲಸೌಕರ್ಯ ಕಲ್ಪಿಸಿಲ್ಲ. ಒಂದೇ ಒಂದು ಉದ್ಯಾನ ಅಭಿವೃದ್ಧಿ ಆಗಿಲ್ಲ. ಗಿಡಗಳ ನಡುವೆ ಹಾವಿನ ಆವಾಸ ಸ್ಥಾನವಾಗಿದ್ದು, ಕೆಲವು ಕಡೆ ಉದ್ಯಾನವೇ ಒತ್ತುವರಿಯಾಗಿದೆ. ರಸ್ತೆಗಳ ಸ್ಥಿತಿ ಶೋಚನೀಯವಾಗಿದೆ ಎಂದು ಬಂಡೇಮಠ ಕೆಎಚ್‌ಬಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸತೀಶ್ ವಿವರಿಸಿದರು.

ಕೆಂಪೇಗೌಡ ಬಡಾವಣೆ: ಪ್ರತಿ ವಾರ ಪ್ರಗತಿ ಪರಿಶೀಲನೆ

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಸಂಬಂಧ ಪ್ರತಿ ವಾರ ಪ್ರಗತಿ ಪರಿಶೀಲನೆ ನಡೆಸಲಾಗುವುದು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಆಯುಕ್ತ ಕುಮಾರ ನಾಯಕ್ ಅವರು ವಿಧಾನಸಭೆ ಅರ್ಜಿ ಸಮಿತಿಗೆ ಭರವಸೆ ನೀಡಿದ್ದಾರೆ.

‘ಕಾಮಗಾರಿಯನ್ನು ತ್ವರಿತವಾಗಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಪ್ರತಿವಾರವೂ ಸಭೆ ನಡೆಸಿ ಕಾಮಗಾರಿ ಪ್ರಗತಿ ಬಗ್ಗೆ ಪ್ರತಿ 15 ದಿನಗಳಿಗೊಮ್ಮೆ ಅರ್ಜಿಗಳ ಸಮಿತಿಗೆ ವರದಿ ಸಲ್ಲಿಸಲಾಗುವುದು’ ಎಂದು ಹೇಳಿದರು.

ಶಿವರಾಮ ಕಾರಂತ ಬಡಾವಣೆ ಸಮಸ್ಯೆಗಳಿಗೆ ಸಂಬಂಧಿಸಿದಂತೆಯೂ ಪ್ರತಿವಾರ ಸಭೆ ನಡೆಸಲಾಗುತ್ತಿದೆ. ಅದೇ ಮಾದರಿಯಲ್ಲಿ ಕೆಂಪೇಗೌಡ ಬಡಾವಣೆ ಮೂಲಸೌಕರ್ಯ ಸಮಸ್ಯೆ ಬಗೆಹರಿಸಲು ಕ್ರಮ ವಹಿಸಲಾಗುವುದು ಎಂದರು. 1400 ಎಕರೆ ಭೂಸ್ವಾಧೀನ ಬಾಕಿ ಇದೆ. ಈ ಬಿಕ್ಕಟ್ಟು ಬಗೆಹಿಸಲು ಪ್ರತ್ಯೇಕ ತಂಡವೊಂದನ್ನು ರಚಿಸುವುದಾಗಿ ಸಭೆಗೆ ಕುಮಾರ ನಾಯಕ್ ಭರವಸೆ ನೀಡಿದ್ದಾರೆ ಎಂದು ಸಮಿತಿ ಅಧ್ಯಕ್ಷ ಎಸ್.ಸುರೇಶ್‌ಕುಮಾರ್ ‘ಪ್ರಜಾವಾಣಿ’ಗೆ ವಿವರಿಸಿದರು.

‘ಕೋಮುದ್ವೇಷ ಬಿತ್ತುವ ಕೆಲಸ ಸಲ್ಲದು’

ಬೆಂಗಳೂರು: ಮಾಧ್ಯಮಗಳು ಕೋಮುದ್ವೇಷ, ಜಾತಿಯ ವಿಷ ಬೀಜ ಬಿತ್ತುವ ಬರಹಗಳನ್ನು ಪ್ರಕಟಿಸಬಾರದು. ರಾಜಕಾರಣಿಗಳಿಗೆ ಮಾಧ್ಯಮ ಕನ್ನಡಿಯಾಗಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ಬುಧವಾರ ಆಯೋಜಿಸಿದ್ದ ‘ರಾಷ್ಟ್ರ ನಿರ್ಮಾಣದಲ್ಲಿ ಮಾಧ್ಯಮಗಳ ಪಾತ್ರ’ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಬಹುತ್ವದ ಭಾರತ, ದೇಶ ನಮ್ಮದು ಎನ್ನುವ ಮನೋಭಾವ ಎಲ್ಲರಲ್ಲೂ ಮೂಡಬೇಕು. ಸರಳಜೀವನ ಕ್ರಮ ಬದುಕಿನ ಭಾಗವಾಗಬೇಕು. ರಾಷ್ಟ್ರ ನಿರ್ಮಾಣಕ್ಕಾಗಿ ಮಾಧ್ಯಮಗಳು ಸಮಾಜದ ಒಳಿತಿನ ಮನೋಭಾವ ಇಟ್ಟುಕೊಂಡು ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ರಾಷ್ಟ್ರವನ್ನು ಸದೃಢವಾಗಿ ಕಟ್ಟುವ ಕನಸು ಇದುವರೆಗೂ ನನಸಾಗಿಲ್ಲ. ರಸ್ತೆ, ಕಟ್ಟಡಗಳೇ ಅಭಿವೃದ್ಧಿಯಲ್ಲ. ರಾಜಕೀಯ ಸ್ವಾತಂತ್ರ್ಯವಷ್ಟೇ ಗಾಂಧೀಜಿ ಅವರ ಕನಸಾಗಿರಲಿಲ್ಲ. ಸ್ವಾವಲಂಬಿ ಭಾರತ ಅವರ ಕನಸು. ಸ್ವಾತಂತ್ರ್ಯಾ ನಂತರ ಅಂತಹ ಇಚ್ಛಾಶಕ್ತಿ ಕಾಣಲಿಲ್ಲ. ಸ್ವಾವಲಂಬನೆಗೆ ಒತ್ತು ನೀಡಲಿಲ್ಲ. ಬ್ರಿಟಿಷರ ಹಾದಿಯಲ್ಲಿ ಸಾಗಿದ್ದೇ ದೊಡ್ಡ ಸಾಧನೆ ಎಂದರು.

ನಟ ಅನಂತ್‌ನಾಗ್, ಪತ್ರಿಕಾ ಬರಹಗಳ ಪ್ರೇರಣೆಯಿಂದಲೇ ರಾಜಕಾರಣಕ್ಕೆ ಬಂದಿದ್ದೆ. ಪ್ರತಿಭಾವಂತ ಪತ್ರಕರ್ತರ ಒಡನಾಟವಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಮಾಧ್ಯಮಗಳ ಪಾತ್ರ ಮುಖ್ಯವಾಗಿತ್ತು. ಇಂದು ಅಂತಹ ಸ್ಥಿತಿ ಕಾಣುತ್ತಿಲ್ಲ ಎಂದರು.

ಪತ್ರಕರ್ತೆ ಆರ್.ಪೂರ್ಣಿಮಾ ಮಾತನಾಡಿ, ದೇಶದ ಸಾಮಾಜಿಕ ವ್ಯವಸ್ಥೆಯ ಅನಿಷ್ಟಗಳನ್ನು ಹೋಗಲಾಡಿಸುವಲ್ಲಿ ಮಾಧ್ಯಮಗಳ ಪಾತ್ರವಿದೆ. ಇಂದಿಗೂ ಸಮಾಜದಲ್ಲಿ ಹಲವು ಕೆಟ್ಟ ಸಂಪ್ರದಾಯಗಳು ನೆಲೆಯೂರಿವೆ. ಅವುಗಳ ವಿರುದ್ಧ ಇನ್ನಷ್ಟು ಜಾಗೃತಿ ಮೂಡಿಸಬೇಕಿದೆ. ಮೂಢನಂಬಿಕೆ, ಲಿಂಗ ಅಸಮಾನತೆ ತೊಲಗಬೇಕಿದೆ. ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯದ ಅಗತ್ಯವಿದೆ ಎಂದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ. ಸದಾಶಿವ ಶೆಣೈ, ಪತ್ರಕರ್ತ ರಾಜಾ ಶೈಲೇಶಚಂದ್ರ ಗುಪ್ತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಡಾ.ಪಿ.ಎಸ್.ಹರ್ಷ ಉಪಸ್ಥಿತರಿದ್ದರು.



ಕರ್ನಾಟಕ ಮಾಧ್ಯಮ ಅಕಾಡೆಮಿ ಬುಧವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ವಾರ್ತಾ ಇಲಾಖೆ ಆಯುಕ್ತ ಡಾ.ಪಿ.ಎಸ್‌ಹರ್ಷ, ಪತ್ರಕರ್ತ ರಾಜಾ ಶೈಲೇಶಚಂದ್ರ ಗುಪ್ತ, ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ನಟ ಅನಂತ್ ನಾಗ್, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ. ಸದಾಶಿವ ಶೆಣೈ, ಪತ್ರಕರ್ತೆ ಆರ್. ಪೂರ್ಣಿಮಾ ಇದ್ದರು. –ಪ್ರಜಾವಾಣಿ ಚಿತ್ರ

‘ನಾನು ಪಕ್ಕಾ ಮೋದಿ ಭಕ್ತ’

‘ನಾನು ಪಕ್ಕಾ ಪ್ರಧಾನಿ ನರೇಂದ್ರ ಮೋದಿಯ ಭಕ್ತ’ ಎಂದು ನಟ ಅನಂತ್‌ನಾಗ್ ಹೇಳಿದರು.

ರಾಷ್ಟ್ರ ನಿರ್ಮಾಣದಲ್ಲಿ ಮಾಧ್ಯಮಗಳ ಪಾತ್ರ ವಿಷಯ ನೋಡಿದ ತಕ್ಷಣ ಈ ಕಾರ್ಯಕ್ರಮವನ್ನು ಮೋದಿಯವರೇ ಆರಂಭಿಸಿರಬಹುದು. ಸರ್ಕಾರವೇ ಮಾಧ್ಯಮಗಳಿಗೆ ಹೇಳಿಕೊಡುವ ಪರಿಸ್ಥಿತಿ ಬಂತಾ ಅಂದುಕೊಂಡೆ. ಗೂಗಲ್‌ನಲ್ಲಿ ಪರಿಶೀಲಿಸೋಣ ಎಂದುಕೊಂಡರೆ ಈಚೆಗೆ ನಡೆದ ಹಿಂದೂ ಎನ್ನುವ ಪದದ ಚರ್ಚೆಯಲ್ಲಿ ಗೂಗಲ್ ಹುಡುಕಿದರೆ ಅಶ್ಲೀಲ ಪದ ಬರುತ್ತದೆ ಎನ್ನುವುದು ನೆನಪಿಗೆ ಬಂದು ಸುಮ್ಮನಾದೆ. ಕೊನೆಗೆ ಧೈರ್ಯ ಮಾಡಿ ಹುಡುಕಿದೆ ಎಂದರು.

ನೇಮಕ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಘಟಕದ ಕನ್ನಡ ಜಾನಪದ ಪರಿಷತ್ ಅಧ್ಯಕ್ಷರನ್ನಾಗಿ ಕವಿ, ಕನ್ನಡಪರ ಚಿಂತಕ, ಕನ್ನಡ ಸಂಘಟಕ ವೈ.ಬಿ. ಎಚ್. ಜಯದೇವ್ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಘಟಕದ ಅಧ್ಯಕ್ಷ ಡಾ. ಎಸ್. ಬಾಲಾಜಿ ಅವರು ತಿಳಿಸಿದರು. ಅವರು ಕನ್ನಡ ಸಾಹಿತ್ಯ ಪರಿಷತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಘಟಕಕ್ಕೆ ಎರಡು ಬಾರಿ ಅಧ್ಯಕ್ಷರಾಗಿ ನೂರಾರು ಕನ್ನಡ ಕಾರ್ಯಕ್ರಮಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ.



ವೈ.ಬಿ.ಎಚ್. ಜಯದೇವ್

ಸುದ್ದಿ 2 ನಿಮಿಷ

‘ಹಣದುಬ್ಬರದ ಸುಳ್ಳು ಮಾಹಿತಿ ಏಕೆ?’

ಬೆಂಗಳೂರು: ‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಹಣದುಬ್ಬರ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಆದರೆ, ಹಣದುಬ್ಬರ ಕಡಿಮೆಯಾಗಿದೆ ಎಂದು ಸುಳ್ಳು ಮಾಹಿತಿಯನ್ನು ಮಾಧ್ಯಮಗಳ ಮೂಲಕ ಪ್ರಸಾರ ಮಾಡುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

‘ದೇಶದ ಜನರಿಗೆ ಮೋದಿ ವಾಸ್ತವ ಹೇಳಬೇಕು. ಅಂಕಿಅಂಶಗಳನ್ನು ತಿರುಚಿ ಸುಳ್ಳು ಹೇಳಿ ಜನರನ್ನು ಕತ್ತಲಲ್ಲಿಡುವುದು ಸರ್ವಾಧಿಕಾರದ ಲಕ್ಷಣ’ ಎಂದಿದ್ದಾರೆ.

‘ಜನರು ಬಳಸುವ ಎಲ್ಲ ವಸ್ತು ಸೇವೆಗಳ ಮೇಲಿನ ಹಣದುಬ್ಬರ ಶೇ 2ರಿಂದ 3ರಷ್ಟಿರಬೇಕು. ಈ ವರ್ಷದ ಸರಾಸರಿ ಹಣದುಬ್ಬರ ಶೇ 7ಕ್ಕಿಂತಲೂ ಅಧಿಕವಾಗಿದೆ. ಅಕ್ಟೋಬರ್ ತಿಂಗಳಲ್ಲಿ ಹಣದುಬ್ಬರ ಶೇ 6.77ಕ್ಕೆ ಇಳಿದಿದೆ ಎಂದು ಸರ್ಕಾರ ಸುಳ್ಳು ಹೇಳಿದೆ. ಶೇ 6.77 ಕೂಡ ಜನರ ಮನೆ ಹಾಳು ಮಾಡುವುದೇ ಹೊರತು ಜನರನ್ನು ಉದ್ಧಾರ ಮಾಡುವಂತದ್ದಲ್ಲ’ ಎಂದಿದ್ದಾರೆ.

‘ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ ರಾಜನಿಗೆ ಬೇಕಾದಂಥ ವರದಿಗಳನ್ನು ವಾಸ್ತವಕ್ಕೆ ವಿರುದ್ಧವಾಗಿ ತಿರುಗಾ ಮುರುಗಾ ಮಾಡಿ ಸಿದ್ಧ ಮಾಡಿಕೊಟ್ಟಂತೆ ಕಾಣುತ್ತಿದೆ. ಇದರಿಂದಾಗಿ ಬಿಜೆಪಿ ಎಂಬುದು ದಿಲ್ಲಿಯಿಂದ ಹಳ್ಳಿಯವರೆಗೆ ‘ಬೊಗಳೆ ಬಿಡುವ ಪಕ್ಷ’ ಎಂದು ಪದೇ ಪದೇ ಸಾಬೀತಾಗುತ್ತಿದೆ. ಅದಕ್ಕಾಗಿಯೆ ಬಿಜೆಪಿಯನ್ನು ‘ಸುಳ್ಳನ್ನು ಉತ್ಪಾದಿಸಿ ಮಾರುವ ಫ್ಯಾಕ್ಟರಿ’ ಎಂದು ಜನರೇ ಕರೆಯುತ್ತಿದ್ದಾರೆ’ ಎಂದೂ ಹೇಳಿದ್ದಾರೆ.

ಗೋಶಾಲೆಯಲ್ಲಿ ಹಸುಗಳ ಸಾವು



ಬೇತಮಂಗಲ: ಇಲ್ಲಿನ ಸರ್ಕಾರಿ ಗೋಶಾಲೆಯಲ್ಲಿ 10ಕ್ಕೂ ಹೆಚ್ಚು ಹಸು ಮತ್ತು ಕರುಗಳು ಮೃತಪಟ್ಟಿವೆ ಎಂದು ಆರೋಪಿಸಲಾಗಿದೆ.

ಬೇತಮಂಗಲ ಸಮೀಪದ ಗುಟ್ಟಹಳ್ಳಿಯಲ್ಲಿ (ಬಂಗಾರು ತಿರುಪತಿ) ಒಂದು ವರ್ಷದ ಹಿಂದೆ ಪ್ರಾರಂಭವಾದ ಸರ್ಕಾರಿ ಗೋಶಾಲೆಯಲ್ಲಿ ಸೂಕ್ತ ನಿರ್ವಹಣೆ ಇಲ್ಲದಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಗೋಶಾಲೆ ಪ್ರಾರಂಭದಲ್ಲಿ 27 ಜಾನುವಾರು ಇದ್ದವು. ಬಂಗಾರು ತಿರುಪತಿ ದೇವಾಲಯಕ್ಕೆ ಭಕ್ತರು ನೀಡುವ ಹಣವನ್ನು ಗೋಶಾಲೆ ಪೋಷಣೆಗೆ ವಿನಿಯೋಗಿಸಲಾಗುತ್ತಿತ್ತು. ಗೋಶಾಲೆ ಅಧಿಕಾರಿಗಳು ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ಹಸು, ಕರುಗಳು ಮೃತಪಟ್ಟಿವೆ ಎಂದು ಆರೋಪಿಸಲಾಗಿದೆ.

ಸಂಚಾರ ಆಧಾರಿತ ಅಭಿವೃದ್ಧಿ ನೀತಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ಆಧಾರಿತ ಅಭಿವೃದ್ಧಿ(ಟಿಒಡಿ) ನೀತಿಗೆ ಸರ್ಕಾರ ಅಂತಿಮವಾಗಿ ಗುರುವಾರ ಅನುಮೋದನೆ ನೀಡಿದೆ.

‘ನಗರ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಸಾರಿಗೆ ಸಂಸ್ಥೆಗಳು, ಮೂಲಸೌಕರ್ಯ ಕಲ್ಪಿಸುವ ಸಂಸ್ಥೆಗಳು ಈ ಹೊಸ ನೀತಿಗೆ ಅನುಗುಣವಾಗಿ ಟಿಒಡಿ ವಲಯಗಳನ್ನು ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು ಎಂದು ನೀತಿಯಲ್ಲಿ ತಿಳಿಸಲಾಗಿದೆ.

ನಗರ ಭೂ ಸಾರಿಗೆ ನಿರ್ದೇಶನಾಲಯ(ಡಲ್ಟ್), ಬೆಂಗಳೂರು ಮೆಟ್ರೊ ರೈಲು ನಿಗಮಗಳು ಈಗಾಗಲೇ ಈ ನೀತಿಗೆ ಅನುಸಾರವಾಗಿ ಕೆಲಸ ಮಾಡುತ್ತಿವೆ. ಮೆಟ್ರೊ ರೈಲು, ಉಪನಗರ ರೈಲು ಸೇರಿ ಇತರ ಸಮೂಹ ಸಾರಿಗೆ ವ್ಯವಸ್ಥೆಯಲ್ಲಿ ಜನರ ಪ್ರಯಾಣ ಹೆಚ್ಚಿಸುವ ಮೂಲಕ ಸಾರ್ವಜನಿಕ ಸಾರಿಗೆ ಬಳಕೆ ಪ್ರಮಾಣ ಹೆಚ್ಚಿಸಬೇಕು ಎಂದು ನೀತಿಯಲ್ಲಿ ತಿಳಿಸಲಾಗಿದೆ.

ನಡಿಗೆ, ಸೈಕಲ್ ಮತ್ತು ಬಸ್‌ಗಳ ಬಳಕೆಯನ್ನೂ ಹೆಚ್ಚಿಸಲು ನಿಲ್ದಾಣಗಳಿಗೆ ಹತ್ತಿರ ಇರುವ ಜಾಗಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಕೆ ಮಾಡುವುದು, ಪ್ರಮುಖ ಸ್ಥಳದಿಂದ ಆರು ನಿಮಿಷಗಳಲ್ಲಿ ನಿಲ್ದಾಣಕ್ಕೆ ನಡೆಯಬಹುದಾದ ಮತ್ತು ಸೈಕಲ್‌ನಲ್ಲಿ ತೆರಳಬಹುದಾದ ಜಾಗದಲ್ಲಿ ಟಿಒಡಿ ವಲಯ ನಿರ್ಮಿಸುವುದು, ಅದೇ ರೀತಿ 6 ನಿಮಿಷದಲ್ಲಿ ಸಾಗಬಹುದಾದ ಫೀಡರ್ ಸಾರಿಗೆ ಸೇವೆ ಒದಗಿಸುವ ವ್ಯವಸ್ಥೆ ಅಭಿವೃದ್ಧಿಪಡಿಸುವುದನ್ನೂ ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ನೀತಿ ಪ್ರಕಾರ ವಲಯ ವಾರು ಯೋಜನೆಗಳನ್ನು ಸಿದ್ಧಪಡಿಸಿಕೊಂಡು ಸರ್ಕಾರಕ್ಕೆ ಸಲ್ಲಿಸುವ ಜವಾಬ್ದಾರಿಯನ್ನು ಸರ್ಕಾರ ಡಲ್ಟ್‌ಗೆ ವಹಿಸಿದೆ. ಬಿಡಿಎ ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳೂ ಈ ನೀತಿಯಡಿ ಸಮಗ್ರ ಯೋಜನೆಗಳನ್ನು ರೂಪಿಸಬೇಕು ಎಂದು ತಿಳಿಸಿದೆ.

ಅಂತರ ಜಿಲ್ಲಾ ವಿಶೇಷ ಕರ್ತವ್ಯಕ್ಕೆ ಪೊಲೀಸರ ವಿರೋಧ

ಬೆಂಗಳೂರು: ಅಂತರ ಜಿಲ್ಲೆಯ ವರ್ಗಾವಣೆಗೆ ಅವಕಾಶ ನೀಡದ ಸರ್ಕಾರವು ಅಂತರ ಜಿಲ್ಲಾ ಬಂದೋಬಸ್ತ್‌ಗೂ ನೇಮಿಸಬಾರದು ಎಂದು ಪೊಲೀಸರು ಮನವಿ ಮಾಡಿದ್ದಾರೆ. ತಮ್ಮ ಅಳಲು ಕುರಿತು ಬರೆದಿರುವ ಸಂದೇಶವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

'ಅಂತರ ಜಿಲ್ಲಾ ವರ್ಗಾವಣೆ ಪದ್ಧತಿ ರದ್ದು ಮಾಡಿದ್ದು, ಪೊಲೀಸರಿಗೆ ತೊಂದರೆಯಾಗಿದೆ. ನಮ್ಮದು ಕಚೇರಿಯಲ್ಲಿ ಕುಳಿತು ಮಾಡುವ ಕೆಲಸ ಅಲ್ಲ. ಬಂದೋಬಸ್ತ್‌ಗೆಂದು ಪ್ರತಿ ಪೊಲೀಸ್ 15ರಿಂದ 25 ಕಿ.ಮೀ ತನಕ ತೆರಳುತ್ತಾನೆ. ಅಲ್ಲದೇ ಚಿಕ್ಕಮಗಳೂರಿನ ದತ್ತಪೀಠ, ಮೈಸೂರಿನ ದಸರಾ, ಬೆಳಗಾವಿ ಅಧಿವೇಶನ ಹಾಗೂ ಕೋಮು ಗಲಭೆ ನಡೆದರೆ ದೂರದ ಜಿಲ್ಲೆಗಳಿಗೆ ವಿಶೇಷ ಕರ್ತವ್ಯದ ಹೆಸರಿನಲ್ಲಿ ಕಳುಹಿಸುತ್ತಾರೆ. ನಮಗೂ ಪತ್ನಿ ಹಾಗೂ ಮಕ್ಕಳು ಇದ್ದಾರೆ. ವಿಶೇಷ ಕರ್ತವ್ಯಕ್ಕೆ ತೆರಳಿದರೆ, ಶಾಲೆಯಿಂದ ಮಕ್ಕಳನ್ನು ಮನೆಗೆ ಕರೆ ತರಲೂ ಯಾರೂ ಇರುವುದಿಲ್ಲ. ಅಂತರ ಜಿಲ್ಲಾ ವರ್ಗಾವಣೆಗೆ ಅವಕಾಶ ನೀಡುವುದಿಲ್ಲ ಅನ್ನುವ ಸರ್ಕಾರವು ನಮ್ಮನ್ನೇಕೆ ಅಂತರ ಜಿಲ್ಲಾ ಕರ್ತವ್ಯಕ್ಕೆ ನಿಯೋಜಿಸಬೇಕು' ಎಂದು ಪೊಲೀಸರು ಪ್ರಶ್ನಿಸಿದ್ದಾರೆ.

'ವಾಸ್ತವ್ಯದ ಸ್ಥಳದಿಂದ ಕರ್ತವ್ಯಕ್ಕೆ ಸ್ವಂತ ವಾಹನವನ್ನೇ ಬಳಸಬೇಕು. ಬಿಎಂಟಿಸಿಯಲ್ಲಿ ತೆರಳುವುದಕ್ಕೆ ಟ್ರಾಫಿಕ್‌ನಿಂದ ವಿಳಂಬವಾಗಲಿದೆ. ಪ್ರಧಾನಿ ಮೋದಿ ಅವರು ಬೆಂಗಳೂರಿಗೆ ಬಂದಿದ್ದಾಗ, ನಿಯೋಜಿಸಿದ್ದ ಬಂದೋಬಸ್ತ್ ಸ್ಥಳಕ್ಕೆ ತೆರಳುವುದಕ್ಕೆ ₹ 200 ಖರ್ಚಾಗಿದೆ. ಮೇಕೆದಾಟು ಪಾದಯಾತ್ರೆಯ ಬಂದೋಬಸ್ತ್‌ಗೆ ಹೋಗಲು ಸಂಬಳದ ಹಣವನ್ನೇ ಖರ್ಚು ಮಾಡಿದ್ದೇವೆ. ಆದ್ದರಿಂದ, ಪೆಟ್ರೋಲ್ ಕಾರ್ಡ್ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಬೇರೆ ವಲಯಗಳಿಗೆ ವರ್ಗಾವಣೆಯಾದರೆ ಸೇವಾವಧಿ ಕಡಿತವಾಗಲಿದೆ. ಹೊಸ ನೇಮಕಾತಿ ರೀತಿಯಲ್ಲೇ ಕೆಲಸ ಮಾಡಬೇಕಿದೆ. ಅಂತರ ಜಿಲ್ಲಾ ವರ್ಗಾವಣೆ ಕೊಡದಿದ್ದರೂ ತೊಂದರೆ ಇಲ್ಲ. ಅಂತರ ಜಿಲ್ಲಾ ಬಂದೋಬಸ್ತ್‌ಗೆ ನೇಮಿಸುವುದು ಬೇಡ' ಎಂದು ಕೋರಿದ್ದಾರೆ.

ರಿಟ್ ಅರ್ಜಿ ವಜಾ, ಮಹತ್ವದ ತೀರ್ಪು ನೀಡಿದ ಹೈಕೋರ್ಟ್ • ನಿವೃತ್ತ ಲೆಫ್ಟಿನೆಂಟ್ ಕರ್ನಲ್‌ಗೆ ಒದಗಿದ ನ್ಯಾಯ

ಉಳುವವನೇ ಒಡೆಯ ನೀತಿ ಸೈನಿಕರಿಗೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈನಿಕರ ಮಾಲೀಕತ್ವದ ಗೇಣಿ ಜಮೀನುಗಳನ್ನು ಉಳುವವರಿಂದ ವಾಪಸು ಕೊಡಿಸಲು ಸರ್ಕಾರ ತನ್ನ ದೈತ್ಯ ಶಕ್ತಿ ಉಪಯೋಗಿಸಬೇಕು ಮತ್ತು ಇದು ಸರ್ಕಾರದ ಆದ್ಯ ಜವಾಬ್ದಾರಿ' ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಹಿಡುವಳಿ ಕಾಯ್ದೆ ಅಡಿಯಲ್ಲಿ ಕೈತಪ್ಪಿದ್ದ ಗೇಣಿ ಜಮೀನನ್ನು ಮರಳಿ ಪಡೆಯಲು 40 ವರ್ಷಗಳಿಂದ ಕಾನೂನು ಹೋರಾಟ ನಡೆಸುತ್ತಿದ್ದ ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಅವರಿಗೆ ನ್ಯಾಯ ಒದಗಿಸಿರುವ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ 'ಸೈನಿಕರನ್ನು ಗೌರವದಿಂದ ಕಾಣದೇ ಹೋದರೆ ಹೇಗೆ?' ಎಂದು ಪ್ರಶ್ನಿಸಿದೆ.

'ತಮ್ಮ ಮಾಲೀಕತ್ವದಲ್ಲಿದ್ದ 4 ಎಕರೆಗೂ ಹೆಚ್ಚಿನ ಗೇಣಿ ಜಮೀನನ್ನು ಮರಳಿ ಸ್ವಾಧೀನಕ್ಕೆ ಒಪ್ಪಿಸಬೇಕು' ಎಂದು ಕೋರಿ ಪುತ್ತೂರು ಬಳಿಯ ದರ್ಬೆ ಗ್ರಾಮದ ಲೆಫ್ಟಿನೆಂಟ್ ಕರ್ನಲ್ ದಿವಾಣ ಗೋಪಾಲಕೃಷ್ಣ ಭಟ್ ಸರ್ಕಾರಕ್ಕೆ ಮನವಿ ಮಾಡಿದ್ದರು. ಈ ಲಾವಣೆ ಜಮೀನನ್ನು ಬಿಟ್ಟುಕೊಡುವಂತೆ ತಹಶೀಲ್ದಾರ್, ಗೇಣಿ ಮಾಡುತ್ತಿದ್ದ ನಫೀಜಾ ಮತ್ತಿತರರಿಗೆ ನಿರ್ದೇಶಿಸಿದ್ದರು. ಆದರೆ, ತಹಶೀಲ್ದಾರ್ ಆದೇಶವನ್ನು ಪ್ರಶ್ನಿಸಿ ನಫೀಜಾ ಸೇರಿದಂತೆ ಒಟ್ಟು 23 ಜನರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಪೀಠ, 'ಹಿಡುವಳಿ ಕಾಯ್ದೆ ಅಡಿಯಲ್ಲಿ ಉಳುವವನೇ ಒಡೆಯ ತತ್ವವು ಸೈನಿಕರಿಗೆ ಅನ್ವಯ ಆಗುವುದಿಲ್ಲ. ತಮ್ಮ ಜಮೀನು ಗೇಣಿದಾರರ ವಶಕ್ಕೆ ಹೋಗಿದ್ದರೆ ಸೇವೆಯಿಂದ ಹಿಂದಿರುಗಿ ಅಥವಾ ನಿವೃತ್ತಿ ಪಡೆದು ಬಂದ ನಂತರದ ಒಂದು ವರ್ಷದ ಅವಧಿಯಲ್ಲಿ ವಾಪಸು ಪಡೆಯಲು ಮನವಿ ಸಲ್ಲಿಸಬೇಕು. ಅಂತಹವರಿಗೆ ಕಾಯ್ದೆಯ ಗುತ್ತಿಗೆ ಕರಾರುಗಳಿಂದ ರಿಯಾಯ್ತಿ ನೀಡಲಾಗಿದೆ' ಎಂದು ಹೇಳಿದೆ.

'ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961ರ 15 (5)ರ ಅನುಸಾರ ಸೈನಿಕರು ನಿವೃತ್ತಿ ಆದ ಮೇಲೆ ತಮ್ಮ ಮಾಲೀಕತ್ವದ ಗೇಣಿ ಜಮೀನನ್ನು ಪುನಃ ಪಡೆಯಬಹುದು. ಇಲ್ಲವಾದಲ್ಲಿ ಸೈನಿಕರು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ಸರ್ಕಾರ ಸುಳ್ಳು ಹೇಳುತ್ತಿದೆ ಎಂದು ಅವರು ಭಾವಿಸಿದ್ದೇ ಆದಲ್ಲಿ, ತಾವು ಹೇಗೆ ದೇಶ ರಕ್ಷಣೆ ಮಾಡಬೇಕು ಎಂಬ ಜಿಜ್ಞಾಸೆಗೆ ಒಳಗಾಗುತ್ತಾರೆ. ಹೀಗಾಗಿ, ಸರ್ಕಾರಗಳು ಸೈನಿಕರ ಬಗ್ಗೆ ಅತ್ಯಂತ ಮುತುವರ್ಜಿಯಿಂದ ವರ್ತಿಸಬೇಕು' ಎಂದು ನ್ಯಾಯಪೀಠ ರಕ್ಷಣಾ ಇಲಾಖೆಯ ವರದಿಯನ್ನು ತೀರ್ಪಿನಲ್ಲಿ ಉಲ್ಲೇಖಿಸಿದೆ.

'ನಮ್ಮ ದೇಶದ ಗಡಿಗಳನ್ನು ರಕ್ಷಿಸಲು ತಮ್ಮ ಪ್ರಾಣವನ್ನು ಪಣಕ್ಕಿಡುವ ಸೈನಿಕರನ್ನು ಸಮಾಜದ ಒಂದು ವಿಭಾಗವು ಎಷ್ಟೊಂದು ಕಳಪೆಯಾಗಿ ನಡೆಸಿಕೊಳ್ಳಬಹುದು ಎಂಬುದಕ್ಕೆ ಇದೊಂದು ಶ್ರೇಷ್ಠ ಉದಾಹರಣೆಯಾಗಿದೆ' ಎಂದು ಕಳವಳ ವ್ಯಕ್ತಪಡಿಸಿರುವ ನ್ಯಾಯಪೀಠ, 'ಲೆಫ್ಟಿನೆಂಟ್ ಕರ್ನಲ್ ಅವರಿಗೆ ಎಂಟು ವಾರಗಳಲ್ಲಿ ಜಮೀನು ಸ್ವಾಧೀನಕ್ಕೆ ನೀಡಬೇಕು. ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿಗಳು ಅರ್ಜಿದಾರರನ್ನು ವಿವಾದಿತ ಸ್ಥಳದಿಂದ ಒಕ್ಕಲೆಬ್ಬಿಸಿ ಸ್ವಾಧೀನಕ್ಕೆ ನೀಡಬೇಕು' ಎಂದು ಆದೇಶ ನೀಡಿದೆ.

ಲೆಫ್ಟಿನೆಂಟ್ ಕರ್ನಲ್ ಗೋಪಾಲಕೃಷ್ಣ ಭಟ್ಟ ಅವರು 1993ರಲ್ಲಿ ರಕ್ಷಣಾ ಸೇವೆಯಿಂದ ನಿವೃತ್ತಿ ಹೊಂದಿದ್ದರು. ತಮ್ಮ ಗೇಣಿ ಜಮೀನನ್ನು ವಾಪಸು ಕೊಡಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು.

ಹೈಕೋರ್ಟ್ ಸುದ್ದಿ

ಶಿಯೊಮಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಶಿಯೊಮಿ ಇಂಡಿಯಾ ಕಂಪನಿಗೆ ಸೇರಿದ ನಾಲ್ಕು ಬ್ಯಾಂಕ್ ಖಾತೆಗಳಲ್ಲಿನ ₹ 5,551.27 ಕೋಟಿ ಮೊತ್ತವನ್ನು ಜಪ್ತಿ ಮಾಡಬೇಕೆಂಬ ಜಾರಿ ನಿರ್ದೇಶನಾಲಯದ (ಇಡಿ) ಆದೇಶವನ್ನು ಕಾಯಂಗೊಳಿಸಿದ್ದ ಸಕ್ಷಮ ಪ್ರಾಧಿಕಾರದ ಆದೇಶ ರದ್ದುಪಡಿಸುವಂತೆ ಕೋರಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಈ ಕುರಿತಂತೆ ಶಿಯೊಮಿ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿ ಮೇಲಿನ ಸುದೀರ್ಘ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ತೀರ್ಪು ಕಾಯ್ದಿರಿಸಿತು.

'ಶಿಯೊಮಿ ಇಂಡಿಯಾ ಕಂಪನಿಯು ಭಾರತದಲ್ಲಿ ಗಳಿಸಿದ ಹಣವನ್ನು ರಾಯಧನ ನೀಡುವ ನೆಪದಲ್ಲಿ ವಿದೇಶಿ ಕಂಪನಿಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡುತ್ತಿದೆ. ಆದ್ದರಿಂದ, ಇದು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) 1999ರ ನಿಯಮಗಳ ಉಲ್ಲಂಘನೆ' ಎಂಬ ಆರೋಪದಡಿ ₹ 5,551.27 ಕೋಟಿ ಮುಟ್ಟುಗೋಲು ಹಾಕಿಕೊಳ್ಳಲು ಜಾರಿ ನಿರ್ದೇಶನಾಲಯ (ಇಡಿ) ಏಪ್ರಿಲ್ 29ರಂದು ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಕಂಪನಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಇಡಿ ಆದೇಶವನ್ನು ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಿ' ಎಂದು ಫೆಮಾ ಅಡಿ ರಚನೆಯಾಗಿರುವ ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿತ್ತು. ವಿಚಾರಣೆ ನಡೆಸಿದ್ದ ಸಕ್ಷಮ ಪ್ರಾಧಿಕಾರ, ಇಡಿ ಆದೇಶವನ್ನು 2022ರ ಸೆಪ್ಟೆಂಬರ್ 19ರಂದು ಎತ್ತಿ ಹಿಡಿದಿತ್ತು. ಈ ಆದೇಶವನ್ನು ಕಂಪನಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಶೇ 10 ಮೀಸಲಾತಿ: ಸಮಾನತೆ ಸಾಧ್ಯವೇ?

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ



'ಪ್ರಜಾಪ್ರಭುತ್ವದ ಬಲವರ್ಧನೆ' ಪುಸ್ತಕವನ್ನು ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ, ವಿಮಲಾ ಶಿವಮಲ್ಲು, ಪುಸ್ತಕದ ಕರ್ತೃ ಎಸ್. ಶಿವಮಲ್ಲು, ಕೆ.ಆರ್. ರಮೇಶ್‌ಕುಮಾರ್, ಎಚ್.ಸಿ. ಮಹದೇವಪ್ಪ, ಹನುಮಂತರಾಯಪ್ಪ, ಎಸ್. ಮರಿಸ್ವಾಮಿ, ಸಿ.ಎಸ್. ದ್ವಾರಕನಾಥ್, ಬಿ.ಎನ್. ಉಮೇಶ್ ಇದ್ದಾರೆ

ರಾಜರಾಜೇಶ್ವರಿನಗರ: 'ರಾಜ್ಯದಲ್ಲಿ ಶೇ 3ರಷ್ಟಿರುವ ಸಾಮಾನ್ಯ ವರ್ಗದ ಜನರಿಗೆ ಶೇ 10 ಮೀಸಲಾತಿ ಬೇಕೆ? ಶೇ 52ರಷ್ಟು ಜನರಿಗೆ ಶೇ 27 ಮೀಸಲಾತಿ ನೀಡಿದರೆ ಪ್ರಜಾಪ್ರಭುತ್ವ ಬಲಗೊಳ್ಳಲು ಸಾಧ್ಯವೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಎಸ್. ಶಿವಮಲ್ಲು ರಚಿಸಿರುವ 'ಪ್ರಜಾಪ್ರಭುತ್ವದ ಬಲವರ್ಧನೆ' ಕುರಿತ ಪುಸ್ತಕವನ್ನು ಡಾ.ಬಿ.ಆರ್. ಅಂಬೇಡ್ಕರ್ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಗುರುವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಯಾವ ವರ್ಗದ ಜನರಿಗೆ ಶತಶತಮಾನಗಳ ಕಾಲ ಓದಲು, ಸಂಪತ್ತು ಅನುಭವಿಸಲು ಅವಕಾಶ ಇತ್ತೋ, ಅಂಥವರಿಗೆ ಮೀಸಲಾತಿ ನೀಡುವುದು ಸರಿಯೇ? ಅಂಬೇಡ್ಕರ್ ರಚಿಸಿರುವ ಸಂವಿಧಾನದ ಆಶಯ ಇದರಿಂದ ಈಡೇರುತ್ತದೆಯೇ?' ಎಂದೂ ಕೇಳಿದರು.

'ಮೇಲ್ವರ್ಗದ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವುದು ಸರಿಯೇ? ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಏನು ಹೇಳಿದೆ? ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ವರ್ಗದವರಿಗೆ ನೀಡುವ ಶೇ 10 ಮೀಸಲಾತಿಯಲ್ಲಿ ಹಿಂದುಳಿದ, ದಲಿತ ಸಮುದಾಯದ ಬಡವರಿಗೆ ಸೌಲಭ್ಯ ಸಿಗುವುದಿಲ್ಲ. ಆದರೂ ನಾವೆಲ್ಲ ಸುಮ್ಮನೆ ಇದ್ದೇವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಬಡ್ತಿಯಲ್ಲಿ ಮೀಸಲಾತಿಗೆ ಕಾನೂನು ಮಾಡಿದ್ದೆ. ಕರ್ನಾಟಕ ಬಿಟ್ಟರೆ ಬೇರೆ ಯಾವುದೇ ರಾಜ್ಯದಲ್ಲಿ ಇಂತಹ ಕಾನೂನು ಇಲ್ಲ. ಆದರೂ ಜನ ಮೋದಿ, ಮೋದಿ ಎನ್ನುತ್ತಾರೆ. ದುರ್ಬಲರು, ಅವಕಾಶವಂಚಿತ ಜನರು ಬಿಜೆಪಿ ಸೇರಿಕೊಂಡರೆ ಪ್ರಜಾಪ್ರಭುತ್ವ ಉಳಿಯುತ್ತದೆಯೇ? ಅಸಮಾನತೆ ನಿರ್ಮಾಣವಾಗಿರುವ ಕಡೆ ಪ್ರಜಾಪ್ರಭುತ್ವ ಬಲಗೊಳ್ಳಲು ಸಾಧ್ಯವಿಲ್ಲ' ಎಂದೂ ಅಭಿಪ್ರಾಯಪಟ್ಟರು.

'ಸಂಘ ಪರಿವಾರದವರು ಸಂವಿಧಾನ, ಪ್ರಜಾಪ್ರಭುತ್ವವನ್ನು ಇಂದಿಗೂ ಒಪ್ಪಿಲ್ಲ. ದುರ್ಬಲರ ಮೇಲೆ ದಬ್ಬಾಳಿಕೆ, ದೌರ್ಜನ್ಯ ಹೆಚ್ಚಾಗಿದೆ. ಒಂದು ಭಾಷೆ, ಒಬ್ಬ ನಾಯಕ, ಒಂದು ಧರ್ಮದ ಮೇಲೆ ಆರೆಸ್ಸೆಸ್ ನಂಬಿಕೆ ಇಟ್ಟುಕೊಂಡಿದೆ' ಎಂದು ಆರೋಪಿಸಿದರು.

ಶಾಸಕ ಕೆ.ಆರ್. ರಮೇಶ್‌ಕುಮಾರ್ ಮಾತನಾಡಿ, 'ಜಾತಿ, ಧರ್ಮದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ, ನ್ಯಾಯಾಲಯ, ಸ್ವಯಂಸಂಸ್ಥೆಗಳನ್ನು ದಾರಿ ತಪ್ಪಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಮತದಾರರು ಜಾಗೃತರಾಗಿ, ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವವರಿಗೆ ತಮ್ಮ ಮತ ಹಾಕದಿರುವ ಮೂಲಕ ಬುದ್ಧಿ ಕಲಿಸಿದಾಗ ಪ್ರಜಾಪ್ರಭುತ್ವ ಉಳಿಯುತ್ತದೆ' ಎಂದು ಪುಸ್ತಕದ ಕರ್ತೃ ಎಸ್. ಶಿವಮಲ್ಲು ಹೇಳಿದರು.

ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ, ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ, ಹಿಂದುಳಿದ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕನಾಥ್, ರಾಜರಾಜೇಶ್ವರಿನಗರ ಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ಪಾಂಚಜನ್ಯ ವಿದ್ಯಾಪೀಠದ ಅಧ್ಯಕ್ಷ ಎಸ್. ಮರಿಸ್ವಾಮಿ, ಬಿ.ಎನ್. ಉಮೇಶ್, ಎಂ.ಮಹದೇವ್, ವಿಮಲಾ ಶಿವಮಲ್ಲು, ಸಾಹಿತಿ ಹುಲಿಕುಂಟೆ ಮೂರ್ತಿ, ಸುಕೇಂದ್ರ ಕುಮಾರ್ ಇದ್ದರು.

ಪುಸ್ತಕ ಪರಿಚಯ

ಪುಸ್ತಕ:	'ಪ್ರಜಾಪ್ರಭುತ್ವದ ಬಲವರ್ಧನೆ'
ಲೇಖಕ:	ಎಸ್. ಶಿವಮಲ್ಲು
ಪ್ರಕಾಶನ:	ಸ್ವಪ್ನಾ ಬುಕ್‌ಹೌಸ್
ಬೆಲೆ:	₹ 250
ಪುಟಗಳು:	330

ಇರಾನ್ ಸರ್ಕಾರದ ವಿರುದ್ಧ ಮೌನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಇರಾನ್ ಸರ್ಕಾರದ ವಿರುದ್ಧ ಮಹಿಳೆಯರು ನಡೆಸುತ್ತಿರುವ ಪ್ರತಿಭಟನೆ ಬೆಂಬಲಿಸಿ ಚರ್ಚ್ ಸ್ಟ್ರೀಟ್‌ನಲ್ಲಿ ಇರಾನ್ ಪ್ರಜೆ ನಿಕೊ ಮೌನ ಪ್ರತಿಭಟನೆ ನಡೆಸಿದರು

—ಪ್ರಜಾವಾಣಿ ಚಿತ್ರ

ಬೆಂಗಳೂರು: ಇರಾನ್ ಮಹಿಳೆಯರ ಹೋರಾಟವನ್ನು ಬೆಂಬಲಿಸಿ ಇರಾನ್‌ನ ಇಬ್ಬರು ಮಹಿಳೆಯರು ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಮೌನ ಪ್ರತಿಭಟನೆ ನಡೆಸಿದರು. #MahsaAmini ಹ್ಯಾಷ್‌ಟ್ಯಾಗ್ ಅನ್ನು ಬೆಂಬಲಿಸಬೇಕು ಎಂದು ಕೋರಿಕೊಂಡರು.

ನಗರದ ರಾಜೀವಗಾಂಧಿ ವಿಶ್ವವಿದ್ಯಾಲಯದಲ್ಲಿ ಫಾರ್ಮಸಿ ಅಧ್ಯಯನ ಮಾಡುತ್ತಿರುವ ಇರಾನ್‌ನ ಮಹಶಾ ಮತ್ತು ಇಲ್ಲಿಯೇ ನೆಲೆಸಿರುವ ನಿಕೊ ಅವರು ಭಿತ್ತಿಪತ್ರ, ಬೀದಿ ನಾಟಕದ ಮೂಲಕ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಖಂಡಿಸಿ ಮೌನ ಪ್ರತಿಭಟನೆ ನಡೆಸಿದರು.

'ಹಿಜಾಬ್ ಅನ್ನು ಸರಿಯಾಗಿ ಧರಿಸಿಲ್ಲ ಎಂಬ ಕಾರಣಕ್ಕೆ ಇರಾನ್‌ನ ಖುರ್ದ್ ಪ್ರಾಂತ್ಯದಲ್ಲಿ ಮಹ್ಸಾ ಅಮೀನಿ ಎಂಬ ಯುವತಿಯನ್ನು ಬಂಧಿಸಿದ್ದ ಪೊಲೀಸರು, ಚಿತ್ರಹಿಂಸೆ ನೀಡಿದ್ದರು. ಮೂರು ದಿನಗಳ ಕಾಲ ಠಾಣೆಯಲ್ಲಿದ್ದ ಅಮೀನಿ ಮೃತಪಟ್ಟರು. ಆಕೆಯ ಸಾವಿಗೂ ನಮಗೂ ಸಂಬಂಧವಿಲ್ಲ ಎಂದು ಸರ್ಕಾರ ಈಗಲೂ ಹೇಳುತ್ತಿದೆ. ಆಕೆಯ ಸಾವಿಗೆ ಪೊಲೀಸರೇ ನೇರ ಹೊಣೆ' ಎಂದು ಮಹಶಾ ತಿಳಿಸಿದರು.

'ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರವು ಹಲವು ತಂತ್ರಗಳನ್ನು ಹೂಡಿದೆ. ಪ್ರತಿಭಟನಕಾರರ ಮೇಲೆ ಸೇನೆಯು ಬಲ ಪ್ರಯೋಗ ನಡೆಸುತ್ತಿದೆ. ಮಹಿಳಾ ಪ್ರತಿಭಟನಕಾರರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗುತ್ತಿದೆ. ಹಿಜಾಬ್ ವಿರೋಧಿ ಹೋರಾಟವನ್ನು ಬೆಂಬಲಿಸಿದ ಪತ್ರಕರ್ತರು, ಮಾನವ ಹಕ್ಕು ಹೋರಾಟಗಾರರು, ಚಿತ್ರ ನಿರ್ದೇಶಕರು ಸೇರಿ ಹಲವರನ್ನು ಇರಾನ್ ಸರ್ಕಾರ ಬಂಧಿಸಿದೆ. ಇರಾನ್ ಮಹಿಳೆಯರ ಹೋರಾಟವನ್ನು ಬೆಂಬಲಿಸಿ ವಿಶ್ವದಾದ್ಯಂತ ಪತ್ರಿಭಟನೆಗಳು ನಡೆಯುತ್ತಿವೆ' ಎಂದರು.

ವಿಲಾಸಿ ಜೀವನಕ್ಕೆ ಚಿನ್ನಾಭರಣ ಕಳವು

ಬೆಂಗಳೂರು: ಮೋಜು, ಮಸ್ತಿಯ ಜೀವನಕ್ಕೆ ಮನೆಯಲ್ಲಿ ಚಿನ್ನಾಭರಣ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ದಿನ್ನಹಳ್ಳಿ ಗ್ರಾಮದ ನವೀನ್‌ಕುಮಾರ್ (22) ಹೂಗೂ ಅದೇ ತಾಲ್ಲೂಕಿನ ನಿಡಘಟ್ಟ ಗ್ರಾಮದ ಸೂರ್ಯ ಅಲಿಯಾಸ್ 'ಸೈಕೊ' (25) ಬಂಧಿತರು.

'ಬಂಧಿತರಿಂದ ₹ 7.50 ಲಕ್ಷ ಮೌಲ್ಯದ 123 ಗ್ರಾಂ ಚಿನ್ನಾಭರಣ ಹಾಗೂ ಬೈಕ್ ವಶಕ್ಕೆ ಪಡೆಯಲಾಗಿದೆ' ಎಂದು ಹೇಳಿದರು.

'ಅತ್ತಿಬೆಲೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇಬ್ಬರೂ ಆರೋಪಿಗಳು ಬೈಕ್ ಕಳವು ಮಾಡಿದ್ದರು. ಅದೇ ಬೈಕ್‌ನಲ್ಲಿ ಪ್ರತಿನಿತ್ಯ ಸಂಜೆ ಕೆ.ಆರ್.ಪುರಕ್ಕೆ ರಾತ್ರಿ ವೇಳೆ ಬಂದು, ಬೀಗ ಹಾಕಿದ ಮನೆಗಳಲ್ಲಿ ಗುರುತಿಸಿ ಬೀಗ ಒಡೆದು ಚಿನ್ನಾಭರಣ ಕಳವು ಮಾಡುತ್ತಿದ್ದರು. ಕದ್ದ ಚಿನ್ನಾಭರಣವನ್ನು ಮಾಲೂರಿನ ಫೈನಾನ್ಸ್ ಸಂಸ್ಥೆಯಲ್ಲಿ ಗಿರವಿ ಇಟ್ಟಿದ್ದರು. ಇನ್ನು ಕೆಲವು ಮನೆಗಳಲ್ಲಿ ಕದ್ದ ಆಭರಣಗಳನ್ನು ಮಾರಾಟ ಮಾಡಿದ್ದರು. ಅವುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಲಾಡ್ಜ್‌ಗಳಲ್ಲಿ ರಹಸ್ಯ ಕೋಣೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಶ್ಯಾವಾಟಿಕೆ ನಡೆಸುತ್ತಿದ್ದ ಲಾಡ್ಜ್‌ಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದು, ತಪ್ಪಿಸಿಕೊಳ್ಳಲು ನೆರವಾಗಲು ರಹಸ್ಯ ಕೋಣೆ ನಿರ್ಮಿಸಿಕೊಂಡಿರುವುದು ಪತ್ತೆಯಾಗಿದೆ.

ಸಿಟಿ ಮಾರುಕಟ್ಟೆ ಪ್ರದೇಶದ ವಾಸವಿ, ದುರ್ಗಾ ಪ್ಯಾಲೆಸ್ ಹಾಗೂ ಕಲಾಸಿಪಾಳ್ಯದ ಸಫೈರ್ ಲಾಡ್ಜ್ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದರು. ಈ ದಾಳಿಯ ವೇಳೆ ರಹಸ್ಯ ಕೋಣೆಗಳೂ ಪತ್ತೆಯಾಗಿವೆ. ಈ ಲಾಡ್ಜ್‌ಗಳ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ.

'ಈ ರಹಸ್ಯ ಕೋಣೆಯಲ್ಲಿ ಮಹಿಳೆಯರನ್ನು ಕೂಡಿ ಹಾಕಿ ವೇಶ್ಯಾವಾಟಿಕೆಯ ಜಾಲಕ್ಕೆ ದೂಡಲಾಗುತ್ತಿತ್ತು. ಏಳು ಮಹಿಳೆಯರನ್ನು ರಕ್ಷಿಸಲಾಗಿದೆ. ಆರು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಉಸಿರುಗಟ್ಟುವ ವಾತಾವರಣ': 'ಈ ರಹಸ್ಯ ಕೋಣೆಯಲ್ಲಿ ಗಾಳಿ ಹಾಗೂ ಬೆಳಕು ಇಲ್ಲ. ಪೊಲೀಸರು ದಾಳಿ ನಡೆಸಿದರೆ ಸುಳಿವು ಸಿಗದಂತೆ ಮಹಿಳೆಯರನ್ನು ಆ ಕೋಣೆಯಲ್ಲಿ ಕೂಡಿ ಹಾಕಲಾಗುತ್ತಿತ್ತು. ಹೆಚ್ಚು ಸಮಯ ಕೂಡಿ ಹಾಕಿದರೆ ಪ್ರಾಣಕ್ಕೆ ತೊಂದರೆ ಆಗುವ ಅಪಾಯ ಇದೆ. ಮೆಜೆಸ್ಟಿಕ್ ಸುತ್ತಮುತ್ತಲೂ ಈ ರೀತಿಯ ಲಾಡ್ಜ್‌ಗಳು ಇರುವ ಮಾಹಿತಿಯಿದೆ. ಈ ದಾಳಿ ಮುಂದುವರಿಯಲಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಬಸ್ ಹರಿದು ಸವಾರ ಸಾವು

ಬೆಂಗಳೂರು: ಕುಮಾರಸ್ವಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಬಿಎಂಟಿಸಿ ಬಸ್ ಹರಿದು ಬೈಕ್ ಸವಾರ ಮೃತಪಟ್ಟಿದ್ದಾರೆ.

ಶರವಣ(37) ಮೃತ ಬೈಕ್ ಸವಾರ. ಬಿಎಂಟಿಸಿ ಬಸ್ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಬನಶಂಕರಿ ದೇವಾಲಯ ಮುಂಭಾಗದ ಹೋಗುವಾಗ ಶರವಣ ಆಯ ತಪ್ಪಿಬಿದ್ದಿದ್ದಾರೆ. ಆಗ ಹಿಂದೆ ಬರುತ್ತಿದ್ದ ಬಿಎಂಟಿಸಿ ಶರವಣ ಅವರ ಮೇಲೆ ಬಸ್ ಹತ್ತಿದೆ. ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ. ಕುಮಾರಸ್ವಾಮಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಗ್ಸ್ ಸಾಗಣೆ: ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಕ ವಸ್ತುವನ್ನು ಪರೀಕ್ಷೆಗೆ ಒಡ್ಡುವಾಗ (ಸ್ಯಾಂಪಲ್ ಟೆಸ್ಟ್) ನಿರ್ದಿಷ್ಟ ಪ್ರಮಾಣಕ್ಕಿಂತ ಕಡಿಮೆ ಸಂಗ್ರಹಿಸಲಾಗಿದೆ. ಹೀಗಾಗಿ, ಆರೋಪಿ ಜಾಮೀನು ಪಡೆಯಲು ಅರ್ಹನಾಗುತ್ತಾನೆ' ಎಂಬ ಆರೋಪಿ ಪರ ವಕೀಲರ ತಾಂತ್ರಿಕ ವಾದಾಂಶವನ್ನು ತಳ್ಳಿಹಾಕಿರುವ ಹೈಕೋರ್ಟ್, ಈ ಸಂಬಂಧಿತ ಪ್ರಕರಣವೊಂದರಲ್ಲಿ ಆರೋಪಿಗೆ ಜಾಮೀನು ನಿರಾಕರಿಸಿದೆ.

ಈ ಕುರಿತಂತೆ ಮೆಡಿಕಲ್ ಶಾಪ್ ಮಾಲೀಕರೊಬ್ಬರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, 'ಇದೊಂದು ಗಂಭೀರ ವಿಚಾರವಾಗಿದ್ದು ಜಾಮೀನು ನೀಡಲು ಆಗದು' ಎಂದು ಹೇಳಿದೆ.

ಅಪರಾಧ ಸುದ್ದಿ

'ಅರ್ಜಿದಾರ ಕೇರಳದ ನಿವಾಸಿ ಉಮ್ಮರ್ ಮೆಡಿಕಲ್ ಶಾಪ್ ಮಾಲೀಕನಿದ್ದಾರೆ. ತಮ್ಮ ಬಳಿ ಕೆಲಸ ಮಾಡುವ ಉದ್ಯೋಗಿಯ ಆಧಾರ್ ಕಾರ್ಡ್ ದುರ್ಬಳಕೆ ಮಾಡಿಕೊಂಡು, ನಕಲಿ ರೋಗಿಗಳ ಹೆಸರಿನಲ್ಲಿ ವಿಳಾಸ ಮತ್ತು ವೈದ್ಯರ ಚೀಟಿ ಸೃಷ್ಟಿಸಿ ಅಂಚೆ ಮೂಲಕ ವಿದೇಶಗಳಿಗೆ ಮಾದಕ ದ್ರವ್ಯ ಸರಬರಾಜು ಮಾಡುತ್ತಿದ್ದಾರೆ ಎಂಬ ಆರೋಪ ಗಂಭೀರವಾದುದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಪರೀಕ್ಷೆ ಸಂದರ್ಭದಲ್ಲಿ 5 ಗ್ರಾಂನಷ್ಟು ಮಾದರಿ ಸಂಗ್ರಹಿಸುವುದು ಕಡ್ಡಾಯ. ಈ ಪ್ರಕರಣದಲ್ಲಿ 4.2 ಗ್ರಾಂ ಮಾದರಿಯನ್ನು ಮಾತ್ರವೇ ಸಂಗ್ರಹಿಸಲಾಗಿದೆ. ಇದು ನಿರ್ದಿಷ್ಟ ಪ್ರಮಾಣಕ್ಕಿಂತ ಕಡಿಮೆ ಇರುವ ಕಾರಣ ಪರೀಕ್ಷೆ ನಡೆಸಲು ಸಾಧ್ಯವಿಲ್ಲ ಎಂಬ ಅರ್ಜಿದಾರರ ವಾದವನ್ನು ಸಮರ್ಥಿಸಲು ಆಗುವುದಿಲ್ಲ' ಎಂದೂ ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಸೌದಿ ಅರೇಬಿಯಾಕ್ಕೆ ಕೊರಿಯರ್ ಮೂಲಕ ಕ್ಲೊನಾಜೆಪಾಮ್ ಟ್ಯಾಬ್ಲೆಟ್‌ಗಳನ್ನು (ಮಾದಕ ದ್ರವ್ಯ ಮತ್ತು ಮನಃಪದಾರ್ಥಗಳ ನಿಷೇಧಿತ ಕಾಯ್ದೆಯಡಿ ನಿಷೇಧಿತಗೊಂಡಿರುವ ಪದಾರ್ಥ) ರವಾನೆ ಮಾಡುತ್ತಿದ್ದುದನ್ನು ಎನ್‌ಸಿಬಿ ಅಧಿಕಾರಿಗಳು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪತ್ತೆಹಚ್ಚಿ, 357 ಗ್ರಾಂನಷ್ಟು ಪ್ರಮಾಣದ ಟ್ಯಾಬ್ಲೆಟ್‌ಗಳನ್ನು ಜಪ್ತಿ ಮಾಡಿದ್ದರು. ನಂತರ ಅರ್ಜಿದಾರ ಆರೋಪಿಯನ್ನು 2022ರ ಆಗಸ್ಟ್ 25ರಂದು ಬಂಧಿಸಿದ್ದರು. ವಿಚಾರಣಾ ನ್ಯಾಯಾಲಯ ಜಾಮೀನು ನಿರಾಕರಿಸಿತ್ತು.

ಗಿಫ್ಟ್ ಬಾಕ್ಸ್‌ನಲ್ಲಿ ಮಾದಕ ವಸ್ತು ಪೂರೈಕೆ



ಅಭಿಜಿತ್



ಪವೀಶ್



ಶಫಿಸುದ್ದೀನ್



ಆರೋಪಿಗಳಿಂದ ಜಪ್ತಿ ಮಾಡಿದ ಗಿಫ್ಟ್ ಬಾಕ್ಸ್ ಹಾಗೂ ಟಾಕಿಂಗ್ ಟಾಮ್ ಗೊಂಬೆ

ಬೆಂಗಳೂರು: 'ಗಿಫ್ಟ್ ಬಾಕ್ಸ್'ನಲ್ಲಿ ಮಾದಕ ವಸ್ತು 'ಎಂಡಿಎಂಎ' ಪೂರೈಸುತ್ತಿದ್ದ ಮೂವರು ಆರೋಪಿಗಳನ್ನು ವೈಟ್‌ಫೀಲ್ಡ್ ಪೊಲೀಸರು ಬಂಧಿಸಿದ್ದಾರೆ.

ಕೇರಳದ ತ್ರಿಶೂರ್ ಜಿಲ್ಲೆಯ ಕರಾಲಾಂ ಗ್ರಾಮದ ಪವೀಶ್ (33), ಪಾಲ್ಕಾಡ್‌ನ ಅಭಿಜಿತ್ (25) ಹಾಗೂ ಕರಾಲಾಂನ ಶಫಿಸುದ್ದೀನ್ (29) ಬಂಧಿತರು.

'ಪಟ್ಟಂದೂರು ಅಗ್ರಹಾರದ ಐಟಿಪಿಎಲ್ ಬಳಿಯ ಕೊರಿಯರ್ ಸರ್ವೀಸ್‌ಗೆ ಮೂವರು ಆರೋಪಿಗಳು ಗಿಫ್ಟ್ ಬಾಕ್ಸ್‌ನಲ್ಲಿ ಮಾದಕ ವಸ್ತು ಎಂಡಿಎಂಎ ಇಟ್ಟು ಕೊರಿಯರ್ ಮಾಡಲು ಬಂದಿದ್ದರು. ಖಚಿತ ಮಾಹಿತಿ ಮೇರೆಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಬಾಕ್ಸ್‌ನಲ್ಲಿ ಮಾದಕ ವಸ್ತುಗಳು ಇರುವುದು ಪತ್ತೆಯಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'138 ಗ್ರಾಂ ತೂಕದ ₹ 15 ಲಕ್ಷ ಮೌಲ್ಯದ ಎಂಡಿಎಂಎ ಮಾದಕ ವಸ್ತು, 4 ಮೊಬೈಲ್, ಗುಲಾಬಿ ಬಣ್ಣದ ಪೇಪರ್‌ನಿಂದ ಪ್ಯಾಕ್ ಮಾಡಿದ್ದ ಖಾಲಿ ರಟ್ಟಿನ ಬಾಕ್ಸ್, ಟಾಕಿಂಗ್ ಟಾಮ್ ಗೊಂಬೆ, 1 ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಕೇರಳದಿಂದ ಬಂದಿದ್ದ ಮೂವರು ನಗರದಲ್ಲೇ ನೆಲೆಸಿ, ಕಾಲೇಜು ವಿದ್ಯಾರ್ಥಿಗಳು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ನೆಲೆಸಿರುವ ಗ್ರಾಹಕರಿಗೆ ಮಾದಕ ವಸ್ತು ಪೂರೈಸುತ್ತಿದ್ದರು. ಮಕ್ಕಳ ಆಟವಾಡುವ ಗೊಂಬೆಯನ್ನು ಖರೀದಿಸಿ, ಅದರ ಒಳಗೆ ಮಾದಕ ವಸ್ತುಗಳನ್ನಿಟ್ಟು ಗ್ರಾಹಕರಿಗೆ ಪೂರೈಸುತ್ತಿದ್ದರು. ಯಾರಿಗೂ ಸುಳಿವು ಸಿಗದಂತೆ ಕೆಲವು ತಿಂಗಳಿಂದ ಈ ರೀತಿಯಲ್ಲಿ ಮಾದಕ ವಸ್ತು ಪೂರೈಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಉಗ್ರ ಚಟುವಟಿಕೆ: ನಿಧಿ ಸಂಗ್ರಹಕ್ಕೆ ಬಳಕೆಯಾಗುತ್ತಿರುವ ಸಾಮಾಜಿಕ ಮಾಧ್ಯಮ

ನವದೆಹಲಿ (ಪಿಟಿಐ): ಭಯೋತ್ಪಾದಕ ಸಂಘಟನೆಗಳು ನಿಧಿ ಸಂಗ್ರಹಕ್ಕೆ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿರುವ ಕುರಿತು ಭಾರತದ ಬಳಿ ಪುರಾವೆಗಳಿವೆ ಎಂದು ರಾಷ್ಟ್ರೀಯ ತನಿಖಾ ಏಜೆನ್ಸಿಯ (ಎನ್‌ಐಎ) ಮಹಾ ನಿರ್ದೇಶಕ ದಿನಕರ್ ಗುಪ್ತಾ ಗುರುವಾರ ಹೇಳಿದರು.

ಶುಕ್ರವಾರದಿಂದ ಆರಂಭವಾಗಲಿರುವ ಎರಡು ದಿನಗಳ ಅಂತರರಾಷ್ಟ್ರೀಯ ಸಚಿವರ ಸಮಾವೇಶದಲ್ಲಿ ಈ ಕುರಿತು ಪ್ರಮುಖವಾಗಿ ಚರ್ಚಿಸಲಾಗುವುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಸಮಾವೇಶದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಸಚಿವರು ಪಾಲ್ಗೊಳ್ಳುತ್ತಿಲ್ಲ. ಚೀನಾ ಭಾಗವಹಿಸುವ ಕುರಿತು ಖಚಿತಪಡಿಸಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

ಭಯೋತ್ಪಾದನೆ ನಿಗ್ರಹಕ್ಕಾಗಿ ಉಗ್ರ ಚಟುವಟಿಕೆಗಳಿಗೆ ಹಣಕಾಸಿನ ನೆರವು ತಡೆಗಟ್ಟುವ ನಿಟ್ಟಿನಲ್ಲಿ ಗೃಹ ಸಚಿವಾಲಯವು ಹಮ್ಮಿಕೊಂಡಿರುವ ಈ ಸಮಾವೇಶವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಸಚಿವರು ಪಾಲ್ಗೊಳ್ಳಲಿದ್ದಾರೆ ಎಂದು ಅವರು ಹೇಳಿದರು.

'ಈಡೇರದ ಭರವಸೆ: 26ರಂದು ರಾಜಭವನ ಚಲೊ'

ನವದೆಹಲಿ: ಕೇಂದ್ರ ಸರ್ಕಾರವು ರೈತರಿಗೆ ನೀಡಿದ್ದ ಭರವಸೆಯನ್ನು ಈಡೇರಿಸದ ಕಾರಣ ನವೆಂಬರ್ 26ರಂದು ದೇಶದಾದ್ಯಂತ ರಾಜಭವನ ಚಲೊ ನಡೆಸುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಗುರುವಾರ ಘೋಷಿಸಿದೆ.

ನವೆಂಬರ್ 19 ರಂದು 'ವಿಜಯ ದಿವಸ'ವಾಗಿ ಆಚರಿಸಲಾಗುವುದು. ಡಿಸೆಂಬರ್ 1ರಿಂದ 11ರವರೆಗೆ ಎಲ್ಲಾ ಪಕ್ಷಗಳ ರಾಜ್ಯಸಭಾ, ಲೋಕಸಭಾ ಸದಸ್ಯರ ಕಚೇರಿಗಳಿಗೆ ಜಾಥಾ ನಡೆಸಲಾಗುವುದು ಎಂದು ಎಸ್‌ಕೆಎಂ ಮುಖಂಡ ದರ್ಶನ್ ಪಾಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಂದಿನ ಹೋರಾಟದ ಬಗ್ಗೆ ಚರ್ಚೆ ನಡೆಸಲು ಡಿಸೆಂಬರ್ 8ರಂದು ಸಭೆ ಕರೆಯಲಾಗಿದೆ ಎಂದೂ ಹೇಳಿದ್ದಾರೆ.

ಕಳೆದ ವರ್ಷ ಡಿಸೆಂಬರ್ 9ರಂದು ಪ್ರತಿಭಟನೆ ಹಿಂತೆಗೆದುಕೊಳ್ಳುವ ಮುನ್ನ ಲಿಖಿತ ರೂಪದಲ್ಲಿ ನೀಡಿದ್ದ ಭರವಸೆಗಳನ್ನು ಕೇಂದ್ರ ಸರ್ಕಾರವು ಈಡೇರಿಸಿಲ್ಲ ಎಂದು ಎಸ್‌ಕೆಎಂ ಆರೋಪಿಸಿದೆ.

ನವಲಖಾ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಎಲ್ಗಾರ್ ಪರಿಷತ್–ಮಾವೊ ನಡುವೆ ಸಂಪರ್ಕ ಪ್ರಕರಣದಲ್ಲಿ ಜೈಲಿನಲ್ಲಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ನವಲಖಾ ಅವರನ್ನು ಗೃಹ ಬಂಧನದಲ್ಲಿರಿಸಲು ಸುಪ್ರೀಂ ಕೋರ್ಟ್ ಈಚೆಗೆ ನಿರ್ದೇಶನ ನೀಡಿದ್ದರೂ ಅವರನ್ನು ಇದುವರೆಗೆ ಗೃಹಬಂಧನಕ್ಕೆ ಸ್ಥಳಾಂತರಿಸಿಲ್ಲ. ಇದನ್ನು ಪ್ರಶ್ನಿಸಿ ನವಲಖಾ ಪರ ವಕೀಲರಾದ ನಿತ್ಯಾ ರಾಮಕೃಷ್ಣನ್ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ನವಲಖಾ ಅವರು ಮನೆಯ ವಿಳಾಸ ನೀಡುವ ಬದಲು ಕಮ್ಯುನಿಸ್ಟ್ ಪಕ್ಷದ ಗ್ರಂಥಾಲಯವಿರುವ ಕಚೇರಿಯ ವಿಳಾಸ ನೀಡಿದ್ದಾರೆ ಎಂದು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ನಿತ್ಯಾ ರಾಮಕೃಷ್ಣನ್ ಅವರು 'ಯಾವುದೇ ಪ್ರಕರಣದಲ್ಲಿ ಕಮ್ಯುನಿಸ್ಟ್ ಪಕ್ಷವು ನಿಷೇಧಿತ ಸಂಘಟನೆಯಲ್ಲ' ಎಂದಿದ್ದಾರೆ.

ಛೋಟಾ ರಾಜನ್ ಖುಲಾಸೆಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯ

ಮುಂಬೈ (ಪಿಟಿಐ): 2009ರಲ್ಲಿ ನಡೆದಿದ್ದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ಯಾಂಗ್‌ಸ್ಟರ್ ಛೋಟಾ ರಾಜನ್ ಹಾಗೂ ಇತರ ಮೂವರು ಆರೋಪಿಗಳನ್ನು ಸಿಬಿಐನ ವಿಶೇಷ ನ್ಯಾಯಾಲಯವು ಖುಲಾಸೆಗೊಳಿಸಿದೆ.

ಸಾಕ್ಷ್ಯಾಧಾರಗಳ ಕೊರತೆಯಿಂದ ಹಾಗೂ 'ಸಮಂಜಸ ಅನುಮಾನ'ವನ್ನೂ ಮೀರಿ, ಆರೋಪಿಗಳ ವಿರುದ್ಧದ ಪ್ರಕರಣವನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದ್ದರಿಂದ ಛೋಟಾ ರಾಜನ್ ಹಾಗೂ ಇತರರನ್ನು ವಿಶೇಷ ನ್ಯಾಯಾಧೀಶ ಎ.ಎಂ. ಪಾಟೀಲ್ ಅವರು ಖುಲಾಸೆಗೊಳಿಸಿದ್ದಾರೆ. ಅಲ್ಲದೇ, 'ಕೊಲೆ ಸಂಚಿನಲ್ಲಿ ರಾಜನ್ ಪಾತ್ರವನ್ನು ಸಾಬೀತುಪಡಿಸಲೂ ಪ್ರಾಸಿಕ್ಯೂಷನ್ ವಿಫಲವಾಗಿದೆ' ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಮೊಹಮ್ಮದ್ ಅಲಿ ಶೇಖ್, ಉಮೈದ್ ಶೇಖ್ ಮತ್ತು ಪ್ರಣಯ್ ರಾಣೆ ಖುಲಾಸೆಗೊಂಡ ಇತರ ಮೂವರು.


ಜ್ಞಾನವಾಪಿ: ಪೂಜೆಗೆ ಅವಕಾಶ ಕೋರಿದ ಅರ್ಜಿ ವಿಚಾರಣೆಗೆ ಸಮ್ಮತಿ

ಲಖನೌ: ಜ್ಞಾನವಾಪಿ ಮಸೀದಿಯಲ್ಲಿ ದೊರೆತಿದ್ದ 'ಶಿವಲಿಂಗ'ವನ್ನು ಪೂಜಿಸಲು ಅವಕಾಶ ಕೋರಿ ಸಲ್ಲಿಸಿದ್ದ ಅರ್ಜಿಯು ವಿಚಾರಣೆಗೆ ಯೋಗ್ಯವಾಗಿದೆ ಎಂದು ವಾರಾಣಸಿ ನ್ಯಾಯಾಲಯ ಗುರುವಾರ ಹೇಳಿದೆ.

ವಿಶ್ವ ವೇದಿಕ್ ಸನಾತನ್ ಸಂಘದ ಅಧ್ಯಕ್ಷ ಜಿತೇಂದ್ರ ಸಿಂಗ್ ವಸೀನ್ ಅವರ ಪತ್ನಿ ಕಿರಣ್ ಸಿಂಗ್ ವಸೀನ್ ಮತ್ತು ಇತರರು ಕಳೆದ ತಿಂಗಳು ಅರ್ಜಿ ಸಲ್ಲಿಸಿದ್ದರು. ಈ ಪ್ರದೇಶಕ್ಕೆ ಮುಸ್ಲಿಂ ಸಮುದಾಯದವರಿಗೆ ಪ್ರವೇಶ ನಿಷೇಧಿಸಬೇಕು. ಈ ಪ್ರದೇಶವನ್ನು ಹಿಂದೂಗಳಿಗೆ ವಹಿಸಿಕೊಡಬೇಕು ಎಂದೂ ಅರ್ಜಿಯಲ್ಲಿ ಮನವಿ ಮಾಡಿದ್ದರು.

ಕಿರಣ್ ಸಿಂಗ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಬೇಕು ಎಂದು ಕೋರಿ ಮುಸ್ಲಿಂ ಸಮುದಾಯದವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ತ್ವರಿತ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶ ಮಹೇಂದ್ರ ಕುಮಾರ್ ಪಾಂಡೆ ಅವರು ವಜಾ ಮಾಡಿದರು. ಮುಂದಿನ ವಿಚಾರಣೆಯನ್ನು ನ್ಯಾಯಾಲಯ ಡಿಸೆಂಬರ್ 2ಕ್ಕೆ ಮುಂದೂಡಿದೆ.

ಪಶ್ಚಿಮ ಬಂಗಾಳ ರಾಜ್ಯಪಾಲರಾಗಿ ಸಿ.ವಿ. ಆನಂದ ಬೋಸ್



ಡಾ.ಸಿ.ವಿ. ಆನಂದ ಬೋಸ್

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ನೂತನ ರಾಜ್ಯಪಾಲರಾಗಿ ನಿವೃತ್ತ ಐಎಎಸ್ ಅಧಿಕಾರಿ ಡಾ. ಸಿ.ವಿ. ಆನಂದ ಬೋಸ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ನೇಮಕ ಮಾಡಿದ್ದಾರೆ.

ಆನಂದ ಬೋಸ್ ಅವರು ಅಧಿಕಾರ ಸ್ವೀಕರಿಸುವ ದಿನದಿಂದಲೇ ಅವರ ನೇಮಕಾತಿ ಜಾರಿಗೆ ಬರಲಿದೆ.

ಉದ್ಯಮಿಯ ಅನುಮಾನಾಸ್ಪದ ಸಾವು

ಬೆಂಗಳೂರು: ಉತ್ತರಹಳ್ಳಿಯ ನಿವಾಸಿ, ಟ್ರಾನ್ಸ್‌ಪೋರ್ಟ್ ಸಂಸ್ಥೆಯೊಂದರ ಮಾಲೀಕ ಬಾಲಸುಬ್ರಮಣಿಯನ್ (67) ಎಂಬುವವರ ಮೃತದೇಹವು ಜೆ.ಪಿ. ನಗರದ ರೋಸ್ ಗಾರ್ಡನ್ ಬಳಿ ಪತ್ತೆಯಾಗಿದೆ. ಈ ಸಂಬಂಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭಿಸಿದ್ದಾರೆ.

ಬಾಲಸುಬ್ರಮಣಿಯನ್ ಅವರ ಸಾವಿನ ಬಗ್ಗೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದಾರೆ.

'ಬುಧವಾರ ಬೆಳಿಗ್ಗೆ ಬಾಲಸುಬ್ರಮಣಿಯನ್ ಮನೆಯಿಂದ ಹೊರಟಿದ್ದರು. ರೋಸ್ ಗಾರ್ಡನ್‌ನ ಮನೆಯೊಂದರ ಎದುರು ಬಟ್ಟೆ ಸುತ್ತಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉದ್ಯೋಗ ವಂಚನೆ ಹಗರಣ: ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರೆಕಾಲಿಕ ಉದ್ಯೋಗ ನೀಡುವ ನೆಪದಲ್ಲಿ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಹಗರಣದ ತನಿಖೆ ಮುಂದುವರಿಸಿರುವ ಜಾರಿ ನಿರ್ದೇಶನಾಲಯ(ಇ.ಡಿ), ನಗರದ 16 ಕಡೆ ಶೋಧ ನಡೆಸಿದೆ.

ಸೋಮವಾರದಿಂದ ಶೋಧ ಕಾರ್ಯ ನಡೆಸಿರುವ ಇ.ಡಿ ಅಧಿಕಾರಿಗಳು, ಆರೋಪಿಗಳ ಮನೆ, ಅವರು ಹಣ ವರ್ಗಾವಣೆಗೆ ಬಳಸುತ್ತಿದ್ದ ಫೋನ್ ಪೇ, ಗೂಗಲ್ ಪೇ, ಪೇಟಿಎಂ, ಅಮೆಜಾನ್ ಪೇ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಎಚ್‌ಡಿಎಫ್‌ಸಿ, ಐಸಿಐಸಿಐ, ಧನಲಕ್ಷ್ಮಿ ಬ್ಯಾಂಕ್‌ಗಳಲ್ಲಿನ ಇವರ ಖಾತೆಗಳನ್ನೂ ಪರಿಶೀಲನೆ ನಡೆಸುತ್ತಿದ್ದಾರೆ. 80ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಆರೋಪಿಗಳು ಹೊಂದಿದ್ದು, ಈ ಎಲ್ಲಾ ಖಾತೆಗಳಿಂದ ಒಟ್ಟು ₹1 ಕೋಟಿಯಷ್ಟು ಮೊತ್ತ ಇದೆ. ಖಾತೆಯ ವ್ಯವಹಾರ ಸ್ಥಗಿತಗೊಳಿಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ವಿವರಿಸಿದ್ದಾರೆ.

'ಸೂಪರ್ ಲೈಕ್' ಆ್ಯಪ್‌ಗೆ ಸಂಬಂಧಿಸಿದವರು ಮತ್ತು ಇತರ ಆರೋಪಿಗಳ ವಿರುದ್ಧ ಬೆಂಗಳೂರು ದಕ್ಷಿಣ ಸೈಬರ್ ಪೊಲೀಸ್ ಠಾಣೆಯಲ್ಲಿ 2021ರಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದನ್ನು ಆಧರಿಸಿ ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ತನಿಖೆ ಆರಂಭಿಸಿದ ಇ.ಡಿ ಅಧಿಕಾರಿಗಳು, ತನಿಖೆ ಮುಂದುವರಿಸಿದ್ದಾರೆ.

'ಸೂಪರ್ ಲೈಕ್' ಎಂಬ ಆ್ಯಪ್ ಆಧಾರಿತ ಕಂಪನಿಯು ತನ್ನ ಗ್ರಾಹಕರಿಂದ ಹಣ ಹೂಡಿಕೆ ಮಾಡಿಸಿಕೊಂಡು ಗಣ್ಯರ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆ ಮಾಡಿಸುತ್ತಿತ್ತು. ಪ್ರತಿ ಹಂಚಿಕೆಗೂ ಇಂತಿಷ್ಟು ಲಾಭಾಂಶ ನೀಡುತ್ತಿತ್ತು. ಇದರಿಂದ ಆಕರ್ಷಿತರಾದ ಗ್ರಾಹಕರು ಹೆಚ್ಚು ಹೆಚ್ಚು ಹಣ ಹೂಡಿಕೆ ಮಾಡುತ್ತಿದ್ದರು. ಕೆಲ ದಿನಗಳ ಬಳಿಕ ಲಾಭಾಂಶ ಬರುವುದು ಸ್ಥಗಿತವಾಯಿತು. ಹೂಡಿಕೆ ಮಾಡಿದ್ದ ಹಣ ವಾಪಸ್ ಪಡೆಯಲು ಗ್ರಾಹಕರು ಮುಂದಾದರು. ಆದರೆ, ಈ ಆ್ಯಪ್‌ನಲ್ಲಿ ಹಣ ವಹಿವಾಟು ಸ್ಥಗಿತವಾಗಿದೆ ಎಂಬ ಪ್ರತಿಕ್ರಿಯೆ ಬರಲಾರಂಭಿಸಿತು. ಬಳಿಕ ಗ್ರಾಹಕರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದರು' ಎಂದು ಇ.ಡಿ ವಿವರಿಸಿದೆ.

ಪ್ರಕರಣ ತನಿಖೆ ನಡೆಸಿದ್ದ ಪೊಲೀಸರು, ಇಬ್ಬರು ಚೀನಾ ಪ್ರಜೆಗಳಾದ ಶೆನ್ ಲಾಂಗ್ ಮತ್ತು ಹಿಮಾನಿ ಸೇರಿ 50 ಆರೋಪಿಗಳ ವಿರುದ್ಧ ದೋಷಾರೋಪಣೆಯನ್ನು ನ್ಯಾಯಾಲಯಕ್ಕೆ ಜನವರಿಯಲ್ಲಿ ಸಲ್ಲಿಸಿದ್ದರು. ಬಳಿಕ ಇ.ಡಿ. ತನಿಖೆ ಆರಂಭಿಸಿದೆ.

'ಛಂದ ಪುಸ್ತಕ' ಬಹುಮಾನ ನಿರಾಕರಿಸಿದ ಫಾತಿಮಾ


ಫಾತಿಮಾ

ಬೆಂಗಳೂರು: ಕಥಾ ಸಂಕಲನದ ಹಸ್ತಪ್ರತಿಗೆ 'ಛಂದ ಪುಸ್ತಕ'ವು ನೀಡುವ ಬಹುಮಾನಕ್ಕೆ 2022ನೇ ಸಾಲಿನಲ್ಲಿ ಫಾತಿಮಾ ರಲಿಯಾ ಅವರ ಅಪ್ರಕಟಿತ ಕೃತಿ ಆಯ್ಕೆಯಾಗಿತ್ತು. ವೈಯಕ್ತಿಕ ಕಾರಣಗಳಿಂದಾಗಿ ಈ ಬಹುಮಾನ ಸ್ವೀಕರಿಸಲು ಫಾತಿಮಾ ನಿರಾಕರಿಸಿದ್ದಾರೆ.

ದಕ್ಷಿಣ ಕನ್ನಡದ ಪೆರ್ನೆ ಗ್ರಾಮದ ಕತೆಗಾರ್ತಿ ಫಾತಿಮಾ, ಸದ್ಯ ಉಡುಪಿ ಜಿಲ್ಲೆಯ ಹೆಜಮಾಡಿಯಲ್ಲಿ ವಾಸವಿದ್ದಾರೆ. ಇವರು ಎಂಬಿಎ ಪದವೀಧರರು. 'ವೈಯಕ್ತಿಕ ಕಾರಣಕ್ಕೆ ಬಹುಮಾನ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೇನೆ. ಈ ವಿಷಯವಾಗಿ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ಹೇಳಿದ್ದಾರೆ.

'ಫಾತಿಮಾ ಖಾಸಗಿ ಕಾರಣಗಳಿಂದಾಗಿ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಅವರ ಆಯ್ಕೆ ಸ್ವಾತಂತ್ರ್ಯವನ್ನು ಛಂದ ಪುಸ್ತಕ ಗೌರವಿಸುತ್ತದೆ. ಮುಂದಿನ 4 ವಾರಗಳಲ್ಲಿ ನಮ್ಮ ಪರ್ಯಾಯ ಯೋಜನೆಯನ್ನು ತಿಳಿಸುತ್ತೇವೆ. ಛಂದದ ಓದುಗರಿಗೆ ಹೀಗೆ ಗೊಂದಲ ಉಂಟು ಮಾಡುತ್ತಿರುವುದಕ್ಕೆ ಕ್ಷಮೆ ಯಾಚಿಸುತ್ತೇನೆ' ಎಂದು ಛಂದ ಪುಸ್ತಕ ಪ್ರಕಾಶಕರೂ ಆಗಿರುವ ಸಾಹಿತಿ ವಸುಧೇಂದ್ರ ಗುರುವಾರ ತಿಳಿಸಿದ್ದಾರೆ.

ಮೈಸೂರಿನ ಬಸ್ ನಿಲ್ದಾಣ ನಿರ್ಮಾಣ ವಿವಾದ • ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಗುಂಬಜ್: ತಜ್ಞರ ವರದಿ ಬಳಿಕ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರಿನ ಗುಂಬಜ್ ಮಾದರಿಯ ಬಸ್ ನಿಲ್ದಾಣದ ವಿನ್ಯಾಸದ ಬಗ್ಗೆ ತಜ್ಞರ ಸಮಿತಿ ರಚಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದರು.

ಬಸ್ ನಿಲ್ದಾಣದ ಬಗ್ಗೆ ಸಂಸದ ಪ್ರತಾಪ ಸಿಂಹ ಹಾಗೂ ಶಾಸಕ ರಾಮದಾಸ್ ಮಧ್ಯೆ ಉಂಟಾಗಿರುವ ಸಂಘರ್ಷದ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು ಉತ್ತರಿಸಿದರು.

'ರಾಮದಾಸ್ ಅವರು ಬುಧವಾರ ರಾತ್ರಿ ಭೇಟಿಯಾಗಿ ಎಲ್ಲ ವಿವರ ನೀಡಿದ್ದಾರೆ. ನಾಯಕರ ಮಧ್ಯೆ ಭಿನ್ನಾಭಿಪ್ರಾಯ ಏಕೆ ಉಂಟಾಗಿದೆ ಎಂಬುದನ್ನು ತಿಳಿಯುವುದಕ್ಕಿಂತ ವಿನ್ಯಾಸದ ಬಗ್ಗೆ ಪರಿಶೀಲನೆ ನಡೆಸ ಬೇಕಾಗಿದೆ' ಎಂದು ಹೇಳಿದರು.

ಮೈಸೂರಿಗೆ ತಜ್ಞರನ್ನು ಕಳುಹಿಸಲಿದ್ದು, ಬಸ್ ನಿಲ್ದಾಣದ ಸ್ವರೂಪ ಪರಿಶೀಲಿಸಿ ಬಳಿಕ ವರದಿ ನೀಡುವಂತೆ ಸೂಚಿಸಲಾಗುವುದು. ವರದಿಯನ್ನು ಆಧರಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.



ಮೈಸೂರಿನ ಜೆಎಸ್ಎಸ್ ಕಾಲೇಜು ಬಳಿ ನಿರ್ಮಿಸಿರುವ ಬಸ್ ನಿಲ್ದಾಣ —ಪ್ರಜಾವಾಣಿ ಚಿತ್ರ

ಗೋಪುರದ ಬಣ್ಣ ಬದಲು

ಬಸ್ ಪ್ರಯಾಣಿಕರ ತಂಗುದಾಣದ 'ಗುಂಬಜ್' ಸ್ವರೂಪ ವಿವಾದ ತೀವ್ರಗೊಳ್ಳುತ್ತಿದ್ದಂತೆ ಗೋಪುರಗಳ ಬಣ್ಣವನ್ನು ಗುರುವಾರ ಸಂಪೂರ್ಣವಾಗಿ ಕಡು ಕೆಂಪುಬಣ್ಣಕ್ಕೆ ಬದಲಾಯಿಸಲಾಗಿದೆ.

ಬುಧವಾರ ಒಂದು ಗೋಪುರಕ್ಕಷ್ಟೇ ಕೆಂಪು ಬಣ್ಣವನ್ನು ಬಳಿಯಲಾಗಿತ್ತು. ವಿವಾದ ಪೂರ್ವದಲ್ಲಿ ತಂಗುದಾಣದ ಈ ಗೋಪುರಗಳಿಗೆ ಚಿನ್ನದ ಬಣ್ಣವನ್ನು ಬಳಿಯಲಾಗಿತ್ತು.

ಕಿರುಕುಳ ನೀಡ್ತಿದ್ದಾರೆ, ದಯಮಾಡಿ ಬಿಟ್ಟುಬಿಡಿ: ಶಾಸಕ ರಾಮದಾಸ್

ಮೈಸೂರು: 'ಬಿಜೆಪಿಯಿಂದ ಶಾಸಕರಾದ 11 ಮಂದಿ ಪೈಕಿ ನಾನೊಬ್ಬನೇ ಪಕ್ಷದಲ್ಲಿ ಉಳಿದಿದ್ದೇನೆ. ಈ ವಿವಾದದ ಮೂಲಕ ಕಿರುಕುಳ ನೀಡಲಾಗುತ್ತಿದೆ. ದಯಮಾಡಿ ಬಿಟ್ಟುಬಿಡಿ' ಎಂದು ಶಾಸಕ ರಾಮದಾಸ್ ಗದ್ಗದಿತರಾದರು.

'ತಜ್ಞರ ಸಮಿತಿಯನ್ನು ಕಳುಹಿಸುವಂತೆ ಮುಖ್ಯಮಂತ್ರಿಯನ್ನು ಕೋರಿದ್ದೇನೆ. ತಪ್ಪಾಗಿದ್ದರೆ ಹಣವನ್ನು ಸಂಬಳದಿಂದ ಭರಿಸಲು ಸಿದ್ಧ. ನಿರ್ಮಾಣ ಕೆಲಸ ನಿಲ್ಲಿಸಿ ಎಂದರೆ ನಿಲ್ಲಿಸುವೆ' ಎಂದು ಗುರುವಾರ ಪ್ರತಿಕ್ರಿಯಿಸಿದರು.

'ತಪ್ಪುಮಾಹಿತಿ ಹರಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದೇನೆ. ಅಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರಿಗೂ ಪತ್ರಬರೆದಿದ್ದೇನೆ. ಅರಮನೆ ಮಾದರಿಯಲ್ಲಿ ನಿರ್ಮಿಸಬೇಕೆಂದು ವಿನ್ಯಾಸ ಮಾಡಲಾಗಿತ್ತೇ ಹೊರತು ವಿವಾದ ಸೃಷ್ಟಿಸಬೇಕೆಂದಲ್ಲ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಕಿರುಕುಳ ನೀಡುವಷ್ಟು ದೊಡ್ಡವನಲ್ಲ: ಸಂಸದ ಪ್ರತಾಪಸಿಂಹ

ಮೈಸೂರು: '29 ವರ್ಷಗಳ ಹಿಂದೆಯೇ ರಾಮದಾಸ್ ಶಾಸಕರಾದವರು. ಪ್ರಧಾನಿ ಮೋದಿ ಅವರಿಂದಲೇ ಮೆಚ್ಚುಗೆ ಪಡೆದವರು. ಜಿಲ್ಲೆಯ ಕೆಲವು ರಾಜಕಾರಣಿಗಳ ಬಳಿ ನನ್ನನ್ನು ಸುಡುವಷ್ಟು ದುಡ್ಡಿದೆ. ಅವರಿಗೆ ಕಿರುಕುಳ ಕೊಡುವಷ್ಟು ದೊಡ್ಡವನಲ್ಲ' ಎಂದು ಸಂಸದ ಪ್ರತಾಪಸಿಂಹ ತಿರುಗೇಟು ನೀಡಿದರು.

'ಗುಂಬಜ್‌ನಂತಿರುವ ಗೋಪುರವನ್ನು ಕೆಡವಿದರೆ, ಟಿಪ್ಪುವಿನ ಅನುಯಾಯಿಗಳಿಗೆ ನೋವಾಗಬಹುದು, ಶಿವಾಜಿ ಅನುಯಾಯಿಗಳಿಗಲ್ಲ. ಗುಂಬಜ್‌ಗೂ–ಇಂಡೋ ಸಾರ್ಸೆನಿಕ್ ಕಲೆಗೂ ಸಾಕಷ್ಟು ವ್ಯತ್ಯಾಸವಿದೆ' ಎಂದರು.

'ಹೆದ್ದಾರಿ ಪ್ರಾಧಿಕಾರ ಹಾಗೂ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಮಾದರಿಯಂತೆ ನಿರ್ಮಿಸಲು ಅಭ್ಯಂತರ ಇಲ್ಲ. ಗಡುವಿನವರೆಗೂ ಕಾಯುತ್ತೇನೆ' ಎಂದರು. ಈ ಮೂಲಕ ಗುಂಬಜ್ ಒಡೆಸುವ ಬೆದರಿಕೆ ಸಮರ್ಥಿಸಿಕೊಂಡರು.

ಸುದ್ದಿ 2 ನಿಮಿಷ


ಇನ್ನು ಪಕ್ಷ ನೋಡಿ ಮತ ಹಾಕಲ್ಲ: ಕೂಡಲಸಂಗಮಶ್ರೀ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): 'ಪಕ್ಷ ನೋಡಿ ಮತ ಹಾಕುವ ಕಾಲ ಮುಗೀತು. ಇನ್ನು ನಮ್ಮ ಸಮಾಜದ ವ್ಯಕ್ತಿ ನೋಡಿ ಮತ ಹಾಕುತ್ತೇವೆ' ಎಂದು ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಸಮಾಜದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಗುರುವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮದು ಯಾವುದೇ ವ್ಯಕ್ತಿ, ಪಕ್ಷದ ವಿರುದ್ಧ ಹೋರಾಟ ಅಲ್ಲ. ರಾಜಕೀಯವೂ ಅಲ್ಲ. ನಮ್ಮ ಹೋರಾಟದ ಉದ್ದೇಶ ಮೀಸಲಾತಿ ಮಾತ್ರ' ಎಂದರು.

'ಪಂಚಮಸಾಲಿ ಸಮಾಜ ಹುಟ್ಟುಹಾಕಿದ್ದೆ ಮೀಸಲಾತಿ ಪಡೆಯಲು. ಹೋರಾಟದಿಂದಾಗಿ ರಾಜ್ಯದಲ್ಲಿ ಸಮಾಜದ 1.30 ಕೋಟಿ ಜನಸಂಖ್ಯೆ ಇದೆ ಎಂದು ಗೊತ್ತಾಗಿದೆ. ರಾಜಕಾರಣಿಗಳು ಸಮಾಜವನ್ನು ಚುನಾವಣೆಯಲ್ಲಿ 'ಟ್ರಂಪ್ ಕಾರ್ಡ್' ಮಾಡಿ ಕೊಂಡಿದ್ದಾರೆ. ಹೀಗಾಗಿ ಸಮಾಜ ನಿರೀಕ್ಷಿತ ಅಭಿವೃದ್ಧಿ ಕಂಡಿಲ್ಲ. ಮಕ್ಕಳ ಭವಿಷ್ಯಕ್ಕಾಗಿ ಮೀಸಲಾತಿ ಪಡೆಯೋಣ' ಎಂದರು.

'ಮೀಸಲಾತಿ ಕುರಿತು ಸರ್ಕಾರ ನಾಲ್ಕು ಬಾರಿ ಮಾತು ತಪ್ಪಿದೆ. ನಾವೀಗ ನಿರ್ಣಾಯಕ ಹಂತದಲ್ಲಿದ್ದೇವೆ. ಚುನಾವಣೆ ನೀತಿ ಸಂಹಿತೆಗೆ ಮೊದಲು ಹಕ್ಕು ಪಡೆದೆ ತೀರಬೇಕು. ಸಮಾಜದವರು,ಮುಖಂಡರು ಏನೇ ಭಿನ್ನಾಭಿಪ್ರಾಯ ಇದ್ದರೂ ಪಕ್ಕಕ್ಕಿಟ್ಟು ಒಗ್ಗಟ್ಟಾಗಬೇಕು. ಡಿ. 5ರಂದು ಬೈಲಹೊಂಗಲದ ಸಮಾವೇಶದಲ್ಲಿ ಪಾಲ್ಗೊಳ್ಳ ಬೇಕು' ಎಂದು ಹೇಳಿದರು.




ನ್ಯಾಯಾಧೀಶರ ಹುದ್ದೆಗೆ ಅರ್ಹರ ಕೊರತೆ: ಸುಪ್ರೀಂ ಕೋರ್ಟ್ ಬೇಸರ

ನವದೆಹಲಿ (ಪಿಟಿಐ): ದೇಶದಾದ್ಯಂತ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾಗಿ ಪರ್ಯಾಯ ವ್ಯವಸ್ಥೆ ಮೂಲಕ (ಲ್ಯಾಟರಲ್ ಎಂಟ್ರಿ) ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಅರ್ಹ ವಕೀಲರು ಲಭ್ಯರಾಗದೆ ಇರುವುದಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದೆ.

ಕನಿಷ್ಠ ಏಳು ವರ್ಷಗಳ ಅನುಭವ ಹೊಂದಿರುವ ವಕೀಲರು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾಗಿ ಉನ್ನತ ನ್ಯಾಯಾಂಗ ಸೇವೆಗಳಿಗೆ ಲ್ಯಾಟರಲ್‌ಗೆ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಬಹುದು.

ಸಿಜೆಐ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ರಾಜಸ್ಥಾನದಲ್ಲಿ ಇತ್ತೀಚೆಗೆ ನಡೆದ ಉನ್ನತ ನ್ಯಾಯಾಂಗ ಸೇವೆಗಳ (ಎಚ್‌ಜೆಎಸ್) ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳ ಅರ್ಜಿಯ ವಿಚಾರಣೆ ನಡೆಸಿತು. ಅರ್ಜಿ ಪುರಸ್ಕರಿಸಲು ನಿರಾಕರಿಸಿದ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಜೆ.ಬಿ. ಪಾರ್ದಿವಾಲಾ ಪೀಠ, 'ರಾಜಸ್ಥಾನ ಹೈಕೋರ್ಟ್‌ಗೆ ತೆರಳಲು ಅರ್ಜಿದಾರರಿಗೆ ಮುಕ್ತ ಅವಕಾಶ ನೀಡುತ್ತೇವೆ. ಅಂತಹ ಅರ್ಜಿ ಸಲ್ಲಿಸಿದರೆ ಪೀಠ ರಚಿಸುವಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ಕೋರುತ್ತೇವೆ' ಎಂದು ಹೇಳಿದೆ.



ಕರ್ನಾಟಕ ಸೇರಿ ವಿವಿಧೆಡೆ ಐಟಿ ಶೋಧ: ₹1,300 ಕೋಟಿ ಬೇನಾಮಿ ಆದಾಯ ಪತ್ತೆ

ನವದೆಹಲಿ (ಪಿಟಿಐ): ಕರ್ನಾಟಕ ಸೇರಿದಂತೆ ವಿವಿಧೆಡೆ ಶೋಧ ಕಾರ್ಯ ನಡೆಸಿರುವ ಆದಾಯ ತೆರಿಗೆ ಇಲಾಖೆಯು ₹1,300 ಕೋಟಿಗೂ ಅಧಿಕ ಬೇನಾಮಿ ಆದಾಯ ಪತ್ತೆ ಹಚ್ಚಿದೆ.

ಕರ್ನಾಟಕ ಮೂಲದ ಕೆಲ ರಿಯಲ್ ಎಸ್ಟೇಟ್ ಡೆವಲಪರ್‌ಗಳಿಗೆ ಸೇರಿದ ಬೆಂಗಳೂರು, ಮುಂಬೈ ಮತ್ತು ಗೋವಾದಲ್ಲಿನ ಸುಮಾರು 50 ಸ್ಥಳಗಳಲ್ಲಿ ಅಕ್ಟೋಬರ್ 20 ಮತ್ತು ನವೆಂಬರ್ 2ರಂದು ಶೋಧ ಕಾರ್ಯ ನಡೆಸಲಾಗಿತ್ತು. ಈ ವೇಳೆ ₹1,300 ಕೋಟಿಗೂ ಅಧಿಕ ಬೇನಾಮಿ ಆದಾಯ ಪತ್ತೆಯಾಗಿದೆ' ಎಂದು ಕೇಂದ್ರ ನೇರ ತೆರಿಗೆ ಮಂಡಳಿ ಗುರುವಾರ ತಿಳಿಸಿದೆ.

'ದಾಳಿ ವೇಳೆ ₹24 ಕೋಟಿಗೂ ಅಧಿಕ ಮೌಲ್ಯದ ಚಿನ್ನಾಭರಣ ಹಾಗೂ ನಗದು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕ್ರಯ ಒಪ್ಪಂದ, ಭೂ ಪರಿವರ್ತನೆ, ಭೂ ಸ್ವಾಧೀನ ಪ್ರಮಾಣ ಪತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಸಿಬಿಡಿಟಿ ಹೇಳಿದೆ.

'ಭೂ ಪರಿವರ್ತನೆಗಾಗಿ ಜಂಟಿ ಒಪ್ಪಂದಗಳನ್ನು ಮಾಡಿಕೊಂಡಿದ್ದ ಭೂ ಮಾಲೀಕರು ತಮಗೆ ಸಂದಾಯವಾಗಿರುವ ಹಣದ ಕುರಿತು ಮಾಹಿತಿ ಒದಗಿಸಿರಲಿಲ್ಲ. ಹಲವು ವರ್ಷಗಳಿಂದ ಆದಾಯ ತೆರಿಗೆಯನ್ನೂ ಪಾವತಿಸಿರಲಿಲ್ಲ. ದಾಳಿ ವೇಳೆ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದು, ಆದಾಯದ ಮಾಹಿತಿ ಬಹಿರಂಗಪಡಿಸಿದ್ದಾರೆ' ಎಂದೂ ಮಾಹಿತಿ ನೀಡಿದೆ.

ಅರೆಕಾಲಿಕ ಉದ್ಯೋಗ ಹಗರಣ: 'ಸೂಪರ್ ಲೈಕ್ ಅರ್ನಿಂಗ್ ಅಪ್ಲಿಕೇಷನ್ (ಆನ್‌ಲೈನ್ ಮೂಲಕ ಅರೆಕಾಲಿಕ ಉದ್ಯೋಗ ನೀಡು ವುದಾಗಿ ನಂಬಿಸಿ ವಂಚನೆ) ಹಗ ರಣದ ತನಿಖೆ ನಡೆಸುತ್ತಿರುವ ಇ.ಡಿ ಕರ್ನಾಟಕದಲ್ಲಿ ಒಟ್ಟು 80 ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿದೆ.

ಗಾಯತ್ರಿ ಶಾಂತೇಗೌಡ ಮನೆಯಲ್ಲಿ ಐಟಿ ಶೋಧ

ಬೇಲೂರಿನಲ್ಲಿರುವ ಅಳಿಯನ ಮನೆ ಮೇಲೂ ದಾಳಿ • ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎ.ವಿ.ಗಾಯತ್ರಿ ಶಾಂತೇಗೌಡ ಅವರ ನಗರದ ಮನೆ, ಕಚೇರಿ, ಮರ್ಲೆ ಗ್ರಾಮದ ಬಳಿಯ ಜಲ್ಲಿ ಕ್ರಷರ್ ಸಹಿತ ಆರು ಕಡೆ ಆದಾಯ ತೆರಿಗೆ (ಐಟಿ) ಇಲಾಖೆಯ ಅಧಿಕಾರಿಗಳು ಗುರುವಾರ ಏಕಕಾಲಕ್ಕೆ ದಾಳಿ ಮಾಡಿ, ಪರಿಶೀಲನೆ ನಡೆಸಿದರು.

ನಗರದ ಹೂವಿನ ಮಾರುಕಟ್ಟೆ (ಹಿಂದೂ ಮುಸಾಫಿರ್ ಛತ್ರ)ಬಳಿ ಇರುವ ಮನೆಯಲ್ಲಿ ಬೆಳಿಗ್ಗೆಯಿಂದ ಬೀಡುಬಿಟ್ಟು ಗಾಯತ್ರಿ ಅವರ ವಹಿವಾಟುಗಳ ಮಾಹಿತಿ, ವಿವರ ಕಲೆ ಹಾಕಿದ್ದಾರೆ. ದಾಖಲೆಗಳನ್ನು ಪರಿಶೀಲಿಸಿದರು. ಗಾಯತ್ರಿ ಅವರ ಸಹೋದರನ ಪುತ್ರ ಹಾಗೂ ಗುತ್ತಿದಾರರೊಬ್ಬರ ಮನೆಗಳಲ್ಲೂ ಶೋಧ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಕಾರ್ಯಾಚರಣೆ ಸ್ಥಳಗಳಲ್ಲಿ ಪೊಲೀಸ್ ಪಹರೆ ಇತ್ತು. 'ಗಾಯತ್ರಿ ಅವರು ಊರಿನಲ್ಲಿ ಇಲ್ಲ. ದಂಪತಿ ತಿರುಪತಿಗೆ ತೆರಳಿದ್ದಾರೆ' ಎಂದು ಗಾಯತ್ರಿ ಕುಟುಂಬದ ಆಪ್ತರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗ್ರೆಸ್ ಪ್ರತಿಭಟನೆ: ಆದಾಯ ತೆರಿಗೆ ದಾಳಿ ಖಂಡಿಸಿ ಕಾಂಗ್ರೆಸ್ ಮುಖಂಡರು ಪ್ರತಿಭಟಿಸಿದರು. ಶಾಸಕ ಸಿ.ಟಿ.ರವಿ, ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ಸರ್ಕಾರ ಆದಾಯ ತೆರಿಗೆ ಇಲಾಖೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಸಿ.ಟಿ.ರವಿ ಅವರ ಮನೆ ಮೇಲೂ ಐಟಿ ದಾಳಿ ನಡೆಸಬೇಕು' ಎಂದು ಆಗ್ರಹಿಸಿದರು. ಮುಖಂಡರಾದ ಎಂ.ಎಲ್.ಮೂರ್ತಿ, ಕೆ.ಮಹಮ್ಮದ್, ರೇಖಾ ಹುಲಿಯಪ್ಪಗೌಡ, ಹಿರೇಮಗಳೂರು ಪುಟ್ಟಸ್ವಾಮಿ ಇದ್ದರು.

ಐಟಿ ಕಾರಿನ ಮೇಲೆ 'ಅಭಿನವ ವೆಡ್ಸ್ ದೀಪಿಕಾ' ಸ್ಟಿಕ್ಕರ್!

ಬೇಲೂರು: ಕಾಂಗ್ರೆಸ್ ನಾಯಕಿ ಗಾಯತ್ರಿ ಶಾಂತೇಗೌಡ ಅವರ ಅಳಿಯ, ಸ್ಥಳೀಯ ಜೆಡಿಎಸ್ ಮುಖಂಡ ಬಿ.ಎಂ.ಸಂತೋಷ್ ಮನೆ ಮೇಲೆ ದಾಳಿ ನಡೆಸಿದ ಐಟಿ ಅಧಿಕಾರಿಗಳು ಕಾರಿನ ಮುಂಭಾಗದಲ್ಲಿ 'ಅಭಿನವ ವೆಡ್ಸ್ ದೀಪಿಕಾ' ಸ್ಟಿಕ್ಕರ್ ಅಂಟಿಸಿಕೊಂಡು ಬೆಂಗಳೂರಿನಿಂದ ಬಂದಿದ್ದರು!

ಇಬ್ಬರು ಪಿಎಸ್‌ಐಗಳೊಂದಿಗೆ ಎರಡು ಬಾಡಿಗೆ ಕಾರಿನಲ್ಲಿ ಬಂದಿದ್ದ ಅಧಿಕಾರಿಗಳು, ಸಂತೋಷ್ ಮಾಲೀಕತ್ವದ ಮನೆ, ಹೋಟೆಲ್, ವಸತಿಗೃಹ, ಕಲ್ಯಾಣ ಮಂಟಪದಲ್ಲಿ ದಾಖಲೆ ಪರಿಶೀಲಿಸಿದರು.

ಸಂತೋಷ್ ಹಾಗೂ ಅವರ ತಾಯಿ ಎಂ.ವಿ. ಹೇಮಾವತಿ, ಹೋಟೆಲ್ ಅನ್ನು ಗುತ್ತಿಗೆಗೆ ಲೀಸ್‌ಗೆ ಪಡೆದಿರುವ ಶ್ರೇಯಸ್ ಅವರ ವಿಚಾರಣೆ ನಡೆಸಿದರು. ಸಂಜೆವರೆಗೂ ಪರಿಶೀಲನೆ ನಡೆಯಿತು.

ಸಂತೋಷ್ ತಂದೆ ದಿವಂಗತ ಬಿ.ಸಿ.ಮಂಜುನಾಥ್ ಪುರಸಭೆ ಅಧ್ಯಕ್ಷರಾಗಿದ್ದರು. ಜೆಡಿಎಸ್‌ನ ಪ್ರಭಾವಿ ಮುಖಂಡರಾಗಿದ್ದರು. ತಾಯಿ ಪುರಸಭೆ ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯಾಗಿದ್ದರು.

ರೈತರು ಗಂಧವನ್ನು ಮುಕ್ತವಾಗಿ ಮಾರಾಟ ಮಾಡಲು ಅವಕಾಶ

ಶ್ರೀಗಂಧದ ನೀತಿಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರು ಖಾಸಗಿ ಜಮೀನಿನಲ್ಲಿ ಶ್ರೀಗಂಧವನ್ನು ಬೆಳೆಸಿ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ನೀಡುವ 'ಕರ್ನಾಟಕ ರಾಜ್ಯ ಶ್ರೀಗಂಧ ನೀತಿ–2022' ಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಈ ಕುರಿತು ವಿವರ ನೀಡಿದರು.

ದೇಶ ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶ್ರೀಗಂಧಕ್ಕೆ ವ್ಯಾಪಕ ಬೇಡಿಕೆ ಇದೆ. ಗಂಧವನ್ನು ಬೆಳೆಸುವ ರೈತರಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡುವುದರ ಜತೆಗೆ, ಗಂಧದ ಮರಕ್ಕೆ ಚಿಪ್ ಅಳವಡಿಸಿ ಕಳ್ಳತನ ಆಗುವುದನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳಲಿದೆ. ಈ ಕ್ರಮದಿಂದಾಗಿ ರೈತರ ಆದಾಯವೂ ಹೆಚ್ಚಾಗಲಿದೆ ಎಂದರು.

ರಾಜ್ಯದಲ್ಲಿ ಮೈಸೂರ್ ಸೋಪ್ಸ್‌ಗೆ ಗಂಧದ ಮರಗಳು ಕೊರತೆ ಆಗಿರುವ ಕಾರಣ ಆಸ್ಟ್ರೇಲಿಯಾದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ರೈತರು ಬೆಳೆದ ಗಂಧ ಈ ಕಾರ್ಖಾನೆಗೆ ಪೂರೈಕೆ ಮಾಡುವುದರ ಜತೆಗೆ ಖಾಸಗಿ ಸಂಸ್ಥೆಗಳಿಗೂ ಪೂರೈಕೆ ಮಾಡಬಹುದಾಗಿದೆ. ಹಿಂದೆ ಮುಕ್ತವಾಗಿ ಮಾರಾಟ ಮಾಡುವುದಕ್ಕೆ ನಿರ್ಬಂಧವಿತ್ತು ಎಂದು ಸುಧಾಕರ್ ಹೇಳಿದರು.

ನಂಜನಗೂಡಿನಲ್ಲಿ ವಿಐಪಿ ಅತಿಥಿಗೃಹ

ಮೈಸೂರು ಜಿಲ್ಲೆ ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ವಿಐಪಿ ಅತಿಥಿ ಗೃಹ, ಭಕ್ತಾದಿಗಳಿಗೆ ಕೊಠಡಿಗಳು, ಡಾರ್ಮೆಟರಿ ಕಟ್ಟಡದ ನಿರ್ಮಾಣಕ್ಕಾಗಿ ₹16.52 ಕೋಟಿ ವೆಚ್ಚದ ಕಾಮಗಾರಿಗಳಿಗೆ ಒಪ್ಪಿಗೆ ನೀಡಲಾಗಿದೆ.

ವಿವಿಧ ಜಿಲ್ಲೆಗಳಲ್ಲಿ ಜಲ್ ಜೀವನ್ ಮಿಷನ್ ಯೋಜನೆ ಅಡಿ ಕುಡಿಯುವ ನೀರು ಪೂರೈಕೆಗಾಗಿ ₹600 ಕೋಟಿ ಅನುದಾನಕ್ಕೆ ಒಪ್ಪಿಗೆ ನೀಡಲಾಗಿದೆ.

ಆರೋಗ್ಯ ವಿ.ವಿ ಕಟ್ಟಡಕ್ಕೆ ₹600 ಕೋಟಿ

ರಾಮನಗರ ಜಿಲ್ಲೆಯ ಅರ್ಚಕರಹಳ್ಳಿಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಟ್ಟಡಗಳು ಮತ್ತು ಕ್ಯಾಂಪಸ್ ನಿರ್ಮಾಣಕ್ಕೆ ₹600 ಕೋಟಿ ಅನುದಾನ ನೀಡಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಸಚಿವ ಸುಧಾಕರ್ ತಿಳಿಸಿದರು.

ಐದು ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ

2022– 23 ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆ ಮುಳಬಾಗಿಲಿನಲ್ಲಿ 50 ಹಾಸಿಗೆ, ಚಿಕ್ಕಮಗಳೂರು ಜಿಲ್ಲೆ ತರೀಕೆರೆಯಲ್ಲಿ 100 ಹಾಸಿಗೆ, ರಾಯಚೂರು ಜಿಲ್ಲೆ ಲಿಂಗಸಗೂರಿನಲ್ಲಿ 100 ಹಾಸಿಗೆ, ದಾವಣಗೆರೆ ಜಿಲ್ಲೆ ಹರಿಹರದಲ್ಲಿ 50 ಹಾಸಿಗೆ ಮತ್ತು ಬಾಗಲಕೋಟೆ ಜಿಲ್ಲೆ ಗುಳೇದಗುಡ್ಡದಲ್ಲಿ 50 ಹಾಸಿಗೆಗಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣ, ಬೆಳಗಾವಿ ಮತ್ತು ದಾವಣಗೆರೆಯಲ್ಲಿ 2 ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ₹158 ಕೋಟಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸುಧಾಕರ್ ತಿಳಿಸಿದರು.

ಗೋಕಾಕ ತಾಲ್ಲೂಕು ಕೌಜಲಗಿ, ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ, ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆ, ಕುಮಟಾ ತಾಲ್ಲೂಕು ಗೋಕರ್ಣ, ಶೋರಾಪುರ ತಾಲ್ಲೂಕು ಕಕ್ಕೇರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಾದರಿ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಘಟನೋತ್ತರ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

- ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಅಭಿಯಾನ ಯೋಜನೆಯಡಿ ತುಮಕೂರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ತೀವ್ರ ನಿಗಾ ಘಟಕ ಆರಂಭಿಸಲು ₹56 ಕೋಟಿಗೆ ಒಪ್ಪಿಗೆ
- ಉಪ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೋಗ ಪತ್ತೆ ಉಪಕರಣ, ರಾಸಾಯನಿಕ ಮತ್ತು ರೋಗ ಪತ್ತೆ ಕಿಟ್‌ಗಳನ್ನು ಖರೀದಿಸಲು ಹಾಗೂ ಪ್ರಯೋಗಾಲಯ ಪರೀಕ್ಷೆಗಳ ಮಾದರಿಯನ್ನು ಹತ್ತಿರದ ಹಬ್ ಪ್ರಯೋಗಾಲಯಗಳಿಗೆ ಸಾಗಣೆ ಮಾಡುವ ಉದ್ದೇಶಕ್ಕೆ ₹154.63 ಕೋಟಿಗೆ ಅನುಮೋದನೆ
- ಕೋಲಾರ ಜಿಲ್ಲಾ ಆಸ್ಪತ್ರೆ, ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಆವರಣದಲ್ಲಿ 3 ತೀವ್ರ ನಿಗಾ ಘಟಕ ನಿರ್ಮಾಣ ಕಾಮಗಾರಿಗಳಿಗೆ ಒಟ್ಟು ₹49.89 ಕೋಟಿಗೆ ಆಡಳಿತಾತ್ಮಕ ಅನುಮೋದನೆ
- ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ಟ್ರಾಮಾಕೇರ್ ಸೆಂಟರ್ ನಿರ್ಮಾಣ ಕಾಮಗಾರಿಯನ್ನು ₹35 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ
- ತುಮಕೂರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಸರ್ಕಾರಿ ನರ್ಸಿಂಗ್ ಕಾಲೇಜು ಮತ್ತು ನರ್ಸಿಂಗ್ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ ₹200 ಕೋಟಿಗೆ ಅನುಮೋದನೆ
- ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿನ ಆಸ್ಪತ್ರೆಗಳು, ಚಿಕಿತ್ಸಾಲಯಗಳು, ರೋಗ ಪತ್ತೆ ಹೆಚ್ಚುವ ಕೇಂದ್ರಗಳಿಗೆ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ₹44 ಕೋಟಿಗೆ ಆಡಳಿತಾತ್ಮಕ ಅನುಮೋದನೆ.

ಭುವನೇಶ್ವರಿ ಪ್ರತಿಮೆ ಅನಾವರಣ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಸ್ಥಾಪಿಸಲಾದ ಭುವನೇಶ್ವರಿ ಪ್ರತಿಮೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ಅನಾವರಣ ಮಾಡಿದರು.

ಬೆಂಗಳೂರಿನ ಸ್ತಪತಿ ಕ್ರಿಯೇಷನ್ಸ್‌ನ ಕಲಾವಿದ ಎನ್.ಶಿವದತ್ತ ಅವರು ಪ್ರತಿಮೆ ನಿರ್ಮಿಸಿದ್ದು, ಆರು ಕಾಲು ಅಡಿ ಎತ್ತರ ಇದೆ. ಚತುರ್ಭುಜ, ಪದ್ಮಪೀಠಾಸೀನ, ಪಾಶಾಂಕುಶ, ಅಭಯ ವರದ ಮುದ್ರೆಯೊಂದಿಗೆ ಇರುವ ಭುವನೇಶ್ವರಿಯ ಕೈಯಲ್ಲಿ ಕನ್ನಡ ಧ್ವಜ ಇದೆ.

ಪ್ರತಿಮೆ ಲೋಕಾರ್ಪಣೆ ಮಾಡಿದ ಬೊಮ್ಮಾಯಿ, 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ ಬಹಳ ಮುಖ್ಯ. ನಮ್ಮ ಅವಧಿಯಲ್ಲಿಯೇ ಇದು ಕಾನೂನಾಗಲಿದೆ' ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್, 'ಕನ್ನಡಿಗರು ಎಲ್ಲೇ ಇದ್ದರೂ, ಯಾವುದೇ ಧರ್ಮ ಮತ್ತು ಪಂಥದವರಾಗಿದ್ದರೂ ಅವರಿಗೆ ಭುವನೇಶ್ವರಿಯೇ ಕುಲದೇವತೆ' ಎಂದು ಹೇಳಿದರು.

ತರಂಗ ವಾರಪತ್ರಿಕೆ ವ್ಯವಸ್ಥಾಪಕ ಸಂಪಾದಕಿ ಸಂಧ್ಯಾ ಎಸ್. ಪೈ, 'ಮಕ್ಕಳಿಗೆ ಕನ್ನಡ ಕಡ್ಡಾಯ ಮಾಡುವ ಬದಲಿಗೆ, ಪಾಲಕರಲ್ಲಿ ಕನ್ನಡದ ಅಭಿಮಾನ ಹುಟ್ಟಿಕೊಳ್ಳಬೇಕು' ಎಂದರು.

'2023ರ ಜನವರಿಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಕನ್ನಡ ರಥದ ಜಾಥಾ 28ರಿಂದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಭುವನೇಶ್ವರಿ ದೇವಾಲಯದಿಂದ ಆರಂಭವಾಗಲಿದೆ. ನಾಡಿನಾದ್ಯಂತ ಸಂಚರಿಸಲಿದೆ ಎಂದರು.


ಭುವನೇಶ್ವರಿ ಪ್ರತಿಮೆಯನ್ನು ಬಸವರಾಜ ಬೊಮ್ಮಾಯಿ ಅನಾವರಣ ಮಾಡಿದರು. (ಎಡದಿಂದ) ಸಾಹಿತಿ ದೊಡ್ಡರಂಗೇಗೌಡ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಧ್ಯಾ ಎಸ್. ಪೈ, ಶಿವರಾಜ ಪಾಟೀಲ್ ಮತ್ತು ಮಹೇಶ ಜೋಶಿ ಇದ್ದಾರೆ —ಪ್ರಜಾವಾಣಿ ಚಿತ್ರ

ಮತ ಪಟ್ಟಿಗೆ ಕನ್ನ: ಕಾಂಗ್ರೆಸ್

ಒಂದನೇ ಪುಟದಿಂದ

ಈ ಪ್ರಕರಣದ ಬಗ್ಗೆ ಕೂಲಂಕಶ ವಿಚಾರಣೆ ನಡೆಸಲು ನಾಲ್ವರು ವಿಶೇಷ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಈ ಆರೋಪವನ್ನು ತಳ್ಳಿ ಹಾಕಿರುವ ಮುಖ್ಯಮಂತ್ರಿ ಬೊಮ್ಮಾಯಿ , 'ಕಾಂಗ್ರೆಸ್ ನಾಯಕರು ಸಂಬಂಧ ಇಲ್ಲದ್ದನ್ನು ಕೇಳುತ್ತಿದ್ದಾರೆ. ಆದರೂ, ಇಡೀ ಪ್ರಕರಣದ ಸಮಗ್ರ ತನಿಖೆಗೆ ಸೂಚನೆ ನೀಡುತ್ತೇನೆ. ನಿಜ ಹೊರಗೆ ಬರಲಿ' ಎಂದಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಗುರುವಾರ ತುರ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, 'ಚಿಲುಮೆ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಮತದಾರರ ಜಾಗೃತಿ ಹಾಗೂ ಮತದಾರರ ಪಟ್ಟಿ ಪರಿಷ್ಕರಣೆಗೆ ಇದೇ ಆ. 20ರಂದು ಅನುಮತಿ ನೀಡಲಾಗಿತ್ತು. ಈ ಸಂಸ್ಥೆಯವರು ಮತದಾರರ ಮಾಹಿತಿ ಪಡೆಯಲು ತಮ್ಮ ಸಿಬ್ಬಂದಿಗೆ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಎಂಬ ಗುರುತಿನ ಚೀಟಿ ನೀಡಿದ್ದಾರೆ. ಸರ್ಕಾರಿ, ಅರೆ ಸರ್ಕಾರಿ ಸಿಬ್ಬಂದಿ ಹೊರತಾಗಿ ಬೇರೆಯವರು ಬಿಎಲ್‌ಒ ಆಗಲು ಸಾಧ್ಯವಿಲ್ಲ' ಎಂದರು.

'ಚಿಲುಮೆ ಎಂಟರ್ ಪ್ರೈಸಸ್ ಪ್ರೈ.ಲಿ ಹಾಗೂ ಡಿಪಿ ಹೊಂಬಾಳೆ ಪ್ರೈ.ಲಿ ಎಂಬ ಸಂಸ್ಥೆಗಳೂ ಇದರಲ್ಲಿ ಭಾಗಿಯಾಗಿವೆ. ಈ ಸಂಸ್ಥೆ ಡಿಜಿಟಲ್ ಸಮೀಕ್ಷಾ ಎಂಬ ಆ್ಯಪ್‌ನಲ್ಲಿ ದತ್ತಾಂಶಗಳನ್ನು ಸಂಗ್ರಹಿಸಿದೆ. ಬಿಎಲ್‌ಒ ಗುರುತಿನ ಚೀಟಿ ಹೊಂದಿದವರು ಸರ್ಕಾರದ ಅಧಿಕಾರಿಗಳೆಂದು ಬಿಂಬಿಸಿ ಪ್ರತಿ ಮತದಾರನ ಜಾತಿ, ಲಿಂಗ, ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತಿತರ ಮಾಹಿತಿ ಸಂಗ್ರಹಿಸಿದೆ. ಈ ಸಂಸ್ಥೆಗಳ ನಿರ್ದೇಶಕ ಕೃಷ್ಣಪ್ಪ ರವಿಕುಮಾರ್, ಸರ್ಕಾರದ ಹಿರಿಯ ಸಚಿವರೊಬ್ಬರ ಆಪ್ತ. ಈ ಎಲ್ಲ ಕಂಪನಿಗಳು ಆ ಸಚಿವರ ಮಲ್ಲೇಶ್ವರ ಕ್ಷೇತ್ರದಲ್ಲಿ ಸ್ಥಾಪನೆಯಾಗಿವೆ. ಅವು ಮತದಾರರ ಮಾಹಿತಿ ಕಳವು, ಮಾಹಿತಿ ದುರ್ಬಳಕೆ, ನಂಬಿಕೆ ದ್ರೋಹ, ಪಿತೂರಿ ಅಪರಾಧ ಎಸಗಿವೆ' ಎಂದು ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೆಸರು ಉಲ್ಲೇಖಿಸದೆ ಆರೋಪಿಸಿದರು.

'ಬೊಮ್ಮಾಯಿ ಹಾಗೂ ಸಚಿವರ ಮಾತು ಕೇಳಿಕೊಂಡು ಬಿಬಿಎಂಪಿ ಮುಖ್ಯ ಆಯುಕ್ತರು ಈ ನೀಚ ಕೆಲಸಕ್ಕೆ ಕೈಹಾಕಿದ್ದಾರೆ. ಈ ಸಂಚು ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲ, ಬೇರೆ ಕಡೆಗಳಲ್ಲೂ ನಡೆಯುತ್ತಿದೆ. ಚಿಲುಮೆ ಸಂಸ್ಥೆಗೆ ನೀಡಿದ್ದ ಅನುಮತಿಯನ್ನು ನ. 16ರಂದು ಸರ್ಕಾರ ಹಿಂಪಡೆದಿದೆ. ಆದರೆ, ಅದಕ್ಕೆ ಯಾವುದೇ ಸ್ಪಷ್ಟ ಕಾರಣ ನೀಡಿಲ್ಲ. ಬದಲಿಗೆ, ಈ ಸಂಸ್ಥೆ ವಿಶ್ವಾಸಾರ್ಹತೆ ಉಳಿಸಿಕೊಳ್ಳಲು ವಿಫಲವಾಗಿದ್ದು, ಯಾರೂ ಕೂಡ ಈ ಸಂಸ್ಥೆಗೆ ತಮ್ಮ ಮಾಹಿತಿ ಹಂಚಿಕೊಳ್ಳಬಾರದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ್ದಾರೆ. ಆದರೆ, ಸಂಸ್ಥೆಯು ಈಗಾಗಲೇ ಸಾವಿರಾರು ಸಿಬ್ಬಂದಿ ಮೂಲಕ ಮತದಾರರ ಮಾಹಿತಿ ಸಂಗ್ರಹಿಸಿದ್ದು, ಈ ಅಕ್ರಮಕ್ಕೆ ಬೊಮ್ಮಾಯಿ ನೇರ ಹೊಣೆ' ಎಂದರು.

ಮಾನನಷ್ಟ ಮೊಕದ್ದಮೆ: ಅಶ್ವತ್ಥನಾರಾಯಣ

'ಹೊಂಬಾಳೆ ಎನ್ನುವ ಯಾವುದೋ ಒಂದು ಸಂಸ್ಥೆಯ ಹೆಸರು ಹಿಡಿದುಕೊಂಡು ನನ್ನ ಮೇಲೆ ನಿರಾಧಾರ ಆರೋಪ ಮಾಡುತ್ತಿದ್ದಾರೆ. ಪದೇ ಪದೇ ನನ್ನ ಹೆಸರಿಗೆ ಮಸಿ ಬಳಿಯಲು ಹೊಂಚು ಹಾಕುತ್ತಿರುವ ಅವರೆಲ್ಲರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

'ಕಾಂಗ್ರೆಸ್ ನಾಯಕರು ಹೇಳುತ್ತಿರುವ ಹೊಂಬಾಳೆ ಸಂಸ್ಥೆಗೂ ನಮ್ಮ ಸೋದರನ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ. ಮತದಾರರ ಪಟ್ಟಿ ಪರಿಷ್ಕರಣೆ ಚುನಾವಣಾ ಆಯೋಗದ ಕೆಲಸ. ಅದರಲ್ಲಿ ಮುಖ್ಯಮಂತ್ರಿಯಾಗಲಿ, ನನಗಾಗಲಿ ಏನೂ ಇಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಕಾಂಗ್ರೆಸ್ಸಿನವರು ಆಯೋಗಕ್ಕೆ ದೂರು ಕೊಡಲಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ' ಎಂದರು.

'ಆಪರೇಷನ್ ಕಮಲದ ಮುಂದುವರಿಕೆ'

'ಆಪರೇಷನ್ ಕಮಲ'ದ ಮುಂದುವರಿದ ಭಾಗವಾದ 'ಆಪರೇಷನ್ ಮತದಾರರ ಪಟ್ಟಿ ಪರಿಷ್ಕರಣೆ' ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಗಂಭೀರ ಅಪರಾಧ ಪ್ರಕರಣ' ಎಂದು ಸಿದ್ದರಾಮಯ್ಯ ಹೇಳಿದರು. 'ಈ ಪ್ರಕರಣವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ರಾಜ್ಯ ಸರ್ಕಾರ, ಬಿಬಿಎಂಪಿ ಮತ್ತು ಚುನಾವಣಾ ಆಯೋಗ ಈ ಹೀನಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನಗಳಿವೆ. ಕೇಂದ್ರ ಚುನಾವಣಾ ಆಯೋಗ ಕೂಡಾ ಇದನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ಚಿಲುಮೆಗೆ ನೀಡಿದ್ದ ಅನುಮತಿ ರದ್ದು'

ಬೆಂಗಳೂರು: ಮತದಾರರ ಜಾಗೃತಿ ಅಭಿಯಾನ ನಡೆಸಲು ಚಿಲುಮೆ ಸಂಸ್ಥೆಗೆ ನೀಡಿದ್ದ ಅನುಮತಿಯನ್ನು, ಆ ಸಂಸ್ಥೆಯ ಬಗ್ಗೆ ದೂರು ಬಂದ ಕೂಡಲೇ ರದ್ದುಪಡಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಎಂಬ ಗುರುತಿನ ಚೀಟಿಯನ್ನು ದುರುಪಯೋಗ ಮಾಡಿಕೊಂಡ ಬಗ್ಗೆ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ವೈಟ್‌ಫೀಲ್ಡ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಚುನಾವಣಾ ನಿಯಮಗಳನ್ನು ಉಲ್ಲಂಘಿಸಿದ್ದರೆ ನಿಯಮಾನುಸಾರ ಕ್ರಮ ಜರುಗಿಸಲು ಸೂಚಿಸಲಾಗಿದೆ ಎಂದಿದ್ದಾರೆ. ಜಿಲ್ಲಾ ಚುನಾವಣಾಧಿಕಾರಿ, ಬಿಬಿಎಂಪಿಯು ಯಾವುದೇ ಸಂಸ್ಥೆಗೆ ಸಮೀಕ್ಷೆ ನಡೆಸಲು ಅನುಮತಿ ನೀಡಿಲ್ಲ ಎಂದಿದ್ದಾರೆ.

'ಕಾಂಗ್ರೆಸ್ ಕೃತ್ಯವನ್ನೇ ಬಿಜೆಪಿ ಮಾಡುತ್ತಿದೆ'

'ಮತದಾರರ ಜಾಗೃತಿ ಹೆಸರಿನಲ್ಲಿ ಮತದಾರರ ದತ್ತಾಂಶ ಕದಿಯುವ ಕೃತ್ಯಕ್ಕೆ ಬಿಜೆಪಿ ಇಳಿದಿದೆ. ಈ ಹಿಂದೆ ಕಾಂಗ್ರೆಸ್ ಮಾಡಿದ್ದ ಕೃತ್ಯವನ್ನೇ ಈಗ ಬಿಜೆಪಿ ಮಾಡುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

'ಸರ್ಕಾರದ ದುಡ್ಡಿನಲ್ಲಿ ಬಿಜೆಪಿಯು ಚುನಾವಣಾ ಅಕ್ರಮಕ್ಕೆ ಮುಂದಾಗಿದ್ದು, ಮತದಾರರ ಮಾಹಿತಿಯನ್ನು ಖಾಸಗಿಯವರಿಗೆ ನೀಡಲಾಗುತ್ತಿದೆ. ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಬೇನಾಮಿ ಹೆಸರಿನ ಸಚಿವರ ಸಂಸ್ಥೆಯೇ ಇದನ್ನು ಮಾಡುತ್ತಿದೆ. ಈ ಹಿಂದೆ ಬಿಬಿಎಂಪಿಯಲ್ಲಿ ಅಕ್ರಮ ಮಾಡಿ ಮಧ್ಯರಾತ್ರಿ ಕಡತಗಳಿಗೆ ಬೆಂಕಿ ಹಾಕಿದ್ದು ಇದೇ ಕಂಪನಿ' ಎಂದು ದೂರಿದರು.

ಹುದ್ದೆಗಳ ಭರ್ತಿ: ವೇಳಾಪಟ್ಟಿ ಪ್ರಕಟಿಸಿದ ರೈಲ್ವೆ

ನವದೆಹಲಿ: ರೈಲ್ವೆ ತಾಂತ್ರಿಕೇತರ ಹುದ್ದೆಗಳ ನೇಮಕಾತಿಗೆ ನಡೆದಿದ್ದ ಪರೀಕ್ಷೆಗಳ ಫಲಿತಾಂಶಗಳ ಪ್ರಕಟಣೆ ಸಂಬಂಧ ಭಾರತೀಯ ರೈಲ್ವೆಯು ವೇಳಾಪಟ್ಟಿ ಪ್ರಕಟಿಸಿದೆ.

ರೈಲ್ವೆ ಇಲಾಖೆ ಸಿದ್ಧಪಡಿಸಿರುವ ವೇಳಾಪಟ್ಟಿಯ ಪ್ರಕಾರ, ರೈಲ್ವೆಯ 'ಲೆವೆಲ್–5'ರ ಹುದ್ದೆಗಳ ಪರೀಕ್ಷಾ ಫಲಿತಾಂಶ ನವೆಂಬರ್ ಮೂರನೇ ವಾರದೊಳಗೆ ಪ್ರಕಟವಾಗಲಿದೆ. ಈ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆಯು ಡಿಸೆಂಬರ್ ಎರಡನೇ ವಾರದಲ್ಲಿ ಪೂರ್ಣಗೊಳ್ಳಲಿದ್ದು, ಜನವರಿ ಮೂರನೇ ವಾರದೊಳಗೆ ಅರ್ಹರನ್ನು ಆಯ್ಕೆ ಮಾಡಲಾಗುತ್ತದೆ ಎಂದು ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಲೆವೆಲ್–4'ರ ಹುದ್ದೆಗಳ ಆಕಾಂಕ್ಷಿಗಳ ಫಲಿತಾಂಶವನ್ನು ಜನವರಿ ಎರಡನೇ ವಾರದಲ್ಲಿ ನೀಡಲಾಗುತ್ತದೆ. ಫೆಬ್ರುವರಿ ಮೊದಲ ವಾರದಲ್ಲಿ ಈ ಅಭ್ಯರ್ಥಿಗಳ ದಾಖಲೆ ಪರಿಶಿಲನೆ, ವೈದ್ಯಕೀಯ ಪರೀಕ್ಷೆ ನಡೆಸಿ, ಅದೇ ತಿಂಗಳ ನಾಲ್ಕನೇ ವಾರದಲ್ಲಿ ಆಯ್ಕೆ ಮಾಡಲಾಗುತ್ತದೆ.

'ಲೆವೆಲ್–3'ರ ಹುದ್ದೆಗಳ ಆಕಾಂಕ್ಷಿಗಳ ಆಯ್ಕೆ ಪ್ರಕ್ರಿಯೆ 2023ರ ಮಾರ್ಚ್ ಮೊದಲ ವಾರದಲ್ಲಿ ಪೂರ್ಣಗೊಳ್ಳಲಿದ್ದು, 'ಲೆವಲ್–2'ರ ಹುದ್ದೆಗಳ ಆಯ್ಕೆ ಪ್ರಕ್ರಿಯೆ 2023ರ ಮಾರ್ಚ್ ನಾಲ್ಕನೇ ವಾರದಲ್ಲಿ ಅಂತಿಮಗೊಳ್ಳಲಿದೆ.

ಇವುಗಳಲ್ಲಿ ಸ್ಟೇಷನ್ ಮಾಸ್ಟರ್‌ಗಳು, ಗೂಡ್ಸ್ ಗಾರ್ಡ್‌ಗಳು, ವಾಣಿಜ್ಯ ಅಪ್ರೆಂಟಿಸ್‌ಗಳು, ಟಿಕೆಟ್ ಕ್ಲರ್ಕ್‌ಗಳು, ಜೂನಿಯರ್ ಅಕೌಂಟ್ ಅಸಿಸ್ಟೆಂಟ್‌ಗಳು, ಸೀನಿಯರ್ ಕ್ಲರ್ಕ್ ಕಮ್ ಟೈಪಿಸ್ಟ್‌ಗಳು ಮತ್ತು ಟೈಮ್‌ಕೀಪರ್‌ಗಳಂತಹ ಉದ್ಯೋಗಗಳು ಸೇರಿವೆ.

'ಲೆವೆಲ್–6'ರ 7,124 ಹುದ್ದೆಗಳ ಫಲಿತಾಂಶ ಸೆಪ್ಟೆಂಬರ್‌ನಲ್ಲಿ ಪ್ರಕಟಿಸಲಾಗಿದ್ದು, ದಾಖಲಾತಿ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆ ನಡೆಯುತ್ತಿದೆ ಎಂದು ರೈಲ್ವೆ ತಿಳಿಸಿದೆ.

ಈ ವರ್ಷದ ತಾಂತ್ರಿಕೇತರ ಹುದ್ದೆಗಳ ಪರೀಕ್ಷೆಗಳಲ್ಲಿ ಆಯ್ಕೆಯಾದ 35,281 ಅಭ್ಯರ್ಥಿಗಳಿಗೆ 2023ರ ಮಾರ್ಚ್ ಅಂತ್ಯದೊಳಗೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ರೈಲ್ವೆ ಇಲಾಖೆ ಹೇಳಿದೆ.

ಸಿಎಂ ಬಸವರಾಜ ಬೊಮ್ಮಾಯಿ ಅಭಿಮತ ● ಸಾಧಕರಿಗೆ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ

'ಆತ್ಮಸಾಕ್ಷಿಯಂತೆ ನಡೆದರೆ ಸಾಧನೆ ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆತ್ಮಸಾಕ್ಷಿಯಂತೆ ನಡೆದುಕೊಳ್ಳುವುದು ಹಾಗೂ ಮುಗ್ಧತೆಯನ್ನು ಉಳಿಸಿಕೊಳ್ಳುವುದು ಜೀವನದಲ್ಲಿ ಕಷ್ಟ. ಯಾರು ಇವೆರಡನ್ನೂ ಕಾಪಾಡಿಕೊಳ್ಳುತ್ತಾರೆಯೋ ಅವರು ಸಾಧನೆ ಮಾಡುತ್ತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಬೇಲಿಮಠದ ಶಿವರುದ್ರ ಸ್ವಾಮೀಜಿ ಅವರಿಗೆ 'ರಮಣಶ್ರೀ ಶರಣ ಜೀವಮಾನ ಸಾಧಕ ಪ್ರಶಸ್ತಿ' (₹ 50 ಸಾವಿರ ನಗದು) ಹಾಗೂ ಎಂಟು ಮಂದಿಗೆ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ಯಾರಿಗೆ ತಮ್ಮ ಅಸ್ತಿತ್ವ ಜಾಗೃತ ಆಗಿರುತ್ತದೆಯೋ ಅವರು ಸದಾ ಕ್ರಿಯಾಶೀಲರಾಗಿರುತ್ತಾರೆ. ನಾವು ಸದಾ ಇತರರಿಗಾಗಿ ಬದುಕುತ್ತೇವೆ. ನಮ್ಮ ಬದುಕಿನ ಉದ್ದೇಶದ ಬಗ್ಗೆಯೂ ಚಿಂತನೆ ಮಾಡಿಕೊಳ್ಳಬೇಕು. ಆಗ ನಮ್ಮ ಬದುಕಿನ ದಿಕ್ಕು ಬದಲಾಗುತ್ತದೆ. ಲೌಕಿಕ ಸಾಧನೆ, ಹುದ್ದೆಗಳ ಬಗ್ಗೆ ಆಸಕ್ತಿ ಹೆಚ್ಚುತ್ತಿದೆ. ನಮ್ಮ ಆತ್ಮಸಾಕ್ಷಿಯ ಅನುಗುಣವಾಗಿ ಸಾಗಿದರೆ ಪ್ರತಿಕ್ಷಣ ಅಮೃತ ಘಳಿಗೆ ಆಗಲಿದೆ' ಎಂದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, 'ವಿಧಾನಸೌಧ ಕಟ್ಟಡದ ಮೇಲೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಬರೆಯಲಾಗಿದೆ. ಅದೇ ರೀತಿ, ಸುವರ್ಣ ಸೌಧದ ಮೇಲೆ 'ಕಾಯಕವೇ ಕೈಲಾಸ' ಎಂದು ಬರೆಸಬೇಕು. ಬಸವಣ್ಣ ಅವರ ಹೆಸರಿನಲ್ಲಿ ಥೀಮ್ ಪಾರ್ಕ್ ಸ್ಥಾಪಿಸಬೇಕು' ಎಂದರು.

ಪ್ರಶಸ್ತಿ ಸ್ವೀಕರಿಸಿದ ಶಿವರುದ್ರ ಸ್ವಾಮೀಜಿ, 'ಸಾಹಿತ್ಯ, ಸಂಗೀತ ಸೇರಿ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ, ಗೌರವಿಸುತ್ತಿರುವುದು ಶ್ಲಾಘನೀಯ' ಎಂದರು.

ಷಡಕ್ಷರಿ ಅವರ 'ಕ್ಷಣ ಹೊತ್ತು ಅಣಿಮುತ್ತು' ಕೃತಿಯ ಭಾಗ 10 ಮತ್ತು ಭಾಗ 11ರ ಬಗ್ಗೆ ಮಾತನಾಡಿದ ಕನ್ನಡ ಪ್ರಭ ಪತ್ರಿಕೆಯ ಪ್ರಧಾನ ಸಂಪಾದಕ ರವಿ ಹೆಗಡೆ, 'ಪುಸ್ತಕದಲ್ಲಿ ಅನುಭವದ ಜತೆಗೆ ನೀತಿಯನ್ನು ಹೇಳಲಾಗಿದೆ. ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಕೃತಿಯ ರೂಪದಲ್ಲಿ ಹೊರತರಲಾಗಿದೆ. ಜ್ಞಾನ ಮತ್ತು ಚಿಂತನೆಯ ಹರವು ವಿಸ್ತರಿಸಿಕೊಳ್ಳಲು ಇದು ಸಹಕಾರಿ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ (ಎಡಗಡೆಯಿಂದ) ದಾಕ್ಷಾಯಿಣಿ ಜಯದೇವಪ್ಪ, ಸಿದ್ಧರಾಮ ಕೇಸಾಪುರ, ಮೃತ್ಯುಂಜಯ ದೊಡ್ಡವಾಡ, ಫ.ಗು. ಸಿದ್ಧಾಪುರ, ಬಿ.ವಿ. ಶಿರೂರ, ಗುರು ಮಹಾಂತ ಸ್ವಾಮೀಜಿ, ಶಿವಯೋಗಿ ದೇವರು ಮತ್ತು ಬಸವ ಯೋಗೇಶ್ ಅವರಿಗೆ ಬಸವರಾಜ ಬೊಮ್ಮಾಯಿ ಅವರು 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ ಮಾಡಿದರು. ವೀರೇಂದ್ರ ಷಡಕ್ಷರಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ವಸತಿ ಸಚಿವ ವಿ. ಸೋಮಣ್ಣ, ಸಿ. ಸೋಮಶೇಖರ್, ಎಸ್. ಷಡಕ್ಷರಿ, ಶಿವರುದ್ರ ಸ್ವಾಮೀಜಿ, ಅರುಣಾ ಸತೀಶ್, ರವಿ ಹೆಗಡೆ ಹಾಗೂ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಇದ್ದಾರೆ. –ಪ್ರಜಾವಾಣಿ ಚಿತ್ರ

8 ಮಂದಿಗೆ 'ರಮಣಶ್ರೀ ಶರಣ ಪ್ರಶಸ್ತಿ'

ಹುಬ್ಬಳ್ಳಿಯ ಬಿ.ವಿ. ಶಿರೂರ, ವಿಜಯಪುರದ ಫ.ಗು. ಸಿದ್ದಾಪುರ, ಬೆಂಗಳೂರಿನ ಮೃತ್ಯುಂಜಯ ದೊಡ್ಡವಾಡ ಹಾಗೂ ಬಾಗಲಕೋಟೆಯ ಇಳಕಲ್‌ನ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಗುರು ಮಹಾಂತ ಸ್ವಾಮೀಜಿ ಅವರಿಗೆ 'ರಮಣಶ್ರೀ ಶರಣ ಪ್ರಶಸ್ತಿ' (ತಲಾ ₹ 40 ಸಾವಿರ) ಹಾಗೂ ಬೆಳಗಾವಿಯ ಕಾರಂಜಿ ಮಠದ ಶಿವಯೋಗಿ ದೇವರು, ಶಿವಮೊಗ್ಗದ ದಾಕ್ಷಾಯಿಣಿ ಜಯದೇವಪ್ಪ, ಬೆಂಗಳೂರಿನ ಸಿದ್ದರಾಮ ಕೇಸಾಪುರ ಹಾಗೂ ನಂಜನಗೂಡಿನ ವಿಶ್ವಬಸವ ಸೇನೆಯ ಬಸವ ಯೋಗೇಶ್ ಅವರಿಗೆ 'ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ' (ತಲಾ ₹ 20 ಸಾವಿರ) ಪ್ರದಾನ ಮಾಡಲಾಯಿತು.

ನಿಂತಿದ್ದ ಬಾಲಕಿ ರಸ್ತೆಗೆಸೆದ ಕಿಡಿಗೇಡಿ

ಕಾಸರಗೋಡು (ಕೇರಳ): ಮದರಸಾದ ಹೊರಗೆ, ರಸ್ತೆ ಬದಿಯಲ್ಲಿ ಮನೆಯವರಿಗಾಗಿ ಕಾಯುತ್ತಿದ್ದ ಎಂಟು ವರ್ಷ ವಯಸ್ಸಿನ ಬಾಲಕಿಗೆ ವ್ಯಕ್ತಿಯೊಬ್ಬ ಹೊಡೆದು, ಎತ್ತಿ ರಸ್ತೆಗೆ ಎಸೆದ ಘಟನೆ ಮಂಜೇಶ್ವರದಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ.

ಸಿಸಿಟಿವಿ ಕ್ಯಾಮೆರಾದ ದೃಶ್ಯಗಳ ಆಧಾರದಲ್ಲಿ ಆರೋಪಿ, ಸ್ಥಳೀಯ ನಿವಾಸಿ 31 ವರ್ಷದ ಅಬೂಬಕ್ಕರ್ ಸಿದ್ದೀಕ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಬಾಲಕಿ ಆಘಾತಕ್ಕೆ ಒಳಗಾಗಿರುವುದನ್ನು ಗಮನಿಸಿದ ಮನೆಯವರು ವಿಚಾರಿಸಿದಾಗ, 'ಯಾರೋ ನನಗೆ ಹೊಡೆದರು' ಎಂದು ಹೇಳಿದ್ದಳು. ಶಾಲೆಯ ಸಿಸಿಟಿವಿ ದೃಶ್ಯಗಳನ್ನು ನೋಡಿದಾಗ, ರಸ್ತೆಯ ಇನ್ನೊಂದು ಬದಿಯಿಂದ ಬಂದ ವ್ಯಕ್ತಿ ಬಾಲಕಿಗೆ ಹೊಡೆದು, ಆಕೆಯನ್ನು ಎತ್ತಿ ರಸ್ತೆಗೆ ಎಸೆದಿದ್ದು ಮಾತ್ರವಲ್ಲದೆ, ನಂತರ ಏನೂ ನಡೆದಿಲ್ಲವೇನೋ ಎಂಬಂತೆ ನಡೆದು ಹೋಗಿದ್ದು ಕಾಣಿಸಿದೆ. ಈ ದೃಶ್ಯಾವಳಿ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ.

'ಬಾಲಕಿ ತುಂಬಾ ಹೆದರಿದ್ದಳು. ಏನಾಗಿದೆ ಎಂದು ತಿಳಿಸಲೂ ಹಿಂಜರಿಯುತ್ತಿದ್ದಳು. ಒತ್ತಾಯಿಸಿದಾಗ ಹೊಡೆದಿದ್ದನ್ನು ಹೇಳಿದ್ದಳು' ಎಂದು ಬಾಲಕಿಯ ಸಂಬಂಧಿಯೊಬ್ಬರು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಈ ದೃಶ್ಯ ಹರಿದಾಡುತ್ತಿದ್ದಂತೆ ಭಾರಿ ಆಕ್ರೋಶ ವ್ಯಕ್ತವಾಯಿತು. ಪೊಲೀಸರು ಆರೋಪಿ ವಿರುದ್ಧ ಐಪಿಸಿ ಸೆಕ್ಷನ್ 307 (ಕೊಲೆಗೆ ಯತ್ನ) ಅಡಿ ಹಾಗೂ ಪೊಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ಬಾಲಕಿಗೆ ಗಾಯಗಳಾಗಿಲ್ಲ. ತಪಾಸಣೆಗೆ ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ತಿಳಿಸಿದ್ದಾರೆ.

ರೈತನಿಗೆ ಪರಿಹಾರ ವಿಳಂಬ: ಅಧಿಕಾರಿಗಳ ವಾಹನ ಜಪ್ತಿ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ರಸ್ತೆ ನಿರ್ಮಿಸಲು ಸ್ವಾದೀನ ಪಡೆದಿದ್ದ ಭೂಮಿಗೆ ರೈತನಿಗೆ ₹11 ಲಕ್ಷ ಪರಿಹಾರಧನ ನೀಡಲು ವಿಳಂಬ ಹಿನ್ನೆಲೆಯಲ್ಲಿ ಕೋರ್ಟ್ ಆದೇಶದಂತೆ ಉಪವಿಭಾಗಾಧಿಕಾರಿ ಮತ್ತು ಲೋಕೋಪಯೋಗಿ ಇಲಾಖೆ ಎಇಇ ಅವರ ವಾಹನಗಳನ್ನು ಗುರುವಾರ ಜಪ್ತಿ ಮಾಡಲಾಗಿದೆ.

15 ವರ್ಷದ ಹಿಂದೆ ಚಿಕ್ಕೋಡಿ ತಾಲ್ಲೂಕಿನ ಮಾಂಗೂರ (ಈಗಿನ ನಿಪ್ಪಾಣಿ ತಾಲ್ಲೂಕು) ಗ್ರಾಮದ ರೈತ ಬುದ್ದಿರಾಜ ಶಾಂತಿನಾಥ ಪಾಟೀಲ ಅವರ 31 ಗುಂಟೆ ಭೂಮಿಯನ್ನು ಇಲಾಖೆ ಪಡೆದುಕೊಂಡಿತ್ತು. ಈವರೆಗೂ ರೈತನಿಗೆ ಪರಿಹಾರ ಧನ ನೀಡಿರಲಿಲ್ಲ.

ರೈತ ಪರಿಹಾರ ಕೋರಿ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ 2021ರಲ್ಲಿ ₹11,70,757 ಪರಿಹಾರ ನೀಡಲು ಆದೇಶಿಸಿತ್ತು. ಒಂದು ವರ್ಷ ಕಳೆದರೂ ಪರಿಹಾರ ನೀಡದ್ದರಿಂದ ವಾಹನಗಳ ಜಪ್ತಿಗೆ ನ್ಯಾಯಾಲಯ ಆದೇಶಿಸಿತ್ತು.

ವಾಹನ ಜಪ್ತಿಗೆ ಬಂದ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಮಾಧವ ಗಿತ್ತೆ ಮತ್ತು ನ್ಯಾಯಾಲಯ ಸಿಬ್ಬಂದಿ ಮಧ್ಯೆ ಕೆಲಹೊತ್ತು ಮಾತಿನ ಚಕಮಕಿಯೂ ನಡೆಯಿತು.

ಜಯಲಲಿತಾ ಸಾವು: ಸಿಬಿಐ ತನಿಖೆ ಕೋರಿದ್ದ ಅರ್ಜಿ ವಜಾ

ಚೆನ್ನೈ (ಪಿಟಿಐ): ದಿವಂಗತ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ಗುರುವಾರ ತಿರಸ್ಕರಿಸಿದೆ.

ಸಾಮಾಜಿಕ ಕಾರ್ಯಕರ್ತ ಆರ್. ಆರ್.ಗೋಪಾಲ್‌ಜಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಟಿ.ರಾಜಾ ಹಾಗೂ ನ್ಯಾಯಮೂರ್ತಿ ಡಿ.ಕೃಷ್ಣಕುಮಾರ್ ಅವರಿದ್ದ ಪೀಠ ಅರ್ಜಿಯನ್ನು ವಜಾಗೊಳಿಸಿತು.

'ರಾಜೀವ್ ಹಂತಕರ ಬಿಡುಗಡೆ: ತೀರ್ಪು ಮರುಪರಿಶೀಲಿಸಿ'

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿಗಳ ಅವಧಿಪೂರ್ವ ಬಿಡುಗಡೆ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಕೇಂದ್ರ ಸರ್ಕಾರವು ಗುರುವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

'ಪ್ರಕರಣದಲ್ಲಿ ತಾನು ಪ್ರತಿವಾದಿಯಾಗಿದ್ದರೂ ಕೂಡ ತನ್ನ ಅಭಿಪ್ರಾಯ ಆಲಿಸದೆ, ಅದಕ್ಕೆ ಅವಕಾಶ ನೀಡದೆ ಅಪರಾಧಿಗಳನ್ನು ಜೈಲಿನಿಂದ ಬಿಡುಗಡೆ ಮಾಡುವ ಸಂಬಂಧ ಆದೇಶ ಹೊರಡಿಸಲಾಗಿದೆ' ಎಂದು ಕೇಂದ್ರವು ತನ್ನ ಅರ್ಜಿಯಲ್ಲಿ ಹೇಳಿದೆ.

ಏಡ್ಸ್, ಕ್ಯಾನ್ಸರ್‌ಗೆ ಸ್ವಮೂತ್ರಪಾನವೇ ಮದ್ದು!

ಒಂದನೇ ಪುಟದಿಂದ

ಗೋವು, ಎಮ್ಮೆ, ಮೇಕೆ, ಒಂಟೆಗಳ ಮೂತ್ರವನ್ನು ಬಿಸಿಮಾಡಿ ಕಿವಿಗಳಿಗೆ ಹಾಕಿದರೆ ಕಿವಿರೋಗದ ಸಮಸ್ಯೆಗಳು ನಿವಾರಣೆ ಆಗುತ್ತವೆ ಎಂಬ ವಿವರಗಳು 'ಭೈಸಜ್ಯ ರತ್ನಾವಳಿ' ಎಂಬ ಗ್ರಂಥದಲ್ಲಿವೆ ಎಂದು ಉದಾಹರಣೆ ನೀಡಲಾಗಿದೆ.

ಅಲ್ಲದೇ, ಪವಿತ್ರ ವೈದ್ಯ ಪದ್ಧತಿ ಅಧ್ಯಾಯದಲ್ಲಿ ಶಂಖ ಚಿಕಿತ್ಸೆ, ತೈಲ ಚಿಕಿತ್ಸೆ, ಚುಟ್ಕ ಚಿಕಿತ್ಸೆ, ಸಿದ್ಧ ವೈದ್ಯ ಪದ್ಧತಿ, ಜ್ಯೂಸ್ ಥೆರಪಿಗಳ ಚಿಕಿತ್ಸಾ ವಿಧಾನ, ಅಂತಹ ಚಿಕಿತ್ಸೆಗಳಿಂದ ವಾಸಿಯಾಗುವ ರೋಗಗಳ ಪಟ್ಟಿಯನ್ನೂ ನೀಡಲಾಗಿದೆ. ಎಲ್ಲ ರೋಗಗಳಿಗೂ ಪವಿತ್ರ ವೈದ್ಯ ಪದ್ಧತಿಯಲ್ಲಿ ಸೂಕ್ತ ಪರಿಹಾರಗಳಿವೆ ಎಂದು ವಿವರಿಸಲಾಗಿದೆ.

'ಹಲವು ಲೇಖಕರು ವೈದ್ಯಕೀಯ ಸಮಾಜಶಾಸ್ತ್ರ ಪುಸ್ತಕವನ್ನು ಮಾರುಕಟ್ಟೆಗೆ ತಂದಿದ್ದಾರೆ. ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ನಿವೃತ್ತ ಪ್ರಾಂಶುಪಾಲ ಪ್ರೊ.ಕೆ.ಭೈರಪ್ಪ ಅವರ ಪುಸ್ತಕ ಅಧ್ಯಯನ ಮಾಡುತ್ತಿದ್ದಾರೆ. ಅದರಲ್ಲಿ ಸ್ವಮೂತ್ರ ಪಾನದ ಬಗ್ಗೆ ವಿವರಗಳಿವೆ. ಆದರೆ, ನಾವು ಪಾರಂಪರಿಕ ವೈದ್ಯ ಪದ್ಧತಿಯ ಯೋಗ, ಯುನಾನಿ ಇತರೆ ವಿಧಾನಗಳನ್ನಷ್ಟೇ ಪಾಠ ಮಾಡುತ್ತಿದ್ದೇವೆ' ಎನ್ನುತ್ತಾರೆ ಪ್ರಾಧ್ಯಾಪಕರು.

> ಎನ್‌ಇಪಿ ಪಠ್ಯಕ್ರಮದಂತೆ ಆರೋಗ್ಯ ಸಮಾಜಶಾಸ್ತ್ರ ಪರಿಚಯಿಸಲಾಗಿದೆ. ಆದರೆ, ಪೂರ್ಣ ಪಠ್ಯಕ್ರಮ ಅಂತಿಮವಾಗಿಲ್ಲ. ಲೇಖಕರು ಏಕೆ ಹಾಗೆ ಬರೆದಿದ್ದಾರೆ ಎನ್ನುವ ಮಾಹಿತಿ ಇಲ್ಲ.
> **ಪ್ರೊ. ಎ.ರಾಮೇಗೌಡ,** ಅಧ್ಯಕ್ಷ, ರಾಜ್ಯ ಸಮಾಜಶಾಸ್ತ್ರ ಪಠ್ಯಕ್ರಮ ರಚನಾ ಮಂಡಳಿ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಪುರಸಭೆ ಗಮನಕ್ಕೆ ತರದೆ ಸೇತುವೆ ಬಳಕೆಗೆ ಮುಕ್ತಗೊಳಿಸಿದ್ದ ಕಂಪನಿ’

ಅಹಮದಾಬಾದ್ (ಪಿಟಿಐ): ‘ಮೊರ್ಬಿ ಸೇತುವೆಯ ದುರಸ್ತಿ ಕಾರ್ಯ ಕೈಗೊಂಡಿದ್ದ ಅಜಂತಾ ಕಂಪನಿಯು ನಮಗೆ ಯಾವ ಮಾಹಿತಿ ನೀಡದೆ ಜನರ ಬಳಕೆಗೆ ಮುಕ್ತಗೊಳಿಸಿತ್ತು’ ಎಂದು ಮೊರ್ಬಿ ಪುರಸಭೆಯು ಗುಜರಾತ್ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಪುರಸಭೆಯು ಮುಖ್ಯ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮತ್ತು ನ್ಯಾಯಮೂರ್ತಿ ಆಶುತೋಷ್ ಶಾಸ್ತ್ರಿ ಅವರನ್ನೊಳಗೊಂಡ ವಿಭಾಗೀಯ ಪೀಠಕ್ಕೆ ಅಫಿಡವಿಟ್ ಸಲ್ಲಿಸಿದೆ.

‘ತೂಗುಸೇತುವೆಯ ನವೀಕರಣವನ್ನು ಪರಿಪೂರ್ಣವಾಗಿ ಕೈಗೊಂಡ ನಂತರವೇ ನಾಗರಿಕರ ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಕಂಪನಿ ಜೊತೆ ಈ ವರ್ಷ ಮಾಡಿಕೊಂಡಿದ್ದ ಒಪ್ಪಂದದಲ್ಲಿ ತಿಳಿಸಲಾಗಿತ್ತು. ಆದರೆ ಕಂಪನಿ ನಮ್ಮ ಅನುಮತಿ ಪಡೆಯದೆ ಸೇತುವೆಯನ್ನು ಬಳಕೆಗೆ ಮುಕ್ತಗೊಳಿಸಿದೆ’ ಎಂದು ಅಫಿಡವಿಟ್‌ನಲ್ಲಿ ಹೇಳಲಾಗಿದೆ.

18 ವರ್ಷದೊಳಗಿನವರಿಗೆ ಮೊಬೈಲ್ ನಿಷೇಧ!

ಯವತ್ಮಾಲ್: ಮಹಾರಾಷ್ಟ್ರದ ಯವತ್ಮಾಲ್ ಜಿಲ್ಲೆಯ ಬನ್ಸಿ ಗ್ರಾಮದಲ್ಲಿ 18 ವರ್ಷದೊಳಗಿನವರು ಮೊಬೈಲ್ ಫೋನ್ ಬಳಸದಂತೆ ನಿಷೇಧ ಹೇರಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

‘ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ತರಗತಿಗಾಗಿ ಮಕ್ಕಳು ಮೊಬೈಲ್ ಫೋನ್ ಹೆಚ್ಚು ಬಳಕೆ ಮಾಡಲು ಆರಂಭಿಸಿದ್ದರು, ಈಗ ಅದು ಅವರಿಗೆ ಗೀಳಾಗಿ ಪರಿಣಮಿಸಿದೆ. ಈ ಕಾರಣಕ್ಕೆ ಮಕ್ಕಳ ಮೊಬೈಲ್ ಫೋನ್ ಬಳಕೆಗೆ ಬಾನ್ಸಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಬಂಧ ಹೇರಿದ್ದೇವೆ’ ಎಂದು ಗ್ರಾಮದ ಸರಪಂಚ ಗಜಾನನ ತೆಲಿ ವಿವರಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಈ ನಿರ್ಧಾರ ತೆಗೆದುಕೊಂಡಿರುವ ಮೊದಲ ಗ್ರಾಮ ಪಂಚಾಯಿತಿ ನಮ್ಮದು ಎಂದೂ ಗಜಾನನ ಅವರು ಹೇಳಿದ್ದಾರೆ.

‘ಆರಂಭದಲ್ಲಿ ಈ ನಿರ್ಧಾರವನ್ನು ಕಾರ್ಯಗತಗೊಳಿಸುವಲ್ಲಿ ಸಮಸ್ಯೆಯಾಗಿತ್ತು. ಪೋಷಕರು ಮತ್ತು ಮಕ್ಕಳನ್ನು ಆಪ್ತ ಸಮಾಲೋಚನೆಗೆ ಒಳಪಡಿಸುವ ಮೂಲಕ ಅವರಲ್ಲಿ ಜಾಗೃತಿ ಮೂಡಿಸಲಾಯಿತು’ ಎಂದೂ ಅವರು ತಿಳಿಸಿದ್ದಾರೆ.

ಹವಾಮಾನ ಒಪ್ಪಂದದ ಕರಡು ಪ್ರತಿ ಗುರುವಾರ ಪ್ರಕಟ

ಭಾರತದ ಪ್ರಸ್ತಾವನೆಗೆ ಸಿಗದ ಮನ್ನಣೆ

ನವದೆಹಲಿ (ಪಿಟಿಐ): ವಿಶ್ವಸಂಸ್ಥೆಯು ಹವಾಮಾನ ಒಪ್ಪಂದಕ್ಕೆ ಸಂಬಂಧಿಸಿದ ಮೊದಲ ಅನೌಪಚಾರಿಕ ಕರಡು ಪ್ರತಿಯನ್ನು ಗುರುವಾರ ಪ್ರಕಟಿಸಿದೆ. ಎಲ್ಲಾ ಬಗೆಯ ಪಳೆಯುಳಿಕೆ ಇಂಧನಗಳನ್ನು ತ್ಯಜಿಸುವ ಕುರಿತ ಭಾರತದ ಪ್ರಸ್ತಾವನೆಯನ್ನು ಇದರಲ್ಲಿ ಸೇರ್ಪಡೆ ಮಾಡಿಲ್ಲ.

ಪಳೆಯುಳಿಕೆ ಇಂಧನಗಳು ಮಾಲಿನ್ಯಕ್ಕೆ ದಾರಿ ಮಾಡಿಕೊಡುತ್ತವೆ. ಹೀಗಾಗಿ ಇವುಗಳ ಬಳಕೆ ತಗ್ಗಿಸಬೇಕೆಂದು ಭಾರತವು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಶೃಂಗಸಭೆಯಲ್ಲಿ (ಸಿಒಪಿ-27) ಒತ್ತಿ ಹೇಳಿತ್ತು. ಯುರೋಪಿಯನ್ ಒಕ್ಕೂಟ ಹಾಗೂ ಇತರ ರಾಷ್ಟ್ರಗಳು ಇದಕ್ಕೆ ಸಹಮತ ವ್ಯಕ್ತಪಡಿಸಿದ್ದವು.

ದೇಶಗಳ ಅಗತ್ಯತೆ ಹಾಗೂ ಬೇಡಿಕೆಯನ್ನು ಪ್ರತಿಬಿಂಬಿಸುವ ಈ ಕರಡು ಪ್ರತಿಯಲ್ಲಿ, ಕಲ್ಲಿದ್ದಲು ಇಂಧನದ ಮಿತಿಮೀರಿದ ಬಳಕೆಗೆ ಕಡಿವಾಣ ಹಾಕುವ ದಿಸೆಯಲ್ಲಿ ನಡೆಯುತ್ತಿರುವ ಪ್ರಯತ್ನಗಳನ್ನು ಇನ್ನಷ್ಟು ತೀವ್ರಗೊಳಿಸುವ ಹಾಗೂ ಪರಿಣಾಮಕಾರಿಯಲ್ಲದ ಪಳೆಯುಳಿಕೆ ಇಂಧನಕ್ಕೆ ನೀಡಲಾಗುತ್ತಿರುವ ಸಹಾಯಧನ ರದ್ದುಗೊಳಿಸುವುದನ್ನು ಉತ್ತೇಜಿಸುವ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

ಮುಖ್ಯಾಂಶಗಳು
- ಸಹಾಯಧನ ರದ್ದುಗೊಳಿಸಲು ಉತ್ತೇಜನ
- ಕರಡಿನ ಪ್ರತಿಯಲ್ಲಿಲ್ಲ ನೆರವಿನ ಸ್ವರೂಪ

‘ಆರ್ಥಿಕ ಮತ್ತು ತಾಂತ್ರಿಕವಾಗಿ ಸಶಕ್ತವಾಗಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು, ಹಸಿರು ಮನೆ ಅನಿಲ ಹೊರಸೂಸುವಿಕೆ ತಗ್ಗಿಸುವಲ್ಲಿ ಪದೇ ಪದೇ ವಿಫಲವಾಗುತ್ತಿವೆ’ ಎಂದು ವರದಿಯಲ್ಲಿ ಅಸಮಾಧಾನ ವ್ಯಕ್ತಪಡಿಸಲಾಗಿದೆ.

ಹವಾಮಾನ ಬದಲಾವಣೆಯಿಂದಾಗುವ ನಷ್ಟ ಹಾಗೂ ಹಾನಿಯನ್ನು ಸರಿದೂಗಿಸಲು ಅಗತ್ಯ ಹಣಕಾಸಿನ ನೆರವು ಒದಗಿಸಬೇಕೆಂದು ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಸಿಒಪಿ-27ರಲ್ಲಿ ಒತ್ತಾಯಿಸಿದ್ದವು. ಈ ನೆರವನ್ನು ಯಾವಾಗ ನೀಡಲಾಗುತ್ತದೆ. ಅದರ ಸ್ವರೂಪ ಏನು ಎಂಬುದನ್ನು ಕರಡು ಪ್ರತಿಯಲ್ಲಿ ಉಲ್ಲೇಖಿಸಿಲ್ಲ.

ಪ್ಯಾರಿಸ್ ಒಪ್ಪಂದದ ಅನುಸಾರ ಜಾಗತಿಕ ತಾಪಮಾನದ ಏರಿಕೆಯನ್ನು 1.5 ಡಿಗ್ರಿ ಸೆಲ್ಷಿಯಸ್‌ಗೆ ಮಿತಗೊಳಿಸಬೇಕು. ಈ ಗುರಿ ಸಾಧಿಸಲು ಎಲ್ಲಾ ಹಂತಗಳಲ್ಲೂ ಎಲ್ಲಾ ಬಗೆಯ ಪ್ರಯತ್ನಗಳನ್ನು ನಡೆಸಬೇಕು ಎಂದು 20 ಪುಟಗಳ ಕರಡು ಪ್ರತಿಯಲ್ಲಿ ಒತ್ತಿ ಹೇಳಲಾಗಿದೆ.

ರಷ್ಯಾದ ಐವರು ಸೈನಿಕರನ್ನು ಕೊಂದ ಉಕ್ರೇನ್ ಸೇನೆ

ಉಕ್ರೇನ್ (ಎಪಿ/ಎಎಫ್‌ಪಿ): ಗಡಿ ದಾಟಲು ಯತ್ನಿಸಿದ ರಷ್ಯಾದ ಐವರು ಸೈನಿಕರನ್ನು ಹತ್ಯೆ ಮಾಡಿರುವುದಾಗಿ ಉಕ್ರೇನ್ ರಕ್ಷಣಾ ಸಚಿವಾಲಯ ಗುರುವಾರ ಹೇಳಿದ್ದು, ಕಗ್ಗತ್ತಲಿನಲ್ಲೂ ಶತ್ರುಪಡೆ ಯೋಧರನ್ನು ಗುಂಡಿಟ್ಟು ಸಾಯಿಸಿರುವ ವಿಡಿಯೊ ಬಿಡುಗಡೆ ಮಾಡಿದೆ. ಉಕ್ರೇನ್ ಮೇಲಿನ ರಷ್ಯಾ ಆಕ್ರಮಣಕ್ಕೆ 10 ತಿಂಗಳು ಆಗಿದ್ದು, ಸಂಘರ್ಷ ಇನ್ನೂ ಮುಂದುವರಿದಿದೆ. ಉಕ್ರೇನ್‌ನ ದಕ್ಷಿಣದಲ್ಲಿ ರಷ್ಯಾಕ್ಕೆ ಹಿನ್ನಡೆಯಾಗಿದ್ದು, ಪಶ್ಚಿಮ ಕೆರ್ಸಾನ್ ಪ್ರದೇಶದಿಂದ ಸೇನೆಯನ್ನು ಸಂಪೂರ್ಣ ಹಿಂತೆಗೆದುಕೊಂಡಿದೆ.

ಭಾರತ ಭರವಸೆ: ವಿಶ್ವಸಂಸ್ಥೆ (ಪಿಟಿಐ): ಸಂಘರ್ಷದ ಮಧ್ಯೆ ಉಕ್ರೇನ್‌ನಿಂದ ಕಪ್ಪು ಸಮುದ್ರದ ಮೂಲಕ ಆಹಾರ ಧಾನ್ಯ ಮತ್ತು ರಸಗೊಬ್ಬರ ರಫ್ತಿಗೆ ಅವಕಾಶ ಕಲ್ಪಿಸಲು ವಿಶ್ವಸಂಸ್ಥೆ ಮಧ್ಯಸ್ಥಿಕೆಯಲ್ಲಿ ವಿಸ್ತರಣೆಗೊಂಡಿದ್ದ ಒಪ್ಪಂದವು ಮುಂಬರುವ ದಿನಗಳಲ್ಲಿ ನವೀಕರಣವಾಗಲಿದೆ ಎಂದು ಭಾರತ ಭರವಸೆ ವ್ಯಕ್ತಪಡಿಸಿದೆ.

ಇದೇ 19ರಂದು ಕೊನೆಯಾಗಲಿರುವ ವಿಸ್ತರಿತ ಒಪ್ಪಂದವನ್ನು ಮತ್ತೇ ನವೀಕರಿಸಿ, ಸಂಬಂಧಿಸಿದ ಎಲ್ಲ ರಾಷ್ಟ್ರಗಳು ಕಾರ್ಯಗತಗೊಳಿಸುವ ವಿಶ್ವಾಸವಿದೆ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಅವರು ಬುಧವಾರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಉಕ್ರೇನ್ ಕುರಿತ ಸಭೆಯಲ್ಲಿ ಹೇಳಿದರು.

ಸುದ್ದಿ 2 ನಿಮಿಷ

ನನ್ನ ವಿರುದ್ಧದ ಆರೋಪ ಆಧಾರ ರಹಿತ: ಹೇಮಂತ್ ಸೊರೇನ್

ರಾಂಚಿ (ಪಿಟಿಐ): ‘ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ನನ್ನ ವಿರುದ್ಧ ಮಾಡಿರುವ ಆರೋಪಗಳು ಆಧಾರರಹಿತವಾಗಿದೆ. ತಾನು ವಿರೋಧ ಪಕ್ಷಗಳ ‘ಪಿತೂರಿಯ ಬಲಿ ಪಶು’ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ .

ಜಾರಿ ನಿರ್ದೇಶನಾಲಯ (ಇ.ಡಿ) ವಿಚಾರಣೆಗೆ ತೆರಳುವ ಮುನ್ನ ರಾಂಚಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ವಿಷಯದ ಬಗ್ಗೆ ವಿವರವಾದ ತನಿಖೆ ನಂತರವೇ ತನಿಖಾ ಸಂಸ್ಥೆ ಆರೋಪಗಳನ್ನು ಮಾಡಬೇಕು’ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಅಕ್ರಮ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದ ಆದಾಯವನ್ನು ಇಲ್ಲಿಯವರೆಗೆ ₹ 1,000 ಕೋಟಿ ವರೆಗೆ ಗುರುತಿಸಲಾಗಿದೆ ಎಂದು ಇ.ಡಿ ಹೇಳಿದೆ.

‘ಕಲ್ಲಿನ ಚಿಪ್ಸ್ ಗಣಿಗಾರಿಕೆಯಿಂದ ವಾರ್ಷಿಕ ಆದಾಯ ಲೆಕ್ಕ ಹಾಕಿದರೆ, ಅದು ₹1,000 ಕೋಟಿ ಮುಟ್ಟುವುದಿಲ್ಲ. ಈ ಅಂಕಿ ಅಂಶವನ್ನು ಹೇಗೆ ಅಂದಾಜು ಮಾಡಿದರು ಎಂಬುದು ಅರ್ಥವಾಗುತ್ತಿಲ್ಲ’ ಎಂದು ಸೊರೇನ್ ಹೇಳಿದರು.



‘ನಾನು ರಾಜ್ಯದ ಮುಖ್ಯಮಂತ್ರಿ ಮತ್ತು ಸಾಂವಿಧಾನಿಕ ಹುದ್ದೆ ಹೊಂದಿದ್ದೇನೆ. ಆದರೆ, ಸಮನ್ಸ್ ಜಾರಿಯಾದ ರೀತಿ ನೋಡಿದರೆ, ದೇಶದಿಂದ ಪಲಾಯನ ಮಾಡುತ್ತೇನೆ ಎಂದು ತೋರುತ್ತದೆ. ನನ್ನ ರಾಜಕೀಯ ಜೀವನದಲ್ಲಿ, ಯಾವುದೇ ರಾಜಕೀಯ ನಾಯಕರು ದೇಶ ತೊರೆಯುವುದನ್ನು ನೋಡಿಲ್ಲ. ಆದರೆ, ಉದ್ಯಮಿಗಳು ಹಾಗೆ ಮಾಡಿದ್ದಾರೆ’ ಎಂದರು.

‘ನಾವು ಅಧಿಕಾರಕ್ಕೆ ಬಂದಾಗಿನಿಂದಲೂ ಪ್ರತಿಪಕ್ಷಗಳು ನಮ್ಮ ಸರ್ಕಾರ ಉರುಳಿಸಲು ಪಿತೂರಿ ನಡೆಸುತ್ತಿವೆ’ ಎಂದು ಅವರು ಆರೋಪಿಸಿದರು.

ಅಧಿಕೃತ ಕಾರ್ಯಕ್ರಮಗಳ ಕಾರಣ ನ.3 ರಂದು ಸೊರೇನ್ ಇ.ಡಿ ವಿಚಾರಣೆಗೆ ಗೈರು ಹಾಜರಾಗಿದ್ದರು.

ಮಾರ್ಗಸೂಚಿ ರೂಪಿಸಲು ಎನ್‌ಟಿಸಿಎಗೆ ನಿರ್ದೇಶನ


ನವದೆಹಲಿ: ದೇಶದ ರಾಷ್ಟ್ರೀಯ ಉದ್ಯಾನಗಳ ಸಮೀಪದಲ್ಲಿ ಸಂಗೀತ ಉತ್ಸವ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಬಹುದೇ ಎಂಬ ಬಗ್ಗೆ ಸೂಕ್ತ ಮಾರ್ಗಸೂಚಿಯನ್ನು ರೂಪಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ (ಎನ್‌ಟಿಸಿಎ) ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ಆದೇಶಿಸಿದೆ.

ರಾಜಸ್ಥಾನದ ರಣಥಂಬೋರ್ ರಾಷ್ಟ್ರೀಯ ಉದ್ಯಾನದ ಸಮೀಪದಲ್ಲಿ 2017ರಿಂದ ಸಂಗೀತ ಉತ್ಸವ ನಡೆಸಲಾಗುತ್ತಿದೆ. ಈ ಉತ್ಸವದಿಂದ ವನ್ಯಜೀವಿಗಳಿಗೆ ತೊಂದರೆ ಆಗುತ್ತಿದೆ ಎಂದು ಪರಿಸರ ಹೋರಾಟಗಾರರು ಆರೋಪಿಸಿದ್ದರು. ಈ ಬಗ್ಗೆ ಎನ್‌ಜಿಟಿ ಪೀಠವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ಇದೀಗ ಆದೇಶ ಹೊರಡಿಸಿರುವ ಪೀಠವು, ಒಂದು ತಿಂಗಳಲ್ಲಿ ಮಾರ್ಗಸೂಚಿ ರೂಪಿಸಬೇಕು ಎಂದು ಹೇಳಿದೆ.

ಕರ್ನಾಟಕದಲ್ಲೂ ವಿವಾದ: ಅರಣ್ಯ ನಿಯಮಗಳನ್ನು ಉಲ್ಲಂಘಿಸಿ ಕರ್ನಾಟಕದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದೊಳಗೆ ಬೇಲದಕುಪ್ಪೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಆಯೋಜಿಸಲಾಗುತ್ತಿದೆ ಎಂದು ಆರೋಪಿಸಿ ವನ್ಯಜೀವಿ ಕಾರ್ಯಕರ್ತ ಗಿರಿಧರ್ ಕುಲಕರ್ಣಿ ಅವರು ಎನ್‌ಟಿಸಿಎಗೆ ಪತ್ರ ಬರೆದಿದ್ದರು. ಈ ಬಗ್ಗೆ ಶೀಘ್ರ ವರದಿ ಸಲ್ಲಿಸುವಂತೆ ಪ್ರಾಧಿಕಾರವು ಅರಣ್ಯ ಇಲಾಖೆಗೆ ಈಚೆಗೆ ನಿರ್ದೇಶನ ನೀಡಿತ್ತು. ಜಾತ್ರಾ ಮಹೋತ್ಸವಕ್ಕೆ ಜಾನುವಾರು ಹಾಗೂ ಎತ್ತಿನಗಾಡಿಗಳ ಪ್ರವೇಶವನ್ನು ನಿರ್ಬಂಧಿಸಿ ಅರಣ್ಯ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಹಸುಳೆ ಸಾವು– ಅಧಿಕಾರಿಗಳ ವಿರುದ್ಧ ಆಕ್ರೋಶ

ಬೀಜಿಂಗ್ (ಎಪಿ): ಕೋವಿಡ್ ಕಠಿಣ ನಿರ್ಬಂಧಗಳಿಂದಾಗಿ ಹೋಟೆಲ್‌ವೊಂದರಲ್ಲಿ ಪ್ರತ್ಯೇಕವಾಸದಲ್ಲಿದ್ದ ನಾಲ್ಕು ತಿಂಗಳ ಹಸುಳೆ, ಸೂಕ್ತ ಸಮಯಕ್ಕೆ ಚಿಕಿತ್ಸೆ ಸಿಗದೆ ಗುರುವಾರ ಮೃತಪಟ್ಟಿದೆ. ಇದು ಜನಾಕ್ರೋಶಕ್ಕೆ ಕಾರಣವಾಗಿದೆ.



ಹಸುಳೆ ಸಾವಿಗೆ ಆರೋಗ್ಯ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿರುವ ಸ್ಥಳೀಯರು ಅವರ ವಿರುದ್ಧ ಕಿಡಿಕಾರಿದ್ದಾರೆ. ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ‘ಶೂನ್ಯ ಕೋವಿಡ್’ ಕಾರ್ಯತಂತ್ರದ ಕುರಿತೂ ಟೀಕೆ ವ್ಯಕ್ತಪಡಿಸಿದ್ದಾರೆ.

‘ಜೆಂಗ್‌ಝುವಾ ನಗರದ ಹೋಟೆಲ್‌ವೊಂದರಲ್ಲಿ ತಂದೆಯೊಂದಿಗೆ ಪ್ರತ್ಯೇಕ ವಾಸದಲ್ಲಿದ್ದ ಹಸುಳೆಯು ವಾಂತಿ ಮತ್ತು ಅತಿಸಾರದಿಂದ ಬಳಲಿತ್ತು. ಅಧಿಕಾರಿಗಳು ತಂದೆ ಮತ್ತು ಮಗಳಿಗೆ ತುರ್ತು ಸೇವೆ ನಿರಾಕರಿಸಿದ್ದರು. 11 ಗಂಟೆ ತರುವಾಯ ಹಸುಳೆಯನ್ನು ಹೋಟೆಲ್‌ನಿಂದ 100 ಕಿ.ಮೀ ದೂರದಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಷ್ಟರಲ್ಲಾಗಲೇ ಹಸುಳೆ ಮೃತಪಟ್ಟಿತ್ತು’ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಕೆಲ ದಿನಗಳ ಹಿಂದೆ 3 ವರ್ಷದ ಬಾಲಕನೊಬ್ಬ ಮೃತಪಟ್ಟಿದ್ದ. ಇನ್ನು ಮುಂದೆ ಪ್ರತ್ಯೇಕವಾಸದಲ್ಲಿದ್ದವರಿಗೆ ತುರ್ತು ಸೇವೆ ಒದಗಿಸುವಲ್ಲಿ ಲೋಪ ಆಗುವುದಿಲ್ಲ ಎಂದು ಸರ್ಕಾರ ಹೇಳಿತ್ತು.

ಅಮೆರಿಕ: ಅಣೆಕಟ್ಟೆ ಧ್ವಂಸಕ್ಕೆ ಸಮ್ಮತಿ

ಪೋರ್ಟ್‌ಲ್ಯಾಂಡ್, ಅಮೆರಿಕ (ಎಪಿ): ದೇಶದ ಅತಿದೊಡ್ಡ ಅಣೆಕಟ್ಟೆಯೊಂದರ ಧ್ವಂಸ ಹಾಗೂ ಕ್ಲಮಾತ್ ನದಿ ಪುನಶ್ಚೇತನ ಯೋಜನೆಗೆ ಅನುಮತಿ ನೀಡಲಾಗಿದೆ.

ಅತಿ ಹಳೆಯ ಜಲ ವಿದ್ಯುತ್ ಉತ್ಪಾದನಾ ಘಟಕಗಳನ್ನು ತೆರವುಗೊಳಿಸುವ ಯೋಜನೆಯ ಪರವಾಗಿ ಫೆಡರಲ್ ಎನರ್ಜಿ ರೆಗ್ಯೂಲೇಟರಿ ಕಮಿಷನ್ (ಎಫ್‌ಇಆರ್‌ಸಿ) ಮತ ಚಲಾಯಿಸಿದೆ.

ಅಣೆಕಟ್ಟು ಕಾರ್ಯಾಚರಣೆಯ ಪರವಾನಗಿ ಒಪ್ಪಿಸುವ ಸಂಬಂಧದ ಅರ್ಜಿಗೆ ಅನುಮೋದನೆ ದೊರೆತಿದ್ದು, ಎಲ್ಲವೂ ಅಂದುಕೊಂಡಂತೆ ನಡೆದರೆ ಈ ಬೇಸಿಗೆಯ ಆರಂಭದಲ್ಲೇ ಜಲಾಶಯ ಧ್ವಂಸ ಕಾರ್ಯ ಆರಂಭಗೊಳ್ಳಲಿದೆ.

‘ಈ ಯೋಜನೆಯಿಂದ ಜಲಚರಗಳು ಮತ್ತು ಕ್ಲಮಾತ್ ನದಿಯ ಉಪ ನದಿಗಳಿಗೆ ಹೆಚ್ಚು ಪ್ರಯೋಜನವಾಗಲಿದೆ’ ಎಂದು ಅಮೆರಿಕನ್ ರಿವರ್ಸ್ ಎಂಬ ಸಂಘಟನೆಯ ವಕ್ತಾರೆ ಆ್ಯಮಿ ಸೋರೆಸ್ ಕೊಬರ್ ಹೇಳಿದ್ದಾರೆ.



ಪ್ರಜ್ವಲ್ ದೇವರಾಜ್

ಪ್ರಜ್ವಲ್ 'ಅಬ್ಬರ'

ಶರತ್ ಹೆಗ್ಡೆ

18ರ ವಯಸ್ಸಲ್ಲೇ ಬಣ್ಣ ಹಚ್ಚಿ ಈಗ 35 ಚಿತ್ರಗಳನ್ನು ಮುಗಿಸಿರುವ ಪ್ರಜ್ವಲ್ ದೇವರಾಜ್ ಈಗ 'ಅಬ್ಬರ'ದ ಮೂಲಕ ಇಂದು (ನ. 18) ಮತ್ತೆ ತೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಲವು ಚಿತ್ರಗಳು ಬಿಡುಗಡೆಯ ಸಾಲಿನಲ್ಲಿವೆ. ಈ ಹೊತ್ತಿನಲ್ಲಿ ಅವರು ತಮ್ಮ ಸಿನಿಪಯಣದ ಅವಲೋಕನ ಮತ್ತು ಏರಿಳಿತದ ಹಾದಿಯನ್ನು ಸಿನಿಮಾ ಪುರವಣಿ ಮುಂದೆ ತೆರೆದಿಟ್ಟರು.

- **ಇದೇನು ಹೊಸದಾಗಿ 'ಅಬ್ಬರ' ತೋರುತ್ತಿದ್ದೀರಿ?**

'ಅಬ್ಬರ' ಚಿತ್ರಕ್ಕೆ ಕೋವಿಡ್ ಪೂರ್ವದಲ್ಲೇ ಶೂಟಿಂಗ್ ನಡೆದಿತ್ತು. ಎರಡು ಹಾಡುಗಳು ಬಾಕಿ ಇದ್ದವು. ಕೋವಿಡ್ ಸಮಯದಲ್ಲಿ ವಿದೇಶ ಪ್ರಯಾಣಕ್ಕೆ ನಿರ್ಬಂಧ ಇದ್ದ ಕಾರಣ ನಮಗೆ ಹೋಗಲಾಗಲಿಲ್ಲ. ಹಾಗಾಗಿ ಸ್ವಲ್ಪ ವಿಳಂಬವಾಯಿತು. ಒಟ್ಟಾರೆ ಕುಟುಂಬ ಸಮೇತ ನೋಡಬೇಕಾದ ಮನೋರಂಜನಾತ್ಮಕ ಚಿತ್ರವಿದು.

- **ಈ ಚಿತ್ರದಲ್ಲಿ ತಮ್ಮ ಪಾತ್ರ ವೈವಿಧ್ಯ ಏನೇನು?**

ತುಂಬಾ ವೈವಿಧ್ಯಮಯವಾಗಿ ಕಾಣಿಸಿಕೊಂಡಿದ್ದೇನೆ. ಒಬ್ಬ ಕಲಾವಿದ, ಒಬ್ಬ ಪೋರ್ಕಿ ಹುಡುಗ ಮತ್ತು ಒಬ್ಬ ಕಾಲು ಮುರಿದುಕೊಂಡ ಸಹೃದಯಿ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮೂರೂ ಪಾತ್ರಗಳಿಗೆ ಸಂಬಂಧವಿದೆ. ಮೂವರು ನಾಯಕಿಯರಿದ್ದಾರೆ. ಈ ಪಾತ್ರಗಳಲ್ಲಿ ಒಂದಕ್ಕೊಂದು ಸಂಬಂಧ ಏನು ಎಂಬ ಪ್ರಶ್ನೆಯನ್ನಿಟ್ಟುಕೊಂಡೇ ಮೊದಲಾರ್ಧ ಮುಗಿಯುತ್ತದೆ. ಎರಡನೇ ಭಾಗದಲ್ಲಿ ಈ ಕುತೂಹಲ, ಗೊಂದಲಗಳಿಗೆ ಉತ್ತರಿಸುತ್ತಾ ಹೋಗಿದ್ದೇವೆ. ಕ್ರಿಷ್‌ನಂಥ ಅವತಾರ ತಂದದ್ದು ಮಕ್ಕಳಿಗಾಗಿ. ಎಲ್ಲ ವಯೋಮಾನದವರನ್ನು ಗುರಿಯಾಗಿಟ್ಟುಕೊಂಡು ಈ ಚಿತ್ರ ತಂದಿದ್ದೇವೆ.

- **ಮೂರು ಪಾತ್ರಗಳಲ್ಲಿ ತೊಡಗಿಕೊಂಡಾಗ ಬಂದ ಸವಾಲುಗಳು?**

ಕಲಾವಿದನ ಪಾತ್ರದಲ್ಲಿ ಉತ್ತರ ಕರ್ನಾಟಕದ ಶೈಲಿಯ ಸೊಗಡು ಹಾಗೂ ದೇಹಭಾಷೆ ಇದೆ. ಪೋರ್ಕಿಯಂಥ ಪಾತ್ರದಲ್ಲಿ ತಪ್ಪು ತಪ್ಪಾಗಿ ಇಂಗ್ಲಿಷ್ ಮಾತನಾಡುತ್ತಾ ಅನಿವಾಸಿ ಭಾರತೀಯ ಹುಡುಗಿಗೆ ಕಾಡುವ ಪಾತ್ರ. ಮೂರನೆಯದು ಅಂಗವಿಕಲನ ಪಾತ್ರ. ಇವುಗಳನ್ನೇನೋ ಒಪ್ಪಿಕೊಂಡೆ. ಆದರೆ ಒಂದು ಸಂದರ್ಭದಲ್ಲಿ ಏಕಕಾಲದಲ್ಲಿ ಮೂರೂ ಪಾತ್ರಗಳನ್ನು ನಿರ್ವಹಿಸಬೇಕಾಗಿ ಬಂತು. ಒಂದು ಷಾಟ್ ಮುಗಿಸಿ, ಇನ್ನೊಂದಕ್ಕೆ ಬದಲಾಗಬೇಕು. ಬಟ್ಟೆ, ಮೇಕ್ ಅಪ್ ಬದಲಾಯಿಸಿಕೊಂಡು ಮತ್ತೆ ಕ್ಯಾಮೆರಾ ಮುಂದೆ ನಿಲ್ಲಬೇಕಾಗುತ್ತಿತ್ತು. ಇನ್ನು ಇಂಥ ಪಾತ್ರ ಒಪ್ಪಿಕೊಳ್ಳಬೇಕಾದರೆ ಎಚ್ಚರ ವಹಿಸಬೇಕು.

- **'ಅಬ್ಬರ' ನೋಡಬೇಕಾದ ಕಾರಣ?**

ಒಂದೊಳ್ಳೆ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಹೋಗಿಬಂದ ಅನುಭವವಾಗುತ್ತದೆ. ಸಾಕಷ್ಟು ಹಾಸ್ಯ, ರಂಜನೆ ಇದೆ. ಕಮರ್ಷಿಯಲ್ ಅಂಶಗಳೂ ಬೇಕಲ್ಲವೇ? ಹಾಗಾಗಿ ಸಾಹಸ ದೃಶ್ಯಗಳೂ ಇವೆ. ವಿಶೇಷ ಪರಿಣಾಮಗಳ ಮೂಲಕ ಹಲವು ದೃಶ್ಯಗಳನ್ನು ಸಂಯೋಜಿಸಿದ್ದೇವೆ. ಒಟ್ಟಿನಲ್ಲಿ ಎಲ್ಲವೂ ಖುಷಿ ಕೊಡುತ್ತವೆ. ಥಾಯ್ಲೆಂಡ್‌ನ ಹೊಸ ತಾಣದಲ್ಲಿ ಚಿತ್ರೀಕರಿಸಿದ್ದೇವೆ. ಈ ಹಿಂದೆ ಚಿತ್ರಗಳಲ್ಲಿ ತೋರಿಸಿದ ತಾಣಗಳನ್ನೇ ತೋರಿಸುವುದು ಆಗಬಾರದು. ಅದಕ್ಕಾಗಿ ಎಚ್ಚರ ವಹಿಸಿದ್ದೇವೆ.

- **35 ಚಿತ್ರಗಳ ಹಾದಿಯನ್ನು ಅವಲೋಕಿಸುವುದಾದರೆ?**

ನಾನು ಕನಸನ್ನು ಜೀವಿಸುತ್ತಿದ್ದೇನೆ. ಸೋಲು– ಗೆಲುವು ಇದ್ದದ್ದೇ. ಆದರೆ, ಈಗ ಈ ಕ್ಷೇತ್ರದಲ್ಲಿ ಸ್ಥಿರವಾಗುತ್ತಿದ್ದೇನೆ. ತುಂಬಾ ಖುಷಿಯಾಗಿದ್ದೇನೆ. ನನ್ನ ಅಪ್ಪ (ದೇವರಾಜ್) ಸಿನಿಮಾ ಕ್ಷೇತ್ರಕ್ಕೆ ಬಂದದ್ದೇ 32ನೇ ವಯಸ್ಸಿನಲ್ಲಿ. ನಾನು 18ನೇ ವಯಸ್ಸಿಗೇ ಬಂದುಬಿಟ್ಟೆ. ಈ ಬೆಳವಣಿಗೆ ನೋಡುವಾಗ ಖುಷಿಯೆನಿಸುತ್ತದೆ. ಅಪ್ಪನ ಮಾರ್ಗದರ್ಶನವೂ ಹೀಗೆಯೇ ಮುಂದುವರಿದಿದೆ. ಅವರೊಂದಿಗೆ ಕಥೆಗಳನ್ನು ಹಂಚಿಕೊಳ್ಳುತ್ತೇನೆ. ಅಭಿಪ್ರಾಯಪಡೆದು ಮುಂದುವರಿಯುತ್ತೇನೆ. ಜನರೂ ಪ್ರೀತಿಯಿಂದ ಸ್ವೀಕರಿಸಿದ್ದಾರೆ. ದೇವರಾಜ್ ಅವರ ಮಗನ ಜೊತೆ ಅಭಿನಯಿಸುತ್ತಿದ್ದೇನೆ ಎಂದು.

- **ಹೆಚ್ಚಾಗಿ ಇನ್‌ಸ್ಪೆಕ್ಟರ್ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದೀರಿ. ಅಪ್ಪನ ಪ್ರಭಾವವೇ?**

ಹಾಗೇನಿಲ್ಲ. ಅಪ್ಪನನ್ನು ಕಂಡ ಅನೇಕ ಪೊಲೀಸರು ಸೆಲ್ಯೂಟ್ ಹೊಡೆಯುತ್ತಿದ್ದರಂತೆ. ಅದ್ಯಾಕೋ ನನಗೆ ಅಂಥದ್ದೇ ಪಾತ್ರಗಳು ಬರುತ್ತಿವೆ. ನಾನು ಹೊಂದಿಕೊಳ್ಳುತ್ತಿರುವುದೂ ಕಾರಣವಿರಬಹುದು. 'ಇನ್‌ಸ್ಪೆಕ್ಟರ್ ವಿಕ್ರಂ' ಚಿತ್ರದ ನಂತರ ಪೊಲೀಸ್ ಪಾತ್ರಗಳೇ ಹುಡುಕಿಕೊಂಡು ಬಂದವು. ಮಾಫಿಯಾ ನಂತರ ಇನ್ನೊಂದು ಹಾರರ್ ಚಿತ್ರ, ಲೋಹಿತ್ ನಿರ್ದೇಶನದಲ್ಲಿ ಮೂಡಿಬರಲಿದೆ. ಅದರಲ್ಲಿಯೂ ಇನ್‌ಸ್ಪೆಕ್ಟರ್ ಪಾತ್ರ ಇದೆ. ಆ ಬಳಿಕ ಆ ಪಾತ್ರಕ್ಕೆ ಸ್ವಲ್ಪ ಬ್ರೇಕ್ ಹಾಕುತ್ತೇನೆ. ಬೇರೆ ರೀತಿಯ ಪಾತ್ರಗಳನ್ನು ಮಾಡಬೇಕು ಎಂಬ ಆಸೆ ಇದೆ.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಿದ್ಧಿ ಹಾಡಿಗೆ ಪ್ರಿಯಾಂಕ ಹೆಜ್ಜೆ



ಪ್ರಿಯಾಂಕ ಉಪೇಂದ್ರ

'ಸಲಗ' ಸಿನಿಮಾ ಮೂಲಕ ಗಾಂಧಿನಗರದಲ್ಲಿ ಸದ್ದು ಮಾಡಿದ್ದ ಸಿದ್ಧಿ ಸಹೋದರಿಯರು(ಗಿರಿಜಾ ಹಾಗೂ ಗೀತಾ) ಇದೀಗ ಮತ್ತೊಮ್ಮೆ ಮೋಡಿ ಮಾಡಿದ್ದಾರೆ. ನಟಿ ಪ್ರಿಯಾಂಕ ಉಪೇಂದ್ರ ನಟನೆಯ, ಗುರುಮೂರ್ತಿ ನಿರ್ದೇಶನದ 'ಉಗ್ರಾವತಾರ' ಸಿನಿಮಾದ ಹಾಡೊಂದಕ್ಕೆ ಸಹೋದರಿಯರು ಧ್ವನಿಯಾಗಿದ್ದು, ಪ್ರಿಯಾಂಕ ಅವರೂ ಇಲ್ಲಿ ಹೆಜ್ಜೆ ಹಾಕಿದ್ದಾರೆ.

ನಟ ಉಪೇಂದ್ರ ಅವರು ಇತ್ತೀಚೆಗೆ ಈ ಹಾಡನ್ನು ಬಿಡುಗಡೆಗೊಳಿಸಿದರು. 'ಸಿದ್ಧಿ ಸಹೋದರಿಯರ ಕಂಠದಲ್ಲಿ ಮ್ಯಾಜಿಕ್ ಇದೆ. 'ಸಲಗ'ದಲ್ಲಿ ದೂಳ್ ಎಬ್ಬಿಸಿದ್ದೀರಿ. ಇದರಲ್ಲಿ ಪ್ರಿಯಾಂಕ ಅವರೊಂದಿಗೆ ಹೆಜ್ಜೆ ಹಾಕಿದ್ದೀರಿ. ಬಹಳ ವರ್ಷಗಳ ನಂತರ ಮಹಿಳಾ ಪ್ರಧಾನ ಆ್ಯಕ್ಷನ್ ಚಿತ್ರವೊಂದು ಬರುತ್ತಿದೆ. ಸಾಹಸ ಚಿತ್ರದಲ್ಲಿ ಮಾಲಾಶ್ರೀ, ಅದರ ಹಿಂದೆ ಮಂಜುಳಾ ಅವರು ನಟಿಸುತ್ತಿದ್ದರು. ಈ ಪಾತ್ರಕ್ಕೆ ಪ್ರಿಯಾಂಕ ಸೂಕ್ತ ನಟಿ' ಎಂದರು ಉಪೇಂದ್ರ.

ಪ್ರಿಯಾಂಕ ಮಾತನಾಡಿ, 'ಈ ಪಾತ್ರವನ್ನು ನನ್ನಿಂದ ಸಾಧ್ಯವೇ ಎಂಬ ಪ್ರಶ್ನೆ ಕಾಡಿತ್ತು. ಸವಾಲಾಗಿ ಇದನ್ನು ತೆಗೆದುಕೊಂಡೆ. ಡ್ಯೂಪ್ ಬಳಸದೇ ಸಾಹಸ ದೃಶ್ಯಗಳಲ್ಲಿ ನಟಿಸಿದ್ದೇನೆ. ಅದಕ್ಕಾಗಿ ತರಬೇತಿಯನ್ನೂ ಪಡೆದಿದ್ದೆ. ಮಹಿಳೆಯರು ಎದುರಿಸುತ್ತಿರುವ ಶೋಷಣೆ ಹಾಗೂ ಅವರ ರಕ್ಷಣೆಗೆ ನಿಂತ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ' ಎಂದರು. ಸತೀಶ್ ಎಸ್.ಜಿ. ಈ ಚಿತ್ರದ ನಿರ್ಮಾಪಕರು.

ದಿಗಂತ್ 'ಎಡಗೈ' ಹಿಡಿದ ರಾಧಿಕಾ ನಾರಾಯಣ್!

'ಶಿವಾಜಿ ಸುರತ್ಕಲ್' ಎರಡನೇ ಭಾಗದ ಶೂಟಿಂಗ್ ಪೂರ್ಣಗೊಳಿಸಿರುವ 'ರಂಗಿತರಂಗ' ಖ್ಯಾತಿಯ ರಾಧಿಕಾ ನಾರಾಯಣ್ ಹೊಸ ಪ್ರೊಜೆಕ್ಟ್‌ಗೆ ಪ್ರವೇಶಿಸಿದ್ದಾರೆ. ಈ ಬಾರಿ ಅವರು 'ದೂದ್‌ಪೇಢ' ದಿಂಗತ್ 'ಎಡಗೈ' ಹಿಡಿದಿದ್ದಾರೆ. ದಿಗಂತ್ ನಾಯಕನಾಗಿ ನಟಿಸುತ್ತಿರುವ 'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾ ತಂಡವನ್ನು ಅವರು ಸೇರಿಕೊಂಡಿದ್ದಾರೆ.

ವಿಭಿನ್ನ ಶೀರ್ಷಿಕೆಯ ಈ ಸಿನಿಮಾ, ಸಮರ್ಥ್ ಬಿ. ಕಡಕೊಳ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚೊಚ್ಚಲ ಚಿತ್ರವಾಗಿದೆ. ಈಗಾಗಲೇ ನಟಿಯರಾದ ಧನು ಹರ್ಷ ಹಾಗೂ ನಿಧಿ ಸುಬ್ಬಯ್ಯ ಸಿನಿಮಾ ಸೆಟ್ ಪ್ರವೇಶಿಸಿದ್ದು, ರಾಧಿಕಾ ನಾರಾಯಣ್ ಅವರೂ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಈಗಾಗಲೇ ಚಿತ್ರೀಕರಣದಲ್ಲೂ ಅವರು ಪಾಲ್ಗೊಂಡಿದ್ದಾರೆ.

ಎಡಗೈ ಬಳಸುವವರ ಸಮಸ್ಯೆಗಳ ಸುತ್ತ ಹೆಣೆದ ಕಥೆಯನ್ನು ಈ ಚಿತ್ರ ಒಳಗೊಂಡಿದೆ. ಬ್ಲ್ಯಾಕ್ ಕಾಮಿಡಿ ಹಾಗೂ ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಸಿನಿಮಾದಲ್ಲಿದೆ. ಹೈಫನ್ ಪಿಕ್ಚರ್ಸ್ ಬ್ಯಾನರ್‌ನಡಿ ಗುರುದತ್ ಗಾಣಿಗ ಹಾಗೂ ನಿರ್ದೇಶಕ ಸಮರ್ಥ್ ಜಂಟಿಯಾಗಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ಶೇ80ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, 'ಭಜರಂಗಿ' ಲೋಕಿ, ಕೃಷ್ಣ ಹೆಬ್ಬಾಳ್ ಚಿತ್ರದ ತಾರಾಗಣದಲ್ಲಿದ್ದಾರೆ. ಅಭಿಮನ್ಯು ಸದಾನಂದ್ ಛಾಯಾಗ್ರಹಣ, ರಾಹುಲ್ ವಿ. ಪಾರ್ವತಿಕರ್ ಹಾಗೂ ಶ್ರೀಪಾದ್ ಜೋಶಿ ಸಂಭಾಷಣೆ ಚಿತ್ರಕ್ಕಿದೆ.



ರಾಧಿಕಾ ನಾರಾಯಣ್



❦ ಸುಭಾಷಿತ ❦
ನಿಮ್ಮ ಮನಸ್ಸಿಗೆ ಏನಾದರೂ ಇಷ್ಟವಾಗದಿದ್ದರೆ ಅದಕ್ಕೆ ಬೆಲೆ ಕೊಡಿ.

-ವಿಲಿಯಂ ಷೇಕ್ಸ್‌ಪಿಯರ್

ರದ್ದಾದ ಒಪ್ಪಂದ: ರಾಜಕೀಯ ಪ್ರಮಾದ ತೆರಿಗೆ ಹಣ ಪೋಲು ಮಾಡುವಂತಿಲ್ಲ

ವೈಟ್ ಟಾಪಿಂಗ್ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರ ಜೊತೆ ಮಾಡಿಕೊಂಡಿದ್ದ ಒಪ್ಪಂದದಿಂದ ಹಿಂದೆ ಸರಿದ ಕಾರಣಕ್ಕಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ₹ 38 ಕೋಟಿಯನ್ನು ದಂಡದ ರೂಪದಲ್ಲಿ ಕಕ್ಕುವಂತಹ ಸನ್ನಿವೇಶ ಎದುರಾಗಿದೆ. ತೆರಿಗೆದಾತರು ನೀಡಿದ ಹಣದಿಂದಲೇ ಬಿಬಿಎಂಪಿ ಇಷ್ಟೊಂದು ದೊಡ್ಡ ಮೊತ್ತವನ್ನು ಭರಿಸಲು ಮುಂದಾಗಿದೆ. ತೆರಿಗೆ ಹಣ ಹೇಗೆ ಪೋಲಾಗುತ್ತದೆ ಎಂಬುದಕ್ಕೆ ಇದೊಂದು ತಕ್ಕ ನಿದರ್ಶನ. ಅದು, 2019ರಲ್ಲಿ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದ ಸಂದರ್ಭ. ಬಿಬಿಎಂಪಿಯು ₹ 1,154 ಕೋಟಿ ವೆಚ್ಚದಲ್ಲಿ ಬೆಂಗಳೂರಿನ 89 ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡಿಸಲು ನಿರ್ಧರಿಸಿತ್ತು. ಟೆಂಡರ್ ಪ್ರಕ್ರಿಯೆ ಮುಗಿದ ಬಳಿಕ ಯಶಸ್ವಿ ಬಿಡ್ದುದಾರರಿಗೆ ಬಿಬಿಎಂಪಿಯಿಂದ ಕಾಮಗಾರಿಗಳ ಗುತ್ತಿಗೆ ವಹಿಸಿ ಕೊಡಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಹೋಗಿ, ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂತು. ಗುತ್ತಿಗೆ ಪಡೆದವರ ಪೈಕಿ ನಾಲ್ವರಿಗೆ ಆ ಸಂದರ್ಭದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿಯನ್ನೇ ನೀಡಲಿಲ್ಲ. ಈ ನಾಲ್ವರೂ ಗುತ್ತಿಗೆದಾರರು ಕರಾರಿನಂತೆ ಬ್ಯಾಂಕ್ ಗ್ಯಾರಂಟಿ ಮತ್ತು ಭದ್ರತಾ ಠೇವಣಿ ಒದಗಿಸಿದರೂ ಅವರು ಕೈಗೊಳ್ಳಬೇಕಿದ್ದ ಒಟ್ಟು ₹ 320 ಕೋಟಿ ಮೊತ್ತದ ಕಾಮಗಾರಿಗಳನ್ನು ತಡೆಹಿಡಿಯಲಾಯಿತು. ‘ವೈಟ್ ಟಾಪಿಂಗ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಹೇಳಲಾಯಿತು. ಆದರೆ, ವಾಸ್ತವವಾಗಿ ರಾಜಕೀಯ ಕಾರಣಗಳಿಗಾಗಿ ಈ ಗುತ್ತಿಗೆ ಒಪ್ಪಂದಗಳಿಂದ ಹಿಂದೆ ಸರಿಯಲಾಗಿತ್ತು.



ಗುತ್ತಿಗೆಯಿಂದ ಹಿಂದೆ ಸರಿದಿದ್ದರಿಂದ ಉದ್ಭವಿಸಿರುವ ಈ ಸಮಸ್ಯೆಯು ಸರ್ಕಾರದಲ್ಲಿ ನಿರಂತರತೆಗೆ ಸಂಬಂಧಿಸಿದಂತೆ ಗುರುತರ ಪ್ರಶ್ನೆಗಳನ್ನು ಎತ್ತಿದೆ

ಹೌದು, ಒಪ್ಪಂದ ರದ್ದುಗೊಳಿಸುವಾಗ ನೀಡಲಾಗಿದ್ದ ಕಾರಣಗಳೆಲ್ಲವೂ ರಾಜಕೀಯ ಸ್ವರೂಪದ್ದಾಗಿದ್ದವು. ಬಿಜೆಪಿಯೇತರ ಶಾಸಕರ ಕ್ಷೇತ್ರಗಳಲ್ಲಷ್ಟೇ ಕಾಮಗಾರಿ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ದೂರಲಾಗಿತ್ತು. ಅಕ್ರಮಕ್ಕೆ ಸಂಬಂಧಿಸಿದಂತೆ ಮಾಡಲಾದ ಆರೋಪಗಳಲ್ಲಿ ಒಂದನ್ನೂ ಸಾಬೀತು ಮಾಡಲಿಲ್ಲ. ಗುತ್ತಿಗೆ ಒಪ್ಪಂದದಿಂದ ಮಾತ್ರ ಅನಗತ್ಯವಾಗಿ ಹಿಂದೆ ಸರಿಯಲಾಯಿತು. ನಂತರದ ದಿನಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅತೀ ಆತುರದಿಂದ ವೈಟ್ ಟಾಪಿಂಗ್ ಯೋಜನೆಯನ್ನು ಮತ್ತೆ ಅನುಷ್ಠಾನಕ್ಕೆ ತಂದಿತು. ಈ ಆತುರದ ಹಿಂದಿನ ಮರ್ಮವನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ‘ಕಾಮಗಾರಿಗಳಿಗೆ ರಸ್ತೆಗಳನ್ನು ಆಯ್ಕೆ ಮಾಡುವಾಗ ರಾಜಕೀಯ ಪ್ರತಿಸ್ಪರ್ಧಿಗಳ ಕ್ಷೇತ್ರಗಳನ್ನು ಕಡೆಗಣಿಸಲಾಗಿದೆ’ ಎಂಬ ಆರೋಪ ಆಗಲೂ ಬಲವಾಗಿಯೇ ಕೇಳಿಬಂತು. ‘ಯಾವುದೇ ಕಾಮಗಾರಿಗೆ ಮೊದಲು ಶೇ 5ರಿಂದ ಶೇ 10ರಷ್ಟು ‘ಕಮಿಷನ್’ ಕೊಡಬೇಕಿತ್ತು. ಈಗ ಅದರ ಪ್ರಮಾಣ ಶೇ 40ಕ್ಕೆ ತಲುಪಿದೆ’ ಎಂದು ಕರ್ನಾಟಕ ಗುತ್ತಿಗೆದಾರರ ಸಂಘ ಇದೇ ಅವಧಿಯಲ್ಲಿ ಪ್ರಧಾನಿಯವರೆಗೆ ದೂರು ಒಯ್ದಿದ್ದು ಇನ್ನೊಂದು ಕಥೆ. ಗುತ್ತಿಗೆ ರದ್ದತಿ ಪ್ರಕರಣದ ಕುರಿತು ನಗರಾಭಿವೃದ್ಧಿ ಇಲಾಖೆಯ ಪ್ರಶ್ನೆಗೆ ಉತ್ತರಿಸಿರುವ ಬಿಬಿಎಂಪಿ, ಒಪ್ಪಂದದಿಂದ ಹಿಂದೆ ಸರಿದ ಕಾರಣ ಕರಾರಿನ ಪ್ರಕಾರ ನಾಲ್ವರು ಗುತ್ತಿಗೆದಾರರಿಗೆ ತಾನು ಹಣ ನೀಡಬೇಕಿದೆ ಎಂಬುದನ್ನು ಒಪ್ಪಿಕೊಂಡಿದೆ. ಒಪ್ಪಂದದಿಂದ ಹಿಂದೆ ಸರಿದಿದ್ದರಿಂದ ದೊಡ್ಡ ಮೊತ್ತದ ಹಣವನ್ನು ಉಳಿಸಲಾಯಿತು ಎಂದು ತೋರಿಸಲು ಪಾಲಿಕೆ ಅಧಿಕಾರಿಗಳು ಯತ್ನಿಸುತ್ತಿದ್ದಾರೆ. ಆದರೆ, ರಾಜಕೀಯ ಒತ್ತಡಕ್ಕೆ ಕಟ್ಟುಬಿದ್ದು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬುದು ಸ್ಪಷ್ಟ. ಆಗಿರುವ ನಷ್ಟದ ಬಗ್ಗೆ ಯಾವ ಮಾತನ್ನೂ ಆಡುತ್ತಿಲ್ಲ. ಬಿಬಿಎಂಪಿಯಿಂದ ಗುತ್ತಿಗೆದಾರರಿಗೆ ₹ 38 ಕೋಟಿಯನ್ನು ಕೊಡಲೇಬೇಕಾದಲ್ಲಿ ಆ ನಿರ್ಣಯಕ್ಕೆ ಕಾರಣರಾದ ರಾಜಕಾರಣಿಗಳು ಹಾಗೂ ಅಧಿಕಾರಿಗಳಿಂದ ಆ ಮೊತ್ತವನ್ನು ವಸೂಲಿ ಮಾಡಬೇಕೇ ವಿನಾ ಜನರ ತೆರಿಗೆ ಹಣದಿಂದ ಅದನ್ನು ಪಾವತಿಸುವುದಲ್ಲ.

ಗುತ್ತಿಗೆಯಿಂದ ಹಿಂದೆ ಸರಿದಿದ್ದರಿಂದ ಉದ್ಭವಿಸಿರುವ ಈ ಸಮಸ್ಯೆಯು ಸರ್ಕಾರದಲ್ಲಿ ನಿರಂತರತೆಗೆ ಸಂಬಂಧಿಸಿದಂತೆ ಗುರುತರ ಪ್ರಶ್ನೆಗಳನ್ನು ಎತ್ತಿದೆ. ಆಡಳಿತ ವ್ಯವಸ್ಥೆಗೆ ಇರಬೇಕಾದ ಬದ್ಧತೆಯ ಪಾವಿತ್ರ್ಯದ ಕಡೆಗೂ ಬೊಟ್ಟು ಮಾಡಿದೆ. ಸರ್ಕಾರದ ಯಾವುದೇ ಸಂಸ್ಥೆಗಳು ಮಾಡಿಕೊಂಡಿರುವ ಒಪ್ಪಂದಗಳೆಲ್ಲ ಸರ್ಕಾರದ ಬದ್ಧತೆಗೆ ಒಳಪಟ್ಟಿರುತ್ತವೆ ಮತ್ತು ಅಂತಹ ಒಪ್ಪಂದಗಳಲ್ಲಿ ಅಕ್ರಮಗಳು ಸಾಬೀತಾಗದ ಹೊರತು, ಸರ್ಕಾರದ ನೇತೃತ್ವ ವಹಿಸುವವರು ಬದಲಾದ ಮೇಲೂ ಆ ಒಪ್ಪಂದಗಳನ್ನು ಗೌರವಿಸಬೇಕು. ಪ್ರಜಾಪ್ರಭುತ್ವದಲ್ಲಿ ಅಧಿಕಾರದ ಸುಗಮ ಹಸ್ತಾಂತರ ಪ್ರಕ್ರಿಯೆಯ ಮೂಲತತ್ವಗಳಲ್ಲಿ ಈ ಬದ್ಧತೆಯು ಒಂದಾಗಿದ್ದು, ಅದೇ ಆಡಳಿತ ವ್ಯವಸ್ಥೆಯು ಜನರಿಗೆ ನೀಡುವ ಭರವಸೆಯೂ ಆಗಿದೆ. ಬೇಕಾಬಿಟ್ಟಿ ನಿರ್ಧಾರ ಕೈಗೊಳ್ಳುವುದು ಹಾಗೂ ಮನಬಂದಂತೆ ಒಪ್ಪಂದಗಳನ್ನು ರದ್ದುಪಡಿಸುವುದರಿಂದ ಆ ಭರವಸೆಯನ್ನು ಸಂಪೂರ್ಣವಾಗಿ ನಿರಾಕರಿಸಿದಂತೆ ಆಗುತ್ತದೆ. ಅಲ್ಲದೆ, ರಾಜ್ಯದಲ್ಲಿ ಹೂಡಿಕೆದಾರರು ವಿಶ್ವಾಸ ಕಳೆದುಕೊಳ್ಳಲೂ ಅದು ದಾರಿ ಮಾಡಿಕೊಡುತ್ತದೆ.

ದಿನದ ಟ್ವೀಟ್

ಹೊಣೆ ಹೊತ್ತ ಪಾಲಿಕೆ



ಮೊರ್ಬಿ ಸೇತುವೆ ದುರಂತದ ಹೊಣೆ ಹೊತ್ತುಕೊಂಡಿರುವ ಮೊರ್ಬಿ ನಗರಪಾಲಿಕೆಯು, ‘ಸೇತುವೆಯನ್ನು ಸಾರ್ವಜನಿಕರಿಗೆ ಮುಕ್ತವಾಗಿಸಬಾರದಿತ್ತು’ ಎಂದು ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಿದೆ. ನಗರಪಾಲಿಕೆಯ ಮುಖ್ಯಸ್ಥರು ನವೆಂಬರ್ 24ರಂದು ನ್ಯಾಯಾಲಯಕ್ಕೆ ಹಾಜರಾಗಬೇಕಿದೆ. 135 ಮಂದಿಯ ಸಾವಿನ ಹೊಣೆಯನ್ನು ಸರ್ಕಾರದ ಸಂಸ್ಥೆಯೊಂದು ಅಂತೂ ವಹಿಸಿಕೊಂಡಂತಾಗಿದೆ.

ತನುಶ್ರೀ ಪಾಂಡೆ, ಪತ್ರಕರ್ತೆ

ಕಿಡಿನುಡಿ

ಶಾಲಾ ಹಂತದಲ್ಲಿ ಮಕ್ಕಳಿಗೆ ಸ್ವರಕ್ಷಣೆಯ ಬಗ್ಗೆ ಅರಿವು ಮೂಡಿಸುವ ನಿರ್ದಿಷ್ಟ ಶಿಕ್ಷಣದ ಅಗತ್ಯವಿದೆ. ಮಗುವಿಗೆ 6-7 ವರ್ಷವಾಗಿರುವಾಗ, 1ನೇ ತರಗತಿಯ ಹಂತದಿಂದಲೇ ಇಂತಹ ಶಿಕ್ಷಣ ನೀಡಬೇಕು ಮತ್ತು 16 ವರ್ಷದವರೆಗೆ ಈ ಜಾಗೃತಿ ಕಾರ್ಯಕ್ರಮ ಯಾವುದಾದರೂ ಒಂದು ರೂಪದಲ್ಲಿ ಮುಂದುವರಿಯಬೇಕು. ಮನುಕುಲದಲ್ಲಿ ಮೃಗಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಮೇಜರ್ ಜನರಲ್ ಕೆ.ಖೊರಾನ, ನಿವೃತ್ತ ಸೇನಾಧಿಕಾರಿ

25 ವರ್ಷಗಳ ಹಿಂದೆ
ಮಂಗಳವಾರ, 18-11-1997

• ಕಾರ್ಯಾಚರಣೆ ಪಡೆ ವಾಪಸಿಗೆ ಪಟೇಲ್ ನಕಾರ

ಬೆಂಗಳೂರು, ನ. 17– ನರಹಂತಕ, ಕಾಡುಗಳ್ಳ ವೀರಪ್ಪನ್ ಶರಣಾಗದ ಹೊರತು ಅವನ ಸೆರೆಗೆ ಶ್ರಮಿಸುತ್ತಿರುವ ವಿಶೇಷ ಕಾರ್ಯಾಚರಣೆ ಪಡೆಯನ್ನು ಹಿಂತೆಗೆದುಕೊಳ್ಳಲು ಸಾಧ್ಯವೇ ಇಲ್ಲ ಎಂದು ಮುಖ್ಯಮಂತ್ರಿ ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ಆದರೆ, ‘ವೀರಪ್ಪನ್ ಶರಣಾಗುತ್ತಾನೆಂದು ನಾನು ಭಾವಿಸಿದ್ದೇನೆ’ ಎಂದು ಮುಖ್ಯಮಂತ್ರಿ ಅವರು ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರ ಬಳಿ ವಿಶ್ವಾಸವನ್ನು ವ್ಯಕ್ತಪಡಿಸಿದರು.

ವೀರಪ್ಪನ್ ವಿಚಾರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರಿಗೆ ನನ್ನ ಸಮ್ಮತಿಯನ್ನು ನೀಡಿದ್ದೇನೆ. ವೀರಪ್ಪನ್ ಶರಣಾಗತಿ ಬಗ್ಗೆ ಕರುಣಾನಿಧಿ ಕಡೆಯಿಂದ ಸಂದೇಶ ಬಂದಿದೆ ಎಂದರು.

• ಡಿಎಂಕೆ, ವಿ.ಪಿ. ಸಿಂಗ್ ವಿರುದ್ಧ ಕ್ರಮಕ್ಕೆ ಕಾಂಗ್ರೆಸ್ ಒತ್ತಾಯ

ನವದೆಹಲಿ, ನ.17– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈನ್ ಆಯೋಗ ತನ್ನ ಮಧ್ಯಂತರ ವರದಿಯಲ್ಲಿ ದೋಷಾರೋಪಣೆ ಹೊರಿಸಿರುವುದರಿಂದ, ಡಿಎಂಕೆ ಮತ್ತು ಮಾಜಿ ಪ್ರಧಾನಿ ವಿ.ಪಿ. ಸಿಂಗ್ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಇಂದು ಒತ್ತಾಯಿಸಿದೆ.

ಇಂದು ಇಲ್ಲಿ ಸಭೆ ಸೇರಿ ಚರ್ಚಿಸಿದ ಕಾಂಗ್ರೆಸ್ ಸಂಸದೀಯ ಸಮಿತಿ ಈ ವಿಷಯದಲ್ಲಿ ಯಾವುದೇ ರೀತಿಯ ಹೊಂದಾಣಿಕೆ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

50 ವರ್ಷಗಳ ಹಿಂದೆ
ಶನಿವಾರ, 18-11-1972

• ವಾರದೊಳಗಾಗಿ ಕೃಷ್ಣಾ ನಾಲೆ ಕೆಲಸ ಆರಂಭ: 2 ಕೋಟಿ ರೂ. ನೀಡಿಕೆ

ಕಲ್ಬುರ್ಗಿ, ನ. 17– ಮೇಲಣ ಕೃಷ್ಣಾ ಯೋಜನೆಯ ನಾಲೆ ಕೆಲಸ ಪ್ರಾರಂಭಿಸಲು ರಾಜ್ಯ ಸರ್ಕಾರ ಎರಡು ಕೋಟಿ ರೂಪಾಯಿ ಮಂಜೂರು ಮಾಡಿದೆ. ಒಂದು ವಾರದೊಳಗೆ ಕೆಲಸ ಆರಂಭವಾಗುವುದೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಲೆ ಕೆಲಸಕ್ಕಾಗಿ ರಚಿಸಲಿರುವ ಕಾರ್ಮಿಕ ಶಿಬಿರಗಳಿಗೆ ಕೊನೆಯ ಪಕ್ಷ 10 ಸಹಸ್ರ ಕಾರ್ಮಿಕರನ್ನು ಕಳುಹಿಸಲು ಜಿಲ್ಲಾಧಿಕಾರಿ ಶ್ರೀ ಬಾಲಸುಬ್ರಮಣಿಯನ್ ಅವರು ತಾಲ್ಲೂಕು ಬೋರ್ಡ್‌ಗಳಿಗೆ ಮನವಿ ಮಾಡಿದ್ದಾರೆ. ಸರ್ಕಾರ ವ್ಯವಸ್ಥೆಗೊಳಿಸುವ ಈ ಶಿಬಿರಗಳಲ್ಲಿ ಧಾನ್ಯ ಪೂರೈಕೆ ಮತ್ತು ವೈದ್ಯಕೀಯ ನೆರವಿನ ವ್ಯವಸ್ಥೆ ಮಾಡಲಾಗುವುದೆಂದು ಅವರು ತಿಳಿಸಿದ್ದಾರೆ. ನಾಲೆ ಕೆಲಸದಲ್ಲಿ 10ರಿಂದ 15 ಸಹಸ್ರ ಜನರಿಗೆ ಉದ್ಯೋಗ ಒದಗಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಪ್ರಕಟಿಸಿದ್ದಾರೆ.

• ಸಿ.ಐ.ಎ ಚಟುವಟಿಕೆ ಹತ್ತಿಕ್ಕಲು ಬಲವಾದ ಗೂಢಚಾರ ಜಾಲ ರಚನೆಗೆ ರಾಜ್ಯಸಭೆ ಒತ್ತಾಯ

ನವದೆಹಲಿ, ನ. 17– ಸಿ.ಐ.ಎ. ಚಟುವಟಿಕೆಗಳನ್ನು ಪರಿಣಾಮಕರವಾಗಿ ಹತ್ತಿಕ್ಕಲು ಭಾರತೀಯ ಗೂಢಚಾರ ಜಾಲವನ್ನು ಬಲಪಡಿಸಬೇಕೆಂದು ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ಇಂದು ರಾಜ್ಯಸಭೆಯಲ್ಲಿ ಸರ್ಕಾರವನ್ನು ಒತ್ತಾಯಪಡಿಸಿದವು.

ಸಂಸದೀಯ ಸಮಿತಿಯ ವರದಿಗೆ ಬೇರೆಯದೇ ಉದ್ದೇಶಗಳಿರುವ ಗುಮಾನಿ ಇದೆ

ಹಿಂದಿಯೇತರ ರಾಜ್ಯಗಳ ಹಿತಕ್ಕೆ ಬಾಧಕ?



ವಿಶ್ಲೇಷಣೆ

ಎಂ.ಚಂದ್ರ ಪೂಜಾರಿ

ಭಾಷಾವಾರು ಪ್ರಾಂತಗಳ ರಚನೆಗೆ ಎರಡು ಉದ್ದೇಶಗಳಿವೆ. ಒಂದು, ಜನಕಲ್ಯಾಣ ಸುಗಮಗೊಳಿಸಲು ಜನರ ಭಾಷೆಯಲ್ಲೇ ಆಡಳಿತ, ಶಿಕ್ಷಣ ನೀಡುವುದು. ಎರಡು, ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸಲು ವಿಕೇಂದ್ರೀಕೃತ ಆಡಳಿತಕ್ಕೆ ಮಹತ್ವ ನೀಡುವುದು. ಈ ಉದ್ದೇಶಗಳನ್ನು ನಿರಾಕರಿಸುವ ಎಲ್ಲ ಲಕ್ಷಣಗಳು ಗೃಹ ಇಲಾಖೆಯ ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸಮಿತಿಯು ಸೆಪ್ಟೆಂಬರ್‌ನಲ್ಲಿ ರಾಷ್ಟ್ರಪತಿಗೆ ಸಲ್ಲಿಸಿರುವ ವರದಿಯಲ್ಲಿವೆ.

1. ಕೇಂದ್ರ ಸರ್ಕಾರದ ಇಲಾಖೆಗಳಿಗೆ ಸಿಬ್ಬಂದಿಯ ನೇಮಕಾತಿಗೆ ನಡೆಸುವ ಲಿಖಿತ ಪರೀಕ್ಷೆಯನ್ನು ಹಿಂದಿಯಲ್ಲಿ ಮಾತ್ರ ನಡೆಸಬೇಕು. 2. ಕೇಂದ್ರೀಯ ವಿದ್ಯಾಲಯಗಳಲ್ಲಿ, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಹಿಂದಿಯಲ್ಲೇ ಪಠ್ಯ ಪ್ರವಚನಗಳು ನಡೆಯಬೇಕು. 3. ರಾಜ್ಯಗಳು ಹಿಂದಿ ಪ್ರಚಾರ ಮಾಡುವುದನ್ನು ಕಡ್ಡಾಯಗೊಳಿಸಬೇಕು ಎಂಬಂಥ ಶಿಫಾರಸುಗಳಿವೆ. ಸದ್ಯಕ್ಕೆ ಇವು ಶಿಫಾರಸುಗಳು. ಒಂದು ವೇಳೆ ಇವು ಅನುಷ್ಠಾನಗೊಂಡರೆ ಹಿಂದಿಯೇತರ ರಾಜ್ಯಗಳ ಉದ್ಯೋಗಾರ್ಥಿಗಳು, ಶಿಕ್ಷಣಾರ್ಥಿಗಳ ಭವಿಷ್ಯದ ಮೇಲೆ ಗಾಢ ಪರಿಣಾಮ ಬೀರಬಹುದು.

ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಯಾವ ಮಾಧ್ಯಮದಲ್ಲಿ ಪಠ್ಯ ಪ್ರವಚನ ನಡೆಸಬೇಕು, ಕೇಂದ್ರ ಸರ್ಕಾರದ ಇಲಾಖೆಗಳ ಪರೀಕ್ಷೆಯನ್ನು ಯಾವ ಭಾಷೆಯಲ್ಲಿ ನಡೆಸಬೇಕು ಎಂಬುದೆಲ್ಲ ಈ ಸಮಿತಿಯ ವ್ಯಾಪ್ತಿಗೆ ಬರುವುದಿಲ್ಲ. ಹಿಂದಿ ಜೊತೆಗೆ ಇಂಗ್ಲಿಷ್ ಕೂಡ ದೇಶದ ಅಧಿಕೃತ ಭಾಷೆಯೆಂದು ಅರವತ್ತರ ದಶಕದಲ್ಲೇ ತೀರ್ಮಾನವಾಗಿದೆ. ಇದನ್ನು ಬದಲಾಯಿಸಬೇಕಾದರೆ ಸಂವಿಧಾನ ತಿದ್ದುಪಡಿ ಆಗಬೇಕು. ಆದ್ದರಿಂದ ಅಧಿಕೃತ ಭಾಷೆ ಬಗೆಗಿನ ವರದಿಗೆ ಬೇರೆ ಉದ್ದೇಶಗಳಿವೆ ಎನ್ನುವ ಗುಮಾನಿ ಇದೆ. ಬೇರೆ ಉದ್ದೇಶಗಳು ಅರ್ಥವಾಗಬೇಕಾದರೆ ವರ್ತಮಾನದಲ್ಲಿ ನಡೆಯುತ್ತಿರುವ, ಎಲ್ಲವನ್ನೂ ಕೇಂದ್ರೀಕರಿಸುವ ಪ್ರಕ್ರಿಯೆಯನ್ನು ಗಮನಿಸಬೇಕು.

ಈ ಎಲ್ಲ ಬೆಳವಣಿಗೆಗಳಿಗೂ ಬಿಜೆಪಿಯ ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಮಾರುಕಟ್ಟೆ, ಒಂದು ತೆರಿಗೆ, ಒಂದು ಚುನಾವಣೆ ಉದ್ದೇಶಕ್ಕೂ ಸಂಬಂಧ ಇದೆ. ಈ ಸಾಲಿನಲ್ಲಿ ಪರಿಗಣಿಸಬಹುದಾದ ಕೆಲವು ಬೆಳವಣಿಗೆಗಳು ಇಂತಿವೆ. 1. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ), 2. ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲ ವಿತರಣೆ ಮತ್ತು 3. ಮತಕ್ಷೇತ್ರಗಳ ಮರುವಿಂಗಡಣೆ.

ವಿವಿಧ ಭಾಷೆಗಳ ನೆಲೆಯಲ್ಲಿ ರೂಪುಗೊಂಡ ರಾಜ್ಯಗಳ ಅಭಿವೃದ್ಧಿಗೆ ಅವಶ್ಯವಿರುವ ಸಂಪನ್ಮೂಲ ರೂಢಿಸಿಕೊಳ್ಳಲು ತೆರಿಗೆ ವಿಧಿಸುವ ಹಕ್ಕನ್ನು ರಾಜ್ಯಗಳಿಗೆ ಸಂವಿಧಾನ ನೀಡಿದೆ. ಆದರೆ 2017ರಲ್ಲಿ ನಡೆದ ಸಂವಿಧಾನ ತಿದ್ದುಪಡಿ ಮತ್ತು ಜಿಎಸ್‌ಟಿ ಮಂಡಳಿ ರಚನೆಯು ರಾಜ್ಯಗಳ ತೆರಿಗೆ ವಿಧಿಸುವ ಅಧಿಕಾರವನ್ನು ಮೊಟಕುಗೊಳಿಸಿವೆ. ಈ ತಿದ್ದುಪಡಿ ನಂತರ, ಶೇ 80ರಷ್ಟು ಸರಕು ಸೇವೆಗಳ ಮೇಲೆ ತೆರಿಗೆ ವಿಧಿಸುವ ಮತ್ತು ಸಂಗ್ರಹಿಸುವ ಅಧಿಕಾರ ಜಿಎಸ್‌ಟಿ ಮಂಡಳಿಗೆ ವರ್ಗಾವಣೆ ಆಗಿದೆ. ‘ತೆರಿಗೆ ವಿಧಿಸುವ ವಿಚಾರದಲ್ಲಿ ಶಾಸನ ರೂಪಿಸುವ ಸಮಾನ ಅಧಿಕಾರವು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಕ್ಕೆ ಇದೆ. ಹೀಗಾಗಿ, ಜಿಎಸ್‌ಟಿ ಮಂಡಳಿಯ ಶಿಫಾರಸುಗಳು ಕಡ್ಡಾಯವಾಗಿ ಪಾಲಿಸಬೇಕಾದವು ಅಲ್ಲ’ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ, ಯಾವ ರಾಜ್ಯವೂ ಶಿಫಾರಸನ್ನು ಮೀರಿಲ್ಲ. ಇಂದು ರಾಜ್ಯಗಳು ತಮ್ಮ ಸಮಸ್ಯೆ ಪರಿಹಾರಕ್ಕಾಗಿ ಪ್ರತ್ಯೇಕ ತೆರಿಗೆ ಸಂಗ್ರಹಿಸುವ ಸ್ಥಿತಿಯಲ್ಲಿಲ್ಲ. ಸಂಪನ್ಮೂಲ ಇಲ್ಲವಾದರೆ ನಮ್ಮ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ಅಭಿವೃದ್ಧಿ ಬಗ್ಗೆ ಮಾತನಾಡುವುದು ಒಣ ಚರ್ಚೆ ಆಗುತ್ತದೆ.

ರಾಜ್ಯಗಳ ಅಭಿವೃದ್ಧಿಗೆ ಅಡ್ಡಿಯಾಗುವ ಎರಡನೇ ಅಂಶವು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಪನ್ಮೂಲ ಹಂಚುವಿಕೆ. ಕೇಂದ್ರ ಸರ್ಕಾರ ಸಂಗ್ರಹ ಮಾಡುವ ಆದಾಯ ತೆರಿಗೆ, ಉದ್ದಿಮೆಗಳ ಲಾಭದ ಮೇಲಿನ ತೆರಿಗೆ, ಕೇಂದ್ರದ ಅಬಕಾರಿ ತೆರಿಗೆ ಮತ್ತು ಇತರ ಸಂಪನ್ಮೂಲಗಳಲ್ಲಿ ರಾಜ್ಯಗಳ ಪಾಲನ್ನು ಹಣಕಾಸು ಸಮಿತಿ ನಿರ್ಧರಿಸುತ್ತದೆ. 15ನೇ ಹಣಕಾಸು ಸಮಿತಿಯು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕಾದ ಸಂಪನ್ಮೂಲದ ಪಾಲನ್ನು ಹಿಂದಿನ ಶೇ 32ರಿಂದ ಶೇ 42ಕ್ಕೆ ಏರಿಸಿದೆ. ಈ ಸಮಿತಿಯ ವರದಿ ಜಾರಿಗೆ ಬರುವ ಮುನ್ನವೇ ಕೇಂದ್ರ ಸರ್ಕಾರವು ರಾಜ್ಯಗಳ ಪಾಲನ್ನು ಹಿಂದಿನ ಸ್ಥಿತಿಯಲ್ಲೇ ಇಡಲು ಪ್ರಯತ್ನಿಸುತ್ತಿದೆ.

ಕೇಂದ್ರವು ಸಂಗ್ರಹ ಮಾಡುವ ತೆರಿಗೆಯಲ್ಲಿ ಎರಡು ಭಾಗಗಳಿವೆ. ಒಂದು, ಮೂಲ ತೆರಿಗೆ ಮತ್ತು ಎರಡು, ಸೆಸ್. ಮೂಲ ತೆರಿಗೆಯನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕು. ಸೆಸ್ ಅನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಅಗತ್ಯ ಇಲ್ಲ. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸೆಸ್ ಸಂಗ್ರಹ ಪ್ರಮಾಣ ಹೆಚ್ಚುತ್ತಾ ಹೋಗಿದೆ. 2011-12ರಲ್ಲಿ ಶೇ 10ರಷ್ಟಿದ್ದ ಸೆಸ್ ಸಂಗ್ರಹವು 2021-22ರ ವೇಳೆಗೆ ಶೇ 20ಕ್ಕೆ ಏರಿದೆ. ಅಂದರೆ ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಭಾಗ ಶೇ 100ರಿಂದ ಶೇ 90 ಮತ್ತು ಈಗ ಶೇ 80ಕ್ಕೆ ಇಳಿದಿದೆ.

ತೈಲದ ಮೇಲಿನ ಅಬಕಾರಿ ತೆರಿಗೆ (ಸೆಂಟ್ರಲ್ ಎಕ್ಸೈಸ್) ಕೇಂದ್ರಕ್ಕೆ ಬಹುದೊಡ್ಡ ರೆವಿನ್ಯೂ ಸಂಗ್ರಹದ ಮೂಲವಾಗಿದೆ. 2021ರಲ್ಲಿ ಒಂದು ಲೀಟರ್ ಪೆಟ್ರೋಲ್ ಮೇಲೆ ಸೆಂಟ್ರಲ್ ಎಕ್ಸೈಸ್ ₹ 32 ಇತ್ತು. ಇದರಲ್ಲಿ ₹ 1.40 ಮಾತ್ರ ಮೂಲ ತೆರಿಗೆ ಆಗಿದ್ದು, ₹ 30.60 ಸೆಸ್ ಆಗಿತ್ತು. ಅಂದರೆ ಯಾವುದೇ ರಾಜ್ಯದ ಮೂಲೆಯಲ್ಲೂ ಒಂದು ಲೀಟರ್ ಪೆಟ್ರೋಲ್ ಖರೀದಿಸಿದಾಗ ಪ್ರತಿಯೊಬ್ಬರೂ ಕನಿಷ್ಠ ₹ 30 ಅನ್ನು ಕೇಂದ್ರದ ಖಜಾನೆಗೆ ತುಂಬುತ್ತಾರೆ.



ಮೇಲಿನವುಗಳೊಂದಿಗೆ ಮತಕ್ಷೇತ್ರಗಳ ಮರುವಿಂಗಡಣೆಯು ನಮ್ಮ ಒಕ್ಕೂಟ ವ್ಯವಸ್ಥೆಗೆ ಬಹುದೊಡ್ಡ ಸವಾಲನ್ನು ಒಡ್ಡಬಹುದು. ಸಂವಿಧಾನದ ಪ್ರಕಾರ, ವಿಧಾನಸಭೆ ಮತ್ತು ಲೋಕಸಭೆ ಕ್ಷೇತ್ರಗಳ ಮರುವಿಂಗಡಣೆಯನ್ನು ಜನಸಂಖ್ಯೆಯ ಆಧಾರದಲ್ಲಿ ನಡೆಸಬೇಕು. ಅದರಂತೆ 1951, 61 ಮತ್ತು 71ರಲ್ಲಿ ಈ ಕಾರ್ಯ ನಡೆದಿದೆ. 1976ರಲ್ಲಿ ಸಂವಿಧಾನ ತಿದ್ದುಪಡಿ ಮಾಡಿ ಕ್ಷೇತ್ರಗಳ ಮರುವಿಂಗಡಣೆಯನ್ನು 2001ಕ್ಕೆ ಮುಂದೂಡಲಾಯಿತು. ಇದಕ್ಕೆ ಕಾರಣ, ಕೇಂದ್ರದ ಜನಸಂಖ್ಯೆ ನಿಯಂತ್ರಣ ನೀತಿಯನ್ನು ದಕ್ಷಿಣದ ರಾಜ್ಯಗಳು ಜಾರಿಗೊಳಿಸಿದಷ್ಟು ಪರಿಣಾಮಕಾರಿಯಾಗಿ ಉತ್ತರದ ಹಿಂದಿ ರಾಜ್ಯಗಳು ಜಾರಿಗೊಳಿಸಲಿಲ್ಲ ಎಂಬುದು. ಇದರಿಂದ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ಇದೇ ಕಾರಣವನ್ನು ಮುಂದಿಟ್ಟು 2002ರಲ್ಲಿ ಎನ್‌ಡಿಎ ಸರ್ಕಾರ ಕೂಡ ಕ್ಷೇತ್ರಗಳ ಮರುವಿಂಗಡಣೆಯನ್ನು 2026ಕ್ಕೆ ಮುಂದೂಡಿದೆ. ಜನಸಂಖ್ಯೆಯನ್ನು ಆಧರಿಸಿ ಕ್ಷೇತ್ರಗಳ ಮರುವಿಂಗಡಣೆ ಆಗದೆ ಈಗಾಗಲೇ 50 ವರ್ಷಗಳಾಗಿವೆ. ಆದ್ದರಿಂದ 2026ರಲ್ಲಿ ಕ್ಷೇತ್ರಗಳ ಮರುವಿಂಗಡಣೆ ಮಾಡುವ ಅನಿವಾರ್ಯ ಇದೆ.


2021ರ ಜನಸಂಖ್ಯೆಯು ಐದು ವರ್ಷ ಹಿಂದಿನದು ಎಂಬ ನೆಪ ಹೇಳಿ 2026ರ ಉದ್ದೇಶಿತ ಕ್ಷೇತ್ರಗಳ ಮರುವಿಂಗಡಣೆ ಕಾರ್ಯವನ್ನು 2031ಕ್ಕೆ ಮುಂದೂಡುವ ಸಾಧ್ಯತೆ ಇಲ್ಲದಿಲ್ಲ. ಕೆಲವು ಅಧ್ಯಯನಗಳ ಪ್ರಕಾರ, ಒಂದು ವೇಳೆ 2031ರ ಜನಸಂಖ್ಯೆ ಪ್ರಕಾರ ಮರುವಿಂಗಡಣೆ ನಡೆದರೆ ಉತ್ತರಪ್ರದೇಶದಲ್ಲಿ ಈಗ ಇರುವ 80 ಲೋಕಸಭಾ ಸೀಟುಗಳು 143ಕ್ಕೆ, ಬಿಹಾರದಲ್ಲಿರುವ 40 ಸೀಟುಗಳು 79ಕ್ಕೆ, ಮಧ್ಯಪ್ರದೇಶದಲ್ಲಿರುವ 29 ಸೀಟುಗಳು 52ಕ್ಕೆ, ರಾಜಸ್ಥಾನದಲ್ಲಿರುವ 25 ಸೀಟುಗಳು 50ಕ್ಕೆ ಏರುವ ಸಾಧ್ಯತೆಗಳಿವೆ ಮತ್ತು ಈ ನಾಲ್ಕು ರಾಜ್ಯಗಳಲ್ಲಿ ಒಟ್ಟು 324 ಸೀಟುಗಳಾಗಬಹುದು.

ಇದೇ ಸಂದರ್ಭದಲ್ಲಿ ದಕ್ಷಿಣದ ರಾಜ್ಯಗಳಲ್ಲಿ ವಿಶೇಷ ಏರಿಕೆ ಆಗುವುದಿಲ್ಲ. ಆಂಧ್ರಪ್ರದೇಶ ಮತ್ತು ತೆಲಂಗಾಣ ಸೇರಿ ಈಗ ಇರುವ 42 ಸೀಟುಗಳು 54ಕ್ಕೆ, ತಮಿಳುನಾಡಿನಲ್ಲಿರುವ 39 ಸೀಟುಗಳು 49ಕ್ಕೆ ಏರಿಕೆಯಾಗಲಿದ್ದು, ಕೇರಳದಲ್ಲಿರುವ 20 ಸೀಟುಗಳು ಯಥಾಸ್ಥಿತಿಯಲ್ಲಿ ಮುಂದುವರಿಯಲಿವೆ. ಒಡಿಶಾದಲ್ಲಿರುವ 21 ಸೀಟುಗಳು 26ಕ್ಕೆ ಏರುವ ಸಾಧ್ಯತೆಗಳಿವೆ ಮತ್ತು ಒಟ್ಟು ಈ ರಾಜ್ಯಗಳಲ್ಲಿ 149 ಸೀಟುಗಳಾಗಬಹುದು.

ಹೀಗೆ ಉತ್ತರದ ಹಿಂದಿ ರಾಜ್ಯಗಳಲ್ಲಿ 150 ಸೀಟುಗಳು ಹೆಚ್ಚಾದಾಗ ದಕ್ಷಿಣದ ಹಿಂದಿಯೇತರ ರಾಜ್ಯಗಳಲ್ಲಿ ಬರೀ 27 ಸೀಟುಗಳು ಹೆಚ್ಚಾಗಬಹುದು. ಇಂತಹ ಒಂದು ರಾಜಕೀಯ ಸ್ಥಿತಿ ಬಿಜೆಪಿಗೆ ಹೆಚ್ಚು ಅನುಕೂಲಕರ ಆಗಬಹುದು. ಏಕೆಂದರೆ, ಬಿಜೆಪಿ ಮಾತ್ರ ಒಂದು ದೇಶ, ಒಂದು ಭಾಷೆ, ಒಂದು ಧರ್ಮ, ಒಂದು ಮಾರುಕಟ್ಟೆಯಂತಹ ಹಲವು ‘ಒಂದು’ಗಳ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು.

ಹಿಂದಿಗೆ ಮಹತ್ವ ನೀಡುವುದರಿಂದ, ಇಂದು ಅಲ್ಪಸಂಖ್ಯಾತರನ್ನು ಹೊರಗಿಟ್ಟು ಅಧಿಕಾರಕ್ಕೆ ಏರುವ ಬಿಜೆಪಿ ಮುಂದೊಂದು ದಿನ ಹಿಂದಿಯೇತರರನ್ನು ಹೊರಗಿಟ್ಟು ಕೂಡ ಅಧಿಕಾರಕ್ಕೆ ಏರಬಹುದು. ಆದರೆ ದೇಶದ ಅದರಲ್ಲೂ ಹಿಂದಿಯೇತರ ರಾಜ್ಯಗಳ ಭವಿಷ್ಯದ ದೃಷ್ಟಿಯಿಂದ ಇವೆಲ್ಲವೂ ಉತ್ತಮ ಬೆಳವಣಿಗೆಗಳಲ್ಲ.

ಚುರುಮುರಿ



ಚೆಲ್ಲಬೇಕು, ಬಾಚಬೇಕು!

• ಬಿ.ಎನ್.ಮಲ್ಲೇಶ್

‘ಈ ಸಲ ಎಮ್ಮೆಲ್ಲೆ ಎಲೆಕ್ಷನ್‌ಗೆ ನಿಂತು ನಾನೂ ಒಂದು ಕೈ ನೋಡಾಣ ಅಂತಿದೀನಪ...’ ದುಬ್ಬೀರ ಹರಟೆಕಟ್ಟೆಯಲ್ಲಿ ಹೇಳಿದಾಗ ಗುಡ್ಡೆ ಕಿಸಕ್ಕೆಂದ.

‘ಯಾಕಲೆ ನಗ್ತೀಯ? ನಂಗೆ ಎಮ್ಮೆಲ್ಲೆ ಆಗೋ ಯೋಗ್ತೆ ಇಲ್ವಾ?’ ದುಬ್ಬೀರ ರೇಗಿದ.

‘ಯೋಗ್ತೆ ಪ್ರಶ್ನೆ ಅಲ್ಲ, ರೊಕ್ಕ ಎಷ್ಟಿಟ್ಟಿದೀಯ? ಜುಜುಬಿ ಚಾ ಕುಡಿಸೋಕೂ ಚೌಕಾಸಿ ಮಾಡ್ತೀಯ...’

‘ಇದಕ್ಕೆ ರೊಕ್ಕ ಯಾಕೆ ಬೇಕು? ಗೆಲ್ಸಿದ್ರೆ ನಿಮ್ಮನೆ ಸೇವಕನಾಗಿ ದುಡೀತೀನಿ ಅಂತ ಜನಕ್ಕೆ ಹೇಳ್ತೀನಿ’.

‘ಎಲ್ರೂ ಹಂಗೇ ಹೇಳೋದು. ಗೆದ್ದ ಮೇಲೆ ಜನರ ಮನಿ ಬಾಗಿಲಿಗೆ ಇವರೂ ಹೋಗಲ್ಲ, ಇವರ ಮನಿ ಬಾಗಿಲಿಗೆ ಜನರನ್ನೂ ಸೇರ್ಸಲ್ಲ’.

‘ನಮ್ ದುಬ್ಬೀರ ಹಂಗಲ್ಲಲೆ, ಹಗಲೂ ರಾತ್ರಿ ಜನರ ಮನಿ ಬಾಗಿಲಲ್ಲೇ ಬಿದ್ದಿರ್ತಾನೆ’ ತೆಪರೇಸಿಗೂ ನಗು.

‘ಲೇ ದುಬ್ಬೀರ, ಎಲೆಕ್ಷನ್ ಅಂದ್ರೆ ಏನ್ ತಿಳಿದಿದಿ? ಪುಟ್ಟೀಲಿ ರೊಕ್ಕ ಚೆಲ್ಲಬೇಕು, ಜೆಸಿಬೀಲಿ ರೊಕ್ಕ ಬಾಚಬೇಕು... ಜನರ ಸೇವೆ ಎಲ್ಲ ಭಾಷಣದ ಬದ್ನೇಕಾಯಿ...’ ಕೊಟ್ರೇಶಿ ಅನುಭವದ ಮಾತಾಡಿದ.

‘ಹೋಗ್ಲಿ ಜೆಸಿಬಿಯಲ್ಲಿ ಯಾವ ಪಾರ್ಟಿ ಟಿಕೆಟ್ ಕೇಳ್ತೀಯ?’ ಗುಡ್ಡೆ ಕೇಳಿದ.

‘ಜೆಸಿಬಿ ಅಂದ್ರೆ?’

‘ಜನತಾದಳ, ಕಾಂಗ್ರೆಸ್ಸು, ಬಿಜೆಪಿ ಕಣಲೆ’.

‘ಯಾವ ಪಕ್ಷನೂ ಬೇಡ, ಪಕ್ಷೇತರ ನಿಲ್ತೀನಿ’.

‘ಹಂಗಾದ್ರೆ ನೀನು ಗೆದ್ದಂಗೇ ಬಿಡು, ದೊಡ್ಡ ಪಕ್ಷಾನೂ ಇಲ್ಲ, ದುಡ್ಡೂ ಇಲ್ಲ ಅಂದ್ರೆ ಹೆಂಗೆ?’

‘ಎರಡೂ ಇಲ್ಲದೆ ಗೆದ್ದು ಜನರ ಸೇವೆ ಮಾಡ್ಬೇಕು ಅಂತ ನನ್ನಾಸೆ’.

ದುಬ್ಬೀರನ ಮಾತಿಗೆ ತಲೆ ಕೆರೆದುಕೊಂಡ ಗುಡ್ಡೆ, ‘ನೀನು ಎಮ್ಮೆಲ್ಲೆ ಆಗೋದು ಕಷ್ಟ. ಆದ್ರೆ ಜನರ ಸೇವೆ ಮಾಡಬಹುದು ನೋಡು’ ಎಂದ.

‘ಹೆಂಗೆ?’

‘ಸದ್ಯ ನಮ್ಮನಿ ಹತ್ರ ಚರಂಡಿ ಕಟ್ಕಂಡೈತೆ, ಬಂದು ಕ್ಲೀನ್ ಮಾಡಿ ಪುಣ್ಯ ಕಟ್ಕೋ ಸಾಕು’.

ಗುಡ್ಡೆ ಮಾತಿಗೆ ಹರಟೆಕಟ್ಟೆಯಲ್ಲಿ ನಗೆಯ ಅಲೆ ತೇಲಿತು.

ಸಂಗತ

ತತ್ವಶಾಸ್ತ್ರಕ್ಕಿಲ್ಲ ಪ್ರೋತ್ಸಾಹ: ಯಾಕೆ ಗೊತ್ತೇ?

ತತ್ವಶಾಸ್ತ್ರದ ಓದುವಿಕೆಯು ಸಂಯಮದಿಂದ ಬದುಕುವ ಕಲೆಯನ್ನು ಕಲಿಸುತ್ತದೆ. ನಮ್ಮಲ್ಲಿ ಆಗಾಗ ಮೂಡಬಹುದಾದ ಪರಕೀಯ ಭಾವವನ್ನು ದೂರ ಮಾಡುತ್ತದೆ

• ಡಾ. ಜ್ಯೋತಿ


ಯುನೆಸ್ಕೊ ಪ್ರತಿವರ್ಷ ನವೆಂಬರ್ ತಿಂಗಳ ಮೂರನೇ ಗುರುವಾರವನ್ನು (ಈ ವರ್ಷ ನ. 17) ‘ವಿಶ್ವ ತತ್ವಶಾಸ್ತ್ರ ದಿನ’ವೆಂದು ಆಚರಿಸುತ್ತಿದೆ. ಈ ದಿನಾಚರಣೆಯ ಉದ್ದೇಶ, ಜಗತ್ತಿನಲ್ಲಿ ಪ್ರತೀ ವ್ಯಕ್ತಿಯ ಸ್ವತಂತ್ರ ಚಿಂತನೆಯನ್ನು ಉದ್ದೀಪಿಸುವುದು, ಅಂತರ್ ಸಾಂಸ್ಕೃತಿಕ ಅಧ್ಯಯನಕ್ಕೆ ಉತ್ತೇಜನ ನೀಡುವುದು ಮತ್ತು ಮನಸ್ಸಿನಲ್ಲಿ ಮೂಡುವ ಆಲೋಚನೆಗಳಿಗೆ ತರ್ಕಬದ್ಧವಾಗಿ ಮುಖಾಮುಖಿಯಾಗಿ, ನಮ್ಮ ಮುಂದಿರುವ ನಾನಾ ಗೋಜಲುಗಳನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುವುದೇ ಆಗಿದೆ. ಈ ವರ್ಷದ ಧ್ಯೇಯ ವಾಕ್ಯ, ‘ದಿ ಹ್ಯೂಮನ್ ಆಫ್ ದಿ ಫ್ಯೂಚರ್’ (ಭವಿಷ್ಯದ ಮನುಷ್ಯ). ಅಂದರೆ, ಭವಿಷ್ಯದ ಜಗತ್ತಿಗೆ ಮನುಷ್ಯರನ್ನು ಮಾನಸಿಕವಾಗಿ ಸಿದ್ಧಗೊಳಿಸುವುದು. ಈ ಸಂದರ್ಭದಲ್ಲಿ, ತತ್ವಶಾಸ್ತ್ರದ ಅರಿವು ನಮಗೇಕೆ ಅಗತ್ಯ ಎನ್ನುವುದನ್ನು ಪರಿಶೀಲಿಸುವ ಅಗತ್ಯವಿದೆ ಎನಿಸುತ್ತದೆ.

ಗ್ರೀಕ್ ಭಾಷೆಯಲ್ಲಿ ‘ತತ್ವಶಾಸ್ತ್ರ’ (ಫಿಲಾಸಫಿ) ಎಂದರೆ ‘ವಿದ್ವತ್ತಿನ ಮೇಲಿನ ಪ್ರೀತಿ’ ಎಂದರ್ಥ. ನಾವು ಪಡೆಯುವ ಅತ್ಯುನ್ನತ ಪದವಿ ಪಿಎಚ್‌.ಡಿ (ಡಾಕ್ಟರ್ ಆಫ್ ಫಿಲಾಸಫಿ) ಕೂಡ ವಿಷಯವಾರು ಪರಿಪೂರ್ಣ ವಿದ್ವತ್ತನ್ನು ಸೂಚಿಸುತ್ತದೆ. ಮೂಲತಃ, ತತ್ವಶಾಸ್ತ್ರವು ತರ್ಕದ ಮೂಲಕ ಜಗತ್ತಿನಲ್ಲಿ ಮನುಷ್ಯನ ಜೀವನಾನುಭವವನ್ನು ಪ್ರಶ್ನಿಸಿ, ವಿಶ್ಲೇಷಿಸಿ, ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತದೆ. ನಮ್ಮ ತರ್ಕಬದ್ಧ ಆಲೋಚನೆಗಳಿಗೆ ಒಂದು ಸ್ಪಷ್ಟ ರೂಪ ಸಿಕ್ಕಿದಂತೆ ನಮ್ಮ ಓದು, ವಿಮರ್ಶೆ, ವಿಶ್ಲೇಷಣೆ, ಬರವಣಿಗೆಯಂತಹ ಪೂರಕ ಚಟುವಟಿಕೆಗಳ ಗುಣಮಟ್ಟವು ಸುಧಾರಿಸುತ್ತದೆ. ಈ ಮಾದರಿಯಲ್ಲಿ, ತತ್ವಶಾಸ್ತ್ರದ ಮೂಲಕ ವಿಷಯವನ್ನು ಗ್ರಹಿಸಲು ಶಕ್ತನಾದ ವ್ಯಕ್ತಿ, ಸರಿಯಾದ ಪ್ರಶ್ನೆಗಳನ್ನು ಕೇಳಲು ಪರಿಣತಿ ಪಡೆಯುತ್ತಾನೆ. ಅಲ್ಲದೆ, ಉಳಿದವರ ಅಪಕ್ವ ಗ್ರಹಿಕೆಯನ್ನು ಕೂಡ ಸ್ಪಷ್ಟವಾಗಿ ಗುರುತಿಸಬಲ್ಲ. ಮಾತ್ರವಲ್ಲ, ಜಗತ್ತಿನಲ್ಲಿ ಪರಿಪೂರ್ಣ ಸತ್ಯ ಎಂಬುದಿಲ್ಲ, ಇರುವುದು ವಿಭಿನ್ನ ವ್ಯಾಖ್ಯಾನಗಳಷ್ಟೇ ಎನ್ನುವ ಅರಿವು ಅವನಲ್ಲಿ ಜಾಗೃತವಾಗಿ, ತಾನೊಂದು ‘ಕೇವಲ ಬಿಂದು’ ಎನ್ನುವ ಸಹಜ ವಿನಮ್ರತೆ ಒಡಮೂಡುತ್ತದೆ. ಈ ಪ್ರಜ್ಞೆ, ವ್ಯಕ್ತಿಯನ್ನು ಪ್ರಾಪಂಚಿಕ ಹೊಗಳಿಕೆಗೆ ಹಿಗ್ಗಿಸದೆ, ತೆಗಳಿಕೆಗೆ ಕುಗ್ಗಿಸದೆ ಸ್ಥಿತಪ್ರಜ್ಞ ಸ್ಥಿತಿ ಕಂಡುಕೊಳ್ಳಲು ಸಹಾಯ ಮಾಡುತ್ತದೆ.

ತತ್ವಜ್ಞಾನವನ್ನು ಅರಗಿಸಿಕೊಳ್ಳದವರು ತಮ್ಮ ಪ್ರಾಪಂಚಿಕ ವ್ಯವಹಾರಗಳಲ್ಲಿ ಜೀವನದ ಖುಷಿಯನ್ನು ಹುಡುಕಬಹುದು. ಆದರೆ, ತತ್ವಜ್ಞಾನವನ್ನು ಅಂತರ್ಗತ ಮಾಡಿಕೊಂಡವರು, ಆಂತರಿಕವಾಗಿ ದೃಢತೆ ಕಂಡುಕೊಂಡು ಜೀವನವನ್ನು ಅರ್ಥಪೂರ್ಣವಾಗಿ ನಡೆಸುವ ಹಾದಿಯಲ್ಲಿ ಮುನ್ನಡೆಯುತ್ತಾರೆ.

ಸಮಾಜದ ಗೊಡವೆ ನನಗೇಕೆ, ನಾನು ಮತ್ತು ನನ್ನ ಸಂಸಾರ ವ್ಯವಸ್ಥಿತವಾಗಿ ಬದುಕಿದರಷ್ಟೇ ಸಾಕು ಎನ್ನುವ ಪ್ರಸಕ್ತ ವಾತಾವರಣದಲ್ಲಿ ನಮಗೆ ಎದುರಾಗುವ ಮುಖ್ಯ ಪ್ರಶ್ನೆಯೆಂದರೆ, ಜಗತ್ತಿನ ಹಂಗಿಲ್ಲದೆ ನನ್ನದೇ ಆದ ಪ್ರಪಂಚ ಕಟ್ಟಿಕೊಳ್ಳಬಹುದೇ? ಇದಕ್ಕೆ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನ ಉತ್ತರವೆಂದರೆ, ‘ಯಾವುದೇ ವ್ಯಕ್ತಿ ಸಮಾಜದಲ್ಲಿ ತನಗೆ ಬದುಕಲು ಸಾಧ್ಯವಾಗುತ್ತಿಲ್ಲ ಅಥವಾ ತನಗೆ ಅದರ ಅಗತ್ಯವಿಲ್ಲ ಅಂದುಕೊಳ್ಳುವವನು ಒಂದೋ ಮೃಗವಾಗಿರುತ್ತಾನೆ ಅಥವಾ ದೇವರು ಆಗಿರುತ್ತಾನೆ’. ಅಂದರೆ, ಅವನು ಮನುಷ್ಯನಾಗಿರಲು ಸಾಧ್ಯವಿಲ್ಲ. ವ್ಯಕ್ತಿಗಳು ‘ಏಕಾಂತ ದ್ವೀಪ’ಗಳಾಗಿ ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಪರಸ್ಪರ ವಿಚಾರ ವಿನಿಮಯಕ್ಕೆ ಹಚ್ಚುವ ತತ್ವಶಾಸ್ತ್ರದ ಓದು ಬಹಳ ಅಗತ್ಯ ಎನ್ನಬಹುದು.

ಅದೇ ರೀತಿ, ಆಸ್ಟ್ರಿಯಾದ ತತ್ವಜ್ಞಾನಿ ಲುಡ್ವಿಗ್ ವಿಟ್ಗೆನ್‌ಸ್ಟೈನ್ ಹೇಳುವಂತೆ, ‘ತತ್ವಶಾಸ್ತ್ರವು ಭಾಷೆಯ ಮೂಲಕ ಹುಸಿ ಬುದ್ಧಿವಂತಿಕೆಯ ಪ್ರದರ್ಶನ ಮಾಡುವವರ ವಿರುದ್ಧದ ತಾರ್ಕಿಕ ಹೋರಾಟವಾಗಿದೆ’. ಯಾಕೆಂದರೆ, ತತ್ವಶಾಸ್ತ್ರವು ತರ್ಕಬದ್ಧವಲ್ಲದ ನುಡಿ ಸೊಗಸನ್ನು ತಿರಸ್ಕರಿಸುತ್ತದೆ. ಚೆನ್ನಾಗಿ ಮಾತು ಬಲ್ಲವರೆಲ್ಲಾ ತತ್ವಜ್ಞಾನಿಗಳಲ್ಲ. ಬದಲಾಗಿ ಪ್ರಶ್ನಿಸುವವರು. ಹಾಗಂತ, ಪ್ರಶ್ನಿಸುವವರೆಲ್ಲಾ ತತ್ವಜ್ಞಾನಿಗಳಲ್ಲ. ಬದಲಾಗಿ, ಸರಿಯಾದ ಪ್ರಶ್ನೆಗಳನ್ನು ಕೇಳುವವರು. ಅಂದರೆ, ಈ ಪ್ರಶ್ನೆಯ ಮೂಲವು ಜ್ಞಾನದ ಹುಡುಕಾಟ ಆಗಬೇಕೇ ವಿನಾ, ಅನ್ಯ ವ್ಯಕ್ತಿಗಳ ಮುಂದೆ ವಿದ್ವತ್ತಿನ ಹಿರಿಮೆಯ ಪ್ರದರ್ಶನವಲ್ಲ.



ಹಾಗಾಗಿ, ತತ್ವಶಾಸ್ತ್ರವನ್ನು ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರಾಥಮಿಕ ಹಂತದಲ್ಲಿಯೇ ಅಳವಡಿಸಿಕೊಳ್ಳುವ ಅಗತ್ಯವಿದೆ. ವರ್ತಮಾನ ಕಾಲದ ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅತಿಯಾದ ಒಂಟಿತನ, ಹುಸಿ ನಿರೀಕ್ಷೆಗಳು, ಸೋಲನ್ನು ಒಪ್ಪಿಕೊಳ್ಳಲಾಗದ ಮನಃಸ್ಥಿತಿಯಂತಹ ಸಮಸ್ಯೆಗಳಿಗೆ ತತ್ವಶಾಸ್ತ್ರದ ಓದುವಿಕೆಯು ಸಂಯಮದಿಂದ ಬದುಕುವ ಕಲೆಯನ್ನು ಕಲಿಸುತ್ತದೆ. ಜೊತೆಗೆ, ನಮ್ಮಲ್ಲಿ ಆಗಾಗ ಮೂಡುವ ಪರಕೀಯತೆಯನ್ನು ದೂರ ಮಾಡುತ್ತದೆ. ಆದರೆ, ಇಂದು ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ತತ್ವಶಾಸ್ತ್ರ ಬಹುತೇಕ ಮರೆಯಾಗಿ, ಅಲ್ಲಿ ವಿವಿಧ ಕೌಶಲ ತರಬೇತಿ ನೀಡುವ ಉದ್ಯೋಗ ಆಧಾರಿತ ಕೋರ್ಸ್‌ಗಳು ಸ್ಥಾನ ಪಡೆದಿವೆ. ಇವು ಉದ್ಯೋಗವನ್ನೇನೋ ದಯಪಾಲಿಸಬಹುದು, ಆದರೆ ಅರ್ಥಪೂರ್ಣವಾಗಿ ಜೀವನ ಕಟ್ಟಿಕೊಳ್ಳಲು ಸಹಾಯ ಮಾಡಲಾರವು.

ಬಹುಶಃ, ಪ್ರಸಕ್ತ ಸಮಾಜದಲ್ಲಿರುವ ವೈರುಧ್ಯಗಳ ಕುರಿತಾಗಿ ಆಗಾಗ ಹುಟ್ಟಿಕೊಳ್ಳುವ ಬಿಕ್ಕಟ್ಟುಗಳನ್ನು ತಾತ್ವಿಕ ಪ್ರಶ್ನೆಗಳ ಮೂಲಕ ತಾರ್ಕಿಕವಾಗಿ ವಿಮರ್ಶಿಸಿದರೆ, ಜಗತ್ತಿನಲ್ಲಿರುವ ಹಲವಾರು ತಡೆಗೋಡೆಗಳು ಉದುರಿಹೋದಾವು. ಆದರೆ, ಗ್ರಾಹಕ ಸಂಸ್ಕೃತಿಯ ಪ್ರಸಕ್ತ ಜಗತ್ತು ತತ್ವಶಾಸ್ತ್ರವನ್ನು ಪ್ರೋತ್ಸಾಹಿಸುವುದಿಲ್ಲ. ಯಾಕೆಂದರೆ, ತತ್ವಶಾಸ್ತ್ರ ಸರಳ ಜೀವನಮಾರ್ಗವನ್ನು ಕಲಿಸುತ್ತದೆ. ಹೀಗಾದಲ್ಲಿ, ಬೃಹತ್ ಪ್ರಮಾಣದಲ್ಲಿ ನಮಗಾಗಿ ಉತ್ಪಾದನೆಯಾಗುವ ವಸ್ತುಗಳನ್ನು ಕೊಂಡುಕೊಳ್ಳುವವರು ಯಾರು?

ವಾಚಕರ ವಾಣಿ

ಪುಸ್ತಕ ಖರೀದಿ: ಹಣ ಸಂದಾಯಕ್ಕೆ ತಡವೇಕೆ?

ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಏಕಗವಾಕ್ಷಿ ಯೋಜನೆಯಡಿ 2019ರಲ್ಲಿ ಪ್ರಕಟವಾದ ಆಯ್ದ ಪುಸ್ತಕಗಳ ಲೇಖಕರು ಹಾಗೂ ಪ್ರಕಾಶಕರಿಂದ ತಲಾ 300 ಪುಸ್ತಕಗಳನ್ನು ಇದೇ ಏಪ್ರಿಲ್ ತಿಂಗಳಿನಲ್ಲಿ ಖರೀದಿಸಿದೆ. ಆದರೆ, ಆ ಪುಸ್ತಕಗಳಿಗೆ ನಿಗದಿಯಾದ ಹಣವನ್ನು ಸಂಬಂಧಪಟ್ಟವರ ಬ್ಯಾಂಕ್ ಖಾತೆಗೆ ಇದುವರೆಗೂ ಜಮಾ ಮಾಡಿಲ್ಲ. ಅನೇಕ ಪುಸ್ತಕಗಳಿಗೆ ಆರ್ಥಿಕವಾಗಿ ಸುಸ್ಥಿತಿಯಲ್ಲಿರದ ಲೇಖಕರೇ ಪ್ರಕಾಶಕರಾಗಿದ್ದಾರೆ. ಸಾಲಸೋಲ ಮಾಡಿ ಪುಸ್ತಕಗಳನ್ನು ಪ್ರಕಟಿಸಿ ಮೂರು ವರ್ಷಗಳಿಂದಲೂ ಸರ್ಕಾರದ ನೆರವಿಗಾಗಿ ಕಾಯುತ್ತಿದ್ದಾರೆ. ಇಲಾಖೆ ಇನ್ನಾದರೂ ಈ ಬಗ್ಗೆ ಗಮನಹರಿಸಿ, ಬಾಕಿ ಹಣವನ್ನು ಕೂಡಲೇ ಸಂದಾಯ ಮಾಡಲಿ.

ಬಿ.ಎಸ್.ಮನೋಹರ್, ಬೆಂಗಳೂರು

ಚುನಾವಣಾ ಕಾರ್ಯ: ಇರಲಿ ಶಾಶ್ವತ ಸಿಬ್ಬಂದಿ

ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯಕ್ಕೆ ಶಾಲಾ ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರನ್ನು ಮತಗಟ್ಟೆ ಅಧಿಕಾರಿಗಳೆಂದು ನೇಮಿಸಲಾಗಿದೆ. ಇವರು ವರ್ಷಪೂರ್ತಿ ಚುನಾವಣಾ ಕಾರ್ಯಕ್ಕಾಗಿ ನಿಗದಿತ ಪಾಠ- ಪ್ರವಚನ ಕಾರ್ಯವನ್ನು ಬಿಟ್ಟು ಅಲೆಯುವಂತಾಗಿದೆ. ಇದರಿಂದ ಮಕ್ಕಳ ಶೈಕ್ಷಣಿಕ ಹಾಗೂ ವ್ಯಕ್ತಿತ್ವದ ಬೆಳವಣಿಗೆ ಕುಂಠಿತವಾಗುತ್ತದೆ. ಇನ್ನು ಮೇಲ್ವಿಚಾರಕರನ್ನಾಗಿ ನಗರ ಸ್ಥಳೀಯ ಸಂಸ್ಥೆ ಹಾಗೂ ಕಂದಾಯ ಇಲಾಖೆಯ ನೌಕರರನ್ನು ನೇಮಿಸಲಾಗಿದೆ. ಸಾರ್ವಜನಿಕ ಸೇವೆಗಳು ಇವುಗಳ ವ್ಯಾಪ್ತಿಗೆ ಹೆಚ್ಚಾಗಿ ಒಳಪಡುತ್ತವೆ. ಇಲ್ಲಿಯ ಸಿಬ್ಬಂದಿಗೆ ಕಾರ್ಯದ ಒತ್ತಡ ಹೆಚ್ಚಾಗಿರುತ್ತದೆ.

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಚುನಾವಣಾ ಆಯೋಗದ ಅಭಿಲಾಷೆ ಮುಖ್ಯವಾದುದು. ಇದಕ್ಕೆ ಆಯೋಗವು ಶಾಶ್ವತವಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲಿ. ಇದರಿಂದ ನಿರುದ್ಯೋಗದ ಸಮಸ್ಯೆಗೂ ಪರಿಹಾರ ಸಿಗುತ್ತದೆ, ಅಸಲಿ ಮತದಾರರ ಪಟ್ಟಿಯೂ ದೊರೆಯುತ್ತದೆ.

ಶೋಭಾ ಎಸ್.ವಿ., ಚಿತ್ರದುರ್ಗ

ಪುಸ್ತಕಗಳೇ ಇಲ್ಲದ ಮೇಲೆ...

ಗ್ರಾಮ ಪಂಚಾಯಿತಿಯ ಹೆಚ್ಚಿನ ಗ್ರಂಥಾಲಯಗಳು ಹೆಸರಿಗೆ ಮಾತ್ರ ಕಾರ್ಯನಿರ್ವಹಿಸುತ್ತಿವೆ. ಸರಿಯಾಗಿ ದಿನ ಪತ್ರಿಕೆಗಳು ಬಾರದ, ಸಣ್ಣ ಸಣ್ಣ ಪುಸ್ತಕಗಳು ಸಹ ಇಲ್ಲದ ಪರಿಸ್ಥಿತಿ ಇದ್ದು, ಕೆಲವೆಡೆ ನಾಮಫಲಕಗಳು ಮಾತ್ರ ಕಾಣಸಿಗುತ್ತವೆ. ಇಂತಹ ಸ್ಥಿತಿಗೆ ನಮ್ಮ ತುಮಕೂರು ಜಿಲ್ಲೆಯ ಎಷ್ಟೋ ಗ್ರಾಮೀಣ ಗ್ರಂಥಾಲಯಗಳು ಸಹ ಹೊರತಾಗಿಲ್ಲ.

ಹೀಗೆ ಆಫ್‌ಲೈನ್ ಪುಸ್ತಕಗಳೇ ಲಭ್ಯವಿಲ್ಲದ ಪರಿಸ್ಥಿತಿ ಇರುವಾಗ, ಗ್ರಂಥಾಲಯಗಳಿಗೆ ಆನ್‌ಲೈನ್ ಸೌಲಭ್ಯ ಎಲ್ಲಿಂದ ಬರಬೇಕೆಂಬ ಪ್ರಶ್ನೆ, ಇಂತಹದ್ದೊಂದು ಆಗ್ರಹ ಮಾಡಿರುವ ಬರಹವನ್ನು ಓದಿದಾಗ (ಸಂಗತ, ನ. 16) ಮೂಡುತ್ತದೆ.

ಮಂಜುನಾಥ್, ತುಮಕೂರು

ಕೆಪಿಎಸ್‌ಸಿ: ಹಳೆ ಮದ್ಯ ಹೊಸ ಬಾಟಲಿ?

ಭ್ರಷ್ಟಾಚಾರದಿಂದ ಅಪಖ್ಯಾತಿಗೆ ಒಳಗಾಗಿರುವ ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ತನ್ನ ಇತ್ತೀಚಿನ ಕೆಲವು ಬದಲಾವಣೆಗಳಿಂದ ತುಸು ಸುಧಾರಣೆ ಕಾಣುವ ಭರವಸೆ ಮೂಡಿಸಿತ್ತು. ಆದರೆ ‘ಹಳೆ ಮದ್ಯ ಹೊಸ ಬಾಟಲಿ’ ಎಂಬಂತೆ ತನ್ನ ಮೂಲ ರೂಪವನ್ನು ಅದು ಬದಲಾಯಿಸಿಯೇ ಇಲ್ಲ ಅನಿಸುತ್ತದೆ. ಮುಂದಿನ ದಿನಗಳಲ್ಲಿ ಮತ್ತು ಹಾಲಿ ನಡೆದಿರುವ ಪರೀಕ್ಷೆಗಳಿಗೆ ಕಟ್ಟುನಿಟ್ಟಾದ ನಿಯಮ ಜಾರಿಗೊಳಿಸಿ ಚುರುಕು ಮುಟ್ಟಿಸುವುದಾಗಿ ಆಯೋಗವು ಮಾಧ್ಯಮಗಳ ಮೂಲಕ ಆಶ್ವಾಸನೆ ನೀಡಿತ್ತು. ಈ ಸಂಬಂಧ ತಾತ್ಕಾಲಿಕ ವೇಳಾಪಟ್ಟಿಯನ್ನು ಸಹ ಪ್ರಕಟಿಸಿತು. ಆದರೆ ಈ ವೇಳಾಪಟ್ಟಿಯು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಆಗಿ, ಯಾವುದೇ ಗಮನಾರ್ಹ ಬೆಳವಣಿಗೆ ಆಗದೇ ಇರುವುದು ದುರದೃಷ್ಟಕರ.

ಎಸ್‌ಡಿಎ ಹುದ್ದೆಗಳ ನೇಮಕಾತಿಗೆ ಪರೀಕ್ಷೆ ನಡೆದು ವರ್ಷಗಳೇ ಕಳೆದಿವೆ. ಈ ಸಂಬಂಧ ಆಯೋಗವೇ ಬಿಡುಗಡೆಗೊಳಿಸಿದ ವೇಳಾಪಟ್ಟಿಯಂತೆ ಈಗ ಆಯ್ಕೆಪಟ್ಟಿ ಪ್ರಕಟವಾಗಬೇಕಿತ್ತು. ಈ ಕಡತವನ್ನು ಇನ್ನೂ ತನ್ನ ಆಂತರಿಕ ಸಮಿತಿಯ ಮುಂದೆ ಮಂಡಿಸಿಯೇ ಇಲ್ಲ ಎಂದು ಆಯೋಗ ಸಮಾಜಾಯಿಷಿ ನೀಡುತ್ತಿದೆ. ಈ ಕಡತವನ್ನು ಅದು ಇನ್ನೂ ಎಷ್ಟು ವರ್ಷಗಳ ಕಾಲ ತನ್ನ ಬಳಿಯೇ ಇಟ್ಟುಕೊಳ್ಳಲು ಬಯಸುತ್ತದೆ? ವಯೋಮಿತಿ ಮೀರುತ್ತಿರುವ ನಿರುದ್ಯೋಗಿಗಳ ವೇದನೆ ಆಯೋಗಕ್ಕೆ ಅರ್ಥವಾಗುತ್ತಿಲ್ಲ. ಇಂತಹ ವಿಳಂಬ ನೀತಿಯೂ ಭ್ರಷ್ಟಾಚಾರವೇ ಅಲ್ಲವೆ?

ಸುಜ್ಜಲೂರು ವಿಜಿ, ವಾಟಾಳು, ಟಿ. ನರಸೀಪುರ

ಒಳ್ಳೆಯ ನಾಟಕ ಬರೆದು, ಆಡುವ ಸ್ವಾತಂತ್ರ್ಯವಿದೆ

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರ ‘ಟಿಪ್ಪು ನಿಜಕನಸುಗಳು’ ನಾಟಕ ಪ್ರದರ್ಶನದ ವಿರುದ್ಧ ಪ್ರತಿಭಟನೆಯ ಎಚ್ಚರಿಕೆ, ಅದರ ಪ್ರದರ್ಶನಕ್ಕೆ ತಡೆಯಾಜ್ಞೆ ತರಲು ಮನವಿ ಸಲ್ಲಿಕೆ, ಅದರ ನಿಷೇಧಕ್ಕಾಗಿ ಆಗ್ರಹ, ಅದರ ವಿರುದ್ಧ ಮೊಕದ್ದಮೆ ಹೂಡುತ್ತೇವೆ ಎನ್ನುವ ಹೇಳಿಕೆ– ಬೇರೆಬೇರೆ ಸಂಘಟನೆ ಮತ್ತು ರಾಜಕೀಯ ವ್ಯಕ್ತಿಗಳಿಂದ ಇಂಥ ಪ್ರತಿಕ್ರಿಯೆಗಳು ಬರುತ್ತಿವೆ. ಅವೆಲ್ಲವೂ ಅಸಮಂಜಸ.

ಬಿಜೆಪಿ ಮತ್ತು ಸಂಘ ಪರಿವಾರದವರು ಸಾಹಿತಿ- ಕಲಾವಿದರು, ಪತ್ರಕರ್ತರು ಮತ್ತು ರಾಜಕೀಯ ಆ್ಯಕ್ಟಿವಿಸ್ಟರ ಮೇಲೆ ಹಲಬಗೆ, ಹಲವು ಮಜಲಿನ ಫ್ಯಾಸಿಸ್ಟ್ ದಾಳಿಗಳನ್ನು ನಡೆಸುತ್ತ ಬಂದಿದ್ದಾರೆ. ಸುಖಾಸುಮ್ಮನೆ ಮೊಕದ್ದಮೆ ಹೂಡುವುದು, ಬೇರೆ ಬೇರೆ ರಾಜ್ಯಗಳ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸುವುದು– ಇಂಥವೆಲ್ಲ ಅವರ ವರಸೆ. ಅವರ ಫ್ಯಾಸಿಸ್ಟ್ ತತ್ವ ಮತ್ತು ಕಾರ್ಯಗಳನ್ನು ವಿರೋಧಿಸುವವರು ಈಗ ಆ ಅದೇ ವರಸೆಗಳನ್ನು ಅನುಸರಿಸುವುದು ತರವಲ್ಲ. ಕಾರ್ಯಪ್ಪನವರ ಆ ತಥಾಕಥಿತ ಕಲಾಕೃತಿಯ ಪ್ರದರ್ಶನ ಯಥೇಚ್ಛ ನಡೆಯಲಿ. ಅದು ತುಚ್ಛವಾದದ್ದಾದರೆ ಹಾಗೆಂದು ಹೇಳುವ ಸ್ವಾತಂತ್ರ್ಯವೂ ಅದಕ್ಕಿಂತ ಒಳ್ಳೆಯ ನಾಟಕ (ಅಲ್ಲ, ಅಸಲಿ ನಾಟಕ) ಬರೆದು, ಆಡುವ ಸ್ವಾತಂತ್ರ್ಯವೂ ನಮಗಿದೆ. ಆ ಸ್ವಾತಂತ್ರ್ಯಕ್ಕೆ ಅವರೇನು ಕಡಿವಾಣ ಹಾಕುತ್ತಾರೋ ನೋಡಿಬಿಡುವ. ಈ ಸದ್ಯ ಅದೇನು ನಾಟಕವೋ ಅವರದ್ದು, ಆಗಲಿ. ಖುದಾ, ಸರಸ್ವತೀ, ಗಣಪತಿ, ಶಿವ- ನಟರಾಜ ಸಬ್ ಗವಾಹ್ ಹೈ.

ರಘುನಂದನ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಬೆಂಗಳೂರು ಟೆಕ್ ಸಮ್ಮಿಟ್ ಪ್ರದರ್ಶನದಲ್ಲಿ ಸಚಿವ ಡಾ.ಸಿ.ಎನ್‌ ಅಶ್ವತ್ಥನಾರಾಯಣ ಅವರು 'ಸೈಬರ್‌ಸೆಕ್ಯೂರಿಟಿ' ಕುರಿತ ನವೋದ್ಯಮದ ವಿವರ ಪಡೆದರು. ಐಟಿ–ಬಿಟಿ ಇಲಾಖೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ನಿರ್ದೇಶಕಿ ಮೀನಾ ನಾಗರಾಜ್ ಇದ್ದರು

20 ನೂತನ ನವೋದ್ಯಮ ಉತ್ಪನ್ನಗಳ ಬಿಡುಗಡೆ

ಬೆಂಗಳೂರು: 'ಬೆಂಗಳೂರು ಟೆಕ್ ಸಮ್ಮಿಟ್' ಸಮಾವೇಶದ ಎರಡನೆಯ ದಿನವಾದ ಗುರುವಾರ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರು ಅಗ್ರಿಟೆಕ್, ಮೆಡ್‌ಟೆಕ್, ಎಜ್ಯುಟೆಕ್ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿವಿಧ ನವೋದ್ಯಮಗಳು ಅಭಿವೃದ್ಧಿಪಡಿಸಿರುವ 20 ನೂತನ ಉತ್ಪನ್ನಗಳನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, '2025ರ ಒಳಗೆ ಬೆಂಗಳೂರಿನಲ್ಲಿ 20 ಸಾವಿರ ನವೋದ್ಯಮಗಳನ್ನು ಹೊಂದುವ ಗುರಿ ಇರಿಸಿಕೊಳ್ಳಲಾಗಿತ್ತು. ಆದರೆ, ಈಗಾಗಲೇ ನಮ್ಮಲ್ಲಿ 22 ಸಾವಿರಕ್ಕೂ ಹೆಚ್ಚು ನವೋದ್ಯಮಗಳಿವೆ. ಬೆಂಗಳೂರಿನಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರವೇ ಇದಕ್ಕೆ ಕಾರಣವಾಗಿದೆ. ವೆಂಚರ್ ಕ್ಯಾಪಿಟಲ್ ಕ್ಷೇತ್ರದಲ್ಲಿ ನಮ್ಮ ನಗರವು ಇಡೀ ಜಗತ್ತಿನಲ್ಲೇ 5ನೇ ಸ್ಥಾನದಲ್ಲಿದೆ' ಎಂದರು.

'ನೂತನ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿರುವ ನವೋದ್ಯಮಗಳಲ್ಲಿ ಹೆಚ್ಚಿನವು ಸರ್ಕಾರದ ವಿವಿಧ ಇನ್‌ಕ್ಯುಬೇಷನ್ ಕೇಂದ್ರಗಳ ಮಾರ್ಗದರ್ಶನ ಮತ್ತು ನೆರವು ಪಡೆದುಕೊಂಡಿವೆ. ಈ ನಿಟ್ಟಿನಲ್ಲಿ ನಮ್ಮ ಕೆ-ಟೆಕ್ ನಾವೀನ್ಯತಾ ಹಬ್‌ಗಳು, ಉತ್ಕೃಷ್ಟತಾ ಕೇಂದ್ರಗಳು, ಟೆಕ್ನಾಲಜಿ ಬಿಜಿನೆಸ್ ಪರಿಪೋಷಣಾ ಕೇಂದ್ರಗಳು, ಸಿ-ಕ್ಯಾಂಪ್, ಭಾರತೀಯ ವಿಜ್ಞಾನ ಸಂಸ್ಥೆ, ನಾಸ್ಕಾಂ ಮತ್ತು ಐಎಎಂಎಐ ರೀತಿಯ ಸಂಸ್ಥೆಗಳು ಮಹತ್ವದ ಪಾತ್ರ ವಹಿಸಿರುವುದು ಶ್ಲಾಘನೀಯ' ಎಂದು ಬಣ್ಣಿಸಿದರು.

'ಈ ನೂತನ ಉತ್ಪನ್ನಗಳನ್ನು ಸಿದ್ಧಪಡಿಸಿರುವ 20 ನವೋದ್ಯಮಗಳಲ್ಲಿ ಮೂರು ಕಂಪನಿಗಳನ್ನು ಮಹಿಳೆಯರೇ ಮುನ್ನಡೆಸುತ್ತಿರುವುದು ಶ್ಲಾಘನೀಯ ಸಂಗತಿಯಾಗಿದೆ' ಎಂದು ಅವರು ಹೇಳಿದರು.

'ಬಿಡುಗಡೆಯಾಗಿರುವ ಉತ್ಪನ್ನಗಳಲ್ಲಿ ಕ್ಲೀನ್‌ಟೆಕ್, ಕೃತಕ ಬುದ್ಧಿಮತ್ತೆ, ಐಓಟಿ, ಬ್ಲಾಕ್‌ಚೈನ್, ಸೈಬರ್ ಸೆಕ್ಯುರಿಟಿ, ವಿದ್ಯುತ್ ಚಾಲಿತ ವಾಹನ ಮತ್ತು ಇಎಸ್‌ಡಿಎಂ ವಲಯಗಳಿಗೆ ಸೇರಿದ ಉತ್ಪನ್ನಗಳಿವೆ' ಎಂದರು.

ಯಶಸ್ಸಿನ ಹಾದಿ ತೆರೆದಿಟ್ಟ ಸಾಧಕಿಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹನಾಶೀಲತೆ, ಬದ್ಧತೆ, ಸಮನ್ವಯತೆ ಮಹಿಳಾ ಉದ್ಯಮಿಗಳ ಯಶಸ್ಸಿನ ಗುಟ್ಟು ಎಂದು ಇನ್‌ಮೊಬಿ ಸಂಸ್ಥೆಯ ನೀತಿನಿರೂಪಣಾಧಿಕಾರಿ ಸುಬಿ ಚತುರ್ವೇದಿ ಹೇಳಿದರು.

ಬೆಂಗಳೂರು ಟೆಕ್ ಸಮ್ಮಿಟ್‌ನ 'ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು ಮತ್ತು ಜಗತ್ತನ್ನು ಬದಲಿಸುತ್ತಿರುವ ನಾಯಕಿಯರು' ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಉದ್ಯಮ ಕ್ಷೇತ್ರದಲ್ಲಿ ಮಹಿಳೆ ಯಶಸ್ಸು ಕಾಣಲು ಹಲವು ಅಂಶಗಳು ಕಾರಣವಾಗಿರುತ್ತವೆ. ಹಿಂದೆ ಮಹಿಳಾ ಸಾಕ್ಷರತೆ ಕಡಿಮೆ ಇತ್ತು. ಮಹಿಳೆಯರು ಅಡುಗೆ ಮನೆಗಷ್ಟೇ ಸೀಮಿತವಾಗಿದ್ದರು. ಇಂದು ಮಹಿಳಾ ಸಾಕ್ಷರತೆಯೂ ಹೆಚ್ಚಿದೆ. ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಪ್ರವೇಶ ಮಾಡಿದ್ದಾರೆ. ಉದ್ಯಮ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲೂ ಸಾಕಷ್ಟು ಸಾಧನೆ ತೋರುತ್ತಿದ್ದಾರೆ ಎಂದು ವಿಶ್ಲೇಷಿಸಿದರು.

ಮಹಿಳೆ ಅಥವಾ ಪುರುಷರು ಉದ್ಯಮ, ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ಕೌಶಲ ಅತಿಮುಖ್ಯ. ನಿರಂತರ ಬದಲಾವಣೆಗೆ ಒಳಪಡುವ ಇಂತಹ ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆಗಳನ್ನು ಕಾಣುತ್ತಿದ್ದೇವೆ. ಆ್ಯಪ್‌ಗಳಲ್ಲೇ ಲಕ್ಷಾಂತರ ಕೋಟಿ ರೂಪಾಯಿ ವಹಿವಾಟು ನಡೆಯುತ್ತಿದೆ. ಇಂತಹ ಯಶಸ್ಸಿನಲ್ಲಿ ಮಹಿಳೆಯರ ಪಾಲು ದೊಡ್ಡದಿದೆ ಎಂದರು.

ತಮ್ಮ ಯಶಸ್ಸಿನ ಪಯಣದ ಅನುಭವಗಳನ್ನು ಹಂಚಿಕೊಂಡ ಉದ್ಯಮಿಗಳಾದ ಮೈಥಿಲಿ ರಮೇಶ್, ಗೀತಾ ರಾಮಮೂರ್ತಿ, ಶ್ರೀವಿದ್ಯಾ ಶ್ರೀನಿವಾಸನ್, ಮಹಿಳೆಯರು ತ್ವರಿತ ನಿರ್ಧಾರ ತೆಗೆದುಕೊಳ್ಳುವಲ್ಲಿ ಸದಾ ಮುಂದಿರುತ್ತಾರೆ. ಯಶಸ್ಸಿಗೆ ಪುರುಷರು ಹಾಗೂ ಕುಟುಂಬದ ಸದಸ್ಯರ ಸಹಕಾರವೂ ಮುಖ್ಯ ಎಂದರು. ಹಿರಿಯ ವಾರ್ತಾ ವಾಚಕಿ ಬೆವರ್ಲಿ ವೈಟ್ ಉಪಸ್ಥಿತರಿದ್ದರು.



ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಸುಬಿ ಚತುರ್ವೇದಿ, ಬೆವರ್ಲಿ ವೈಟ್, ಶ್ರೀವಿದ್ಯಾ ಶ್ರೀನಿವಾಸನ್, ಮೈಥಿಲಿ ರಮೇಶ್, ಗೀತಾ ರಾಮಮೂರ್ತಿ ಮಹಿಳಾ ಸಂವಾದದಲ್ಲಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರಗಳು

> **ಇಂದು ಹೆಚ್ಚಿನ ಯುವತಿಯರು ಸಾಧನೆಗಾಗಿ ಮದುವೆಯನ್ನೇ ಮುಂದೂಡುತ್ತಿದ್ದಾರೆ. ನಾನು 24ನೇ ವಯಸ್ಸಿಗೆ ಮದುವೆಯಾದೆ. ಕುಟುಂಬದ ಸಹಕಾರದಿಂದಲೇ ಯಶಸ್ಸು ಕಂಡೆ**
> **ಮೈಥಿಲಿ ರಮೇಶ್,** ಸಹ ಸಂಸ್ಥಾಪಕಿ, ನೆಕ್ಸ್ಟ್‌ವೆಲ್ತ್ ಎಂಟರ್‌ಪ್ರೈಸಸ್

> **ಯುವಪೀಳಿಗೆ ಉದ್ಯೋಗಕ್ಕಾಗಿ ಕಾಯದೇ ಸ್ವಯಂ ಉದ್ಯೋಗದತ್ತ ಗಮನಹರಿಸಬೇಕು. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಶ್ರಮಿಸಬೇಕು**
> **ಶ್ರೀವಿದ್ಯಾ ಶ್ರೀನಿವಾಸನ್**
> ಸಹ ಸಂಸ್ಥಾಪಕಿ, ಅಮಾಗಿ ಟೆಕ್ನಾಲಜೀಸ್



25ನೇ ಬೆಂಗಳೂರು ಟೆಕ್ ಸಮ್ಮಿಟ್ ಪ್ರದರ್ಶನ ಮಳಿಗೆಯೊಂದರಲ್ಲಿ ಇಡಲಾಗಿದ್ದ ವಿಶೇಷ ಎಲೆಕ್ಟ್ರಿಕ್ ಸ್ಕೂಟರ್ ಜನರನ್ನು ಆಕರ್ಷಿಸಿತು

ಇಸ್ರೊ ಜತೆ 100ಕ್ಕೂ ಹೆಚ್ಚು ನವೋದ್ಯಮ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಣ್ಣ ರಾಕೆಟ್‌ಗಳ ಉಡಾವಣೆಗೆ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿ, ಇಸ್ರೊ ಈ ನಿಟ್ಟಿನಲ್ಲಿ ಆದ್ಯತೆ ಮೇರೆಗೆ ಕಾರ್ಯನಿರ್ವಹಿಸುತ್ತಿದೆ' ಎಂದು ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ ಗುರುವಾರ 'ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯು ವಿಶ್ವದ ಮೇಲೆ ಆಗಲಿರುವ ಪರಿಣಾಮ' ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಹ್ಯಾಕಾಶ ಕ್ಷೇತ್ರದಲ್ಲಿ ನವೋದ್ಯಮಗಳಿಗೆ ಇರುವ ಅವಕಾಶಗಳು ಮತ್ತು ತಂತ್ರಜ್ಞಾನದ ಅಭಿವೃದ್ಧಿ ಕುರಿತು ವಿವರಿಸಿದರು.

'ಬಾಹ್ಯಾಕಾಶ ವಲಯಕ್ಕೆ ಸಂಬಂಧಿಸಿದಂತೆ 100ಕ್ಕೂ ಹೆಚ್ಚು ನವೋದ್ಯಮಗಳು ಇಸ್ರೊದಲ್ಲಿ ನೋಂದಣಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ತಂತ್ರಜ್ಞಾನ ಅಭಿವೃದ್ಧಿಪಡಿಸಲು ವಿಪುಲ ಅವಕಾಶಗಳಿವೆ. ಹಲವು ಕಂಪನಿಗಳು ಈ ಅವಕಾಶವನ್ನು ಉತ್ತಮವಾಗಿ ಬಳಸಿಕೊಳ್ಳುತ್ತಿವೆ. ಇಸ್ರೊ ಸಹ ಈ ಕಾರ್ಯಕ್ಕೆ ಉತ್ತೇಜನ ನೀಡುತ್ತಿದೆ. ಉಪಗ್ರಹ ಮತ್ತು ರಾಕೆಟ್‌ಗಳ ನಿರ್ಮಾಣದಲ್ಲಿ 10 ನವೋದ್ಯಮಗಳು ಈಗಾಗಲೇ ತೊಡಗಿಸಿಕೊಂಡಿವೆ' ಎಂದು ತಿಳಿಸಿದರು.

'ಬಾಹ್ಯಾಕಾಶದಲ್ಲಿ ರೋಬೊ ತಂತ್ರಜ್ಞಾನ ಈಗ ಪ್ರಮುಖ ಪಾತ್ರವಹಿಸುತ್ತಿದೆ. ಬಾಹ್ಯಾಕಾಶದಲ್ಲಿನ ಅವಶೇಷಗಳನ್ನು ತೆರವುಗೊಳಿಸುವಲ್ಲಿ ರೋಬೊಗಳು ಪ್ರಮುಖ ಪಾತ್ರವಹಿಸುತ್ತಿವೆ. ಅವಶೇಷಗಳು ಉಪಗ್ರಹಗಳ ಕಾರ್ಯನಿರ್ವಹಣೆಗೆ ತೊಡಕಾಗುತ್ತಿರುವುದರಿಂದ ಇವುಗಳನ್ನು ತೆರವುಗೊಳಿಸುವ ಅಗತ್ಯ ಇದೆ' ಎಂದು ವಿವರಿಸಿದರು.

'ಸಂಸ್ಥೆಯ ಮಹತ್ವಾಕಾಂಕ್ಷಿ ಯೋಜನೆಯಾದ ಚಂದ್ರಯಾನ-3 ಇನ್ನು ಕೆಲವೇ ತಿಂಗಳಲ್ಲಿ ಕಕ್ಷೆಯನ್ನು ಸೇರಲಿದೆ. ಈ ನಿಟ್ಟಿನಲ್ಲಿ ಇಸ್ರೊ, ಅಮೆರಿಕದ ನಾಸಾ ಜತೆಯೂ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಯ ರಾಕೆಟ್‌ನಲ್ಲಿ ಬಳಸುವ ಕಂಪ್ಯೂಟರ್ ಅನ್ನು ಭಾರತದಲ್ಲೇ ತಯಾರಿಸಲಾಗಿದೆ. ಉಪಗ್ರಹಗಳನ್ನು ಸುರಕ್ಷಿತವಾಗಿ ವಾಪಸ್ ಕರೆತರುವ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ ಬಗ್ಗೆಯೂ ಇಸ್ರೊ ಕಾರ್ಯನಿರ್ವಹಿಸುತ್ತಿದೆ' ಎಂದು ವಿವರಿಸಿದರು.

'ಜಗತ್ತಿನ ಎಲ್ಲೆಡೆ ಈಗ ಬಾಹ್ಯಾಕಾಶ ಪ್ರವಾಸೋದ್ಯಮ ಜನಪ್ರಿಯವಾಗುತ್ತಿದೆ. ಈ ಅವಕಾಶವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಚಿಂತನೆಗಳು ನಡೆಯಬೇಕು. ದೇಶದಲ್ಲಿ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಸೇರಿದಂತೆ ಹಲವು ಯೋಜನೆಗಳಲ್ಲಿಯೂ ಇಸ್ರೊ ಬಹು ಮುಖ್ಯ ಪಾತ್ರ ವಹಿಸುತ್ತಿದೆ' ಎಂದು ತಿಳಿಸಿದರು.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಜಿಲ್ಲಾ ಕಾಂಗ್ರೆಸ್ ಘಟಕವು ಎರಡು ಗುಂಪಾಗಿರುವ ಕೋಲಾರ, ಸಿದ್ದರಾಮಯ್ಯ ಅವರಿಗೆ ಸುರಕ್ಷಿತ ಕ್ಷೇತ್ರ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 278

ಶಿವ-ಪಾರ್ವತಿ ಕಲ್ಯಾಣ ಪೂರ್ಣ

ಗಿರಿಜಾಶಿವರಿಗೆ ಕನಕಪುಷ್ಪದ ಅಭಿಷೇಕವು ನಡೆಯಿತು. ಪುರೋಹಿತರು ಶಿವದಂಪತಿಗೆ ಧ್ರುವ ಮಂಡಲದ ದರ್ಶನವನ್ನು ಮಾಡಿಸಿದರು. ನಂತರ ಪಾರ್ವತೀಪರಮೇಶ್ವರ ದಂಪತಿ ಪರಸ್ಪರ ಹೃದಯಗಳನ್ನು ಸ್ಪರ್ಶಿಸುವ ಹೃದಯಾಲಂಭನವೆಂಬ ಕರ್ಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಮುನಿಗಳು ಸ್ವಸ್ತಿಮಂತ್ರಗಳನ್ನು ಪಠಿಸುವಾಗ ಪುರೋಹಿತರ ಆಣತಿಯಂತೆ ಶಿವನು ಗಿರಿಜೆಯ ಹಣೆಯಲ್ಲಿ ಕುಂಕುಮವನ್ನಿಟ್ಟ. ಬ್ರಹ್ಮನ ಅಪ್ಪಣೆಯಂತೆ, ನೂತನ ದಂಪತಿ ಹರ್ಷದಿಂದ ಹರಿಭೂಮದೂಟ ಮಾಡಿದರು. ವಿವಾಹಕಾರ್ಯದ ನೇತೃತ್ವವಹಿಸಿದ್ದ ಬ್ರಹ್ಮನಿಗೆ ಬ್ರಹ್ಮತ್ವದ ದಕ್ಷಿಣೆಗಾಗಿ ಪೂರ್ಣಪಾತ್ರವನ್ನು ಬಹುಮಾನವಾಗಿ ಕೊಟ್ಟ. ಗರ್ಗಮುನಿಗೆ ಗೋದಾನವನ್ನು ವಿಧಿವತ್ತಾಗಿ ಕೊಟ್ಟ. ಇದರ ಜೊತೆಗೆ ಮಂಗಳಕರವಾದಂತಹ ಅನೇಕ ಮಹಾದಾನಗಳನ್ನು ಸಹ ಅವನಿಗೆ ನೀಡಿದ. ವಿವಾಹಕಾರ್ಯದಲ್ಲಿ ಭಾಗಿಯಾದ ಪ್ರತಿಯೊಬ್ಬ ಪುರೋಹಿತರಿಗೂ ತಲಾ ನೂರು ಚಿನ್ನದ ನಾಣ್ಯಗಳನ್ನು ದಾನಮಾಡಿದ.

ಶಿವ-ಪಾರ್ವತಿಯ ವಿವಾಹವನ್ನು ಕಣ್ತುಂಬಿಕೊಂಡ ದೇವತೆಗಳು ಮತ್ತಿತರರೆಲ್ಲ ತುಂಬಾ ಹರ್ಷದಿಂದ ಜಯಘೋಷಮಾಡಿದರು. ಗಾಯಕರು ಮಂಗಳವನ್ನು ಹಾಡಿದರೆ, ಸಂಗೀತಗಾರರು ಆನಂದಕರವಾದಂತಹ ಅನೇಕ ವಾದ್ಯಗಳನ್ನು ನುಡಿಸಿದರು. ವಿವಾಹ ಕಾರ್ಯ ಯಶಸ್ವಿಯಾಗಿ ನಡೆದ ನಂತರ ಬ್ರಹ್ಮ, ವಿಷ್ಣು, ದೇವತೆಗಳು, ಮುನಿಗಳು ಹಿಮವಂತನ ಅನುಮತಿಯನ್ನು ಪಡೆದು ಸಂತೋಷದಿಂದ ತಮ್ಮ ಮನೆಗಳಿಗೆ ತೆರಳಿದರು.

ನಂತರ ಹಿಮವಂತನ ಪಟ್ಟಣದ ಸುಮಂಗಲೆಯರು ಸಂತೋಷದಿಂದ ಗಿರಿಜಾಶಿವರನ್ನು ಅಂತರ್ಗೃಹಕ್ಕೆ ಕರೆತಂದರು. ಅಲ್ಲಿ ಗಿರಿಜಾಶಂಕರರಿಗೆ ಸ್ತ್ರೀಯರು ಲೋಕಾಚಾರದಂತೆ ಅನೇಕ ಶಾಸ್ತ್ರ ಮಾಡಿದರು. ಜನಗಳಿಗೆ ಕ್ಷೇಮವನ್ನುಂಟುಮಾಡುವಂತಹ ಆ ದೇವದಂಪತಿಗಳು ಪುರದ ಸುಮಂಗಲೆಯರು ಹೇಳಿದಂತೆಯೇ ಲೋಕಾಚಾರದ ಶಾಸ್ತ್ರಗಳನ್ನು ಶ್ರದ್ಧೆಯಿಂದ ಮಾಡಿದರು.

ಶಿವಪಾರ್ವತಿಯನ್ನು ವಾಸಗೃಹಕ್ಕೆ ಕಳುಹಿಸುವಾಗ ಪುರದ ಸ್ತ್ರೀಯರು ವಿವಾಹಸಂದರ್ಭದಲ್ಲಿ ಶಿವನ ಶಲ್ಯಕ್ಕೆ ಪಾರ್ವತಿಯ ಸೀರೆ ಸೆರಗು ಕಟ್ಟಿದ್ದ ಗಂಟನ್ನು ಬಿಚ್ಚಿದರು. ಅಲ್ಲಿಗೆ ವಿವಾಹದ ಅಂತಿಮ ಕಾರ್ಯಗಳೆಲ್ಲಾ ಪರಿಸಮಾಪ್ತಿಯಾದಂತಾಯಿತು. ನೂತನ ದಂಪತಿಗೆ ಶುಭವಾಗಲಿ ಎಂದು ಹರಸಿದ ಸುಮಂಗಲೆಯರು ಮಂದಹಾಸವನ್ನು ಬೀರುತ್ತಾ ಸಂಭ್ರಮ ದಿಂದ ಹೊರನಡೆದರು. ಈ ಸಂದರ್ಭದಲ್ಲಿ ಆರತಿಶಾಸ್ತ್ರ ಮಾಡಿದ ಸುಮಂಗಲೆಯರಿಗೆಲ್ಲಾ ಶಿವನು ಸಂಪ್ರದಾಯದಂತೆ ಚಿನ್ನದ ವರಹಗಳ ಕಾಣಿಕೆ ನೀಡಿದ.

ಹೀಗೆ ಸುಮಂಗಲೆಯರಿಂದ ಆಶೀರ್ವಾದ ಪಡೆದು ವಾಸಗೃಹ ಪ್ರವೇಶಿಸಿದ ಗಿರಿಜಾಶಂಕರ ದಂಪತಿ ಸಾಮಾನ್ಯರಂತೆ ಸಂತೋಷಪಡುತ್ತಾ ವಿರಮಿಸಿದರು. ಸುಂದರನಾದ ಪರಮೇಶ್ವರನನ್ನು ನೋಡುತ್ತಾ ಸಂತೋಷದಿಂದ ಮೈಮರೆತ ಪಾರ್ವತಿ ತನ್ನ ಅದೃಷ್ಟ ನೆನೆದು ಪುಳಕಗೊಂಡಳು. ಆಗ ಶಿವನು ಸುಂದರವಾದ ರೂಪದಿಂದ ಮಹಾಕಾಂತಿಯುಳ್ಳವನಾಗಿ ಶೋಭಿಸುತ್ತಿದ್ದ. ನವಯೌವನ ಸಂಪನ್ನನಾಗಿ ಮನ್ಮಥನಂತೆ ಆಕರ್ಷಕವಾಗಿ ಕಾಣಿಸುತ್ತಿದ್ದ.

ಇಂಥ ಸುಂದರ ದಂಪತಿಯನ್ನು ಹರಸಲು ಸರಸ್ವತೀ, ಲಕ್ಷ್ಮೀ, ಸಾವಿತ್ರೀ, ಜಾಹ್ನವಿ, ಅದಿತಿ, ಶಚೀದೇವಿ, ಲೋಪಾಮುದ್ರಾ, ಅರುಂಧತಿ, ಅಹಲ್ಯಾ, ತುಳಸಿ, ಸ್ವಾಹಾದೇವಿ, ರೋಹಿಣಿ, ವಸುಂಧರಾ, ಶತರೂಪಾದೇವಿ, ಸಂಜ್ಞಾ, ರತೀದೇವಿ ಎಂಬ ಹದಿನಾರು ದೇವತಾಸ್ತ್ರೀಯರು ಅಲ್ಲಿಗೆ ಬಂದರು. ಇವರುಗಳಲ್ಲದೆ, ದೇವಕನ್ಯೆಯರು, ನಾಗಕನ್ಯೆಯರು, ಮುನಿಕನ್ಯೆಯರು ಸಹ ಅಲ್ಲಿಗೆ ಬಂದರು. ಆ ಸುಂದರಿಯರು ಶಿವನಿಗೆ ರತ್ನಸಿಂಹಾಸನವನ್ನು ಅರ್ಪಿಸಿದರು. ಸಿಂಹಾಸನದ ಮೇಲೆ ಹರ್ಷದಿಂದ ಪಾರ್ವತಿಯೊಂದಿಗೆ ಕುಳಿತ ಶಿವನಿಗೆ ದೇವಸ್ತ್ರೀಯರೆಲ್ಲ ಮಧುರವಾದ ಮಾತಿನಿಂದ ಹೊಗಳಿದರು.

ಸಿ–ಡಾಕ್‌ನಿಂದ ಅಭಿವೃದ್ಧಿ: ಸಮಗ್ರ ಮಾಹಿತಿ ಪಡೆಯಲು ಅನುಕೂಲ


ವಿದ್ಯುತ್ ಬಳಕೆ: ಬರಲಿದೆ ಸ್ಮಾರ್ಟ್ ಮೀಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಬಳಕೆ ಅಳೆಯುವ ಡಿಜಿಟಲ್ ಮೀಟರ್ ಈಗ ಮತ್ತಷ್ಟು ಸ್ಮಾರ್ಟ್ ಆಗಲಿದೆ.

ಕೇಂದ್ರ ಸರ್ಕಾರದ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್‌ಡ್ ಕಂಪ್ಯೂಟಿಂಗ್(ಸಿ-ಡಾಕ್) ಈ 'ಸ್ಮಾರ್ಟ್ ಎನರ್ಜಿ ಮೀಟರ್' ಅನ್ನು ಅಭಿವೃದ್ಧಿಪಡಿಸಿದ್ದು, ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ತಯಾರಿಸಲಿದೆ.

ಈಗಿರುವ ಡಿಜಿಟಲ್ ಮೀಟರ್ ಸರ್ವರ್ ಜತೆ ಸಂಪರ್ಕ ಹೊಂದಿಲ್ಲ. ಆದರೆ, ಸ್ಮಾರ್ಟ್ ಮೀಟರ್ ನೇರವಾಗಿ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ಸರ್ವರ್ ಜತೆ ಸಂಪರ್ಕ ಹೊಂದಿರುತ್ತದೆ. ಇದರಿಂದ, ಸಮಗ್ರ ವಿವರಗಳು ಲಭ್ಯವಾಗಲಿವೆ.



ಸ್ಮಾರ್ಟ್ ಮೀಟರ್

ಈ ಮೀಟರ್ ಸಂಪೂರ್ಣ ಸುರಕ್ಷಿತವಾಗಿರಲಿದ್ದು, ವಿದ್ಯುತ್ ಕಳ್ಳತನ ತಡೆಗಟ್ಟಲು ಸಹ ಸಹಕಾರಿಯಾಗಲಿದೆ. ಮೀಟರ್‌ಗೆ ಯಾವುದೇ ರೀತಿ ಧಕ್ಕೆ ಮಾಡಿದರೆ ತಕ್ಷಣವೇ ಸರ್ವರ್‌ಗೆ ಸಂದೇಶ ತಲುಪಲಿದೆ. ಜತೆಗೆ, ಪ್ರತಿ ದಿನ ಯಾರು ಎಷ್ಟು ವಿದ್ಯುತ್ ಬಳಸುತ್ತಾರೆ ಎಂಬ ಮಾಹಿತಿಯೂ ಕ್ಷಣಾರ್ಧದಲ್ಲಿ ಗ್ರಾಹಕರಿಗೆ ಮತ್ತು ಎಸ್ಕಾಂಗಳಿಗೆ ಲಭ್ಯವಾಗಲಿದೆ. ಎಂದು ಸಿ-ಡಾಕ್‌ನ ಪ್ರೊಜೆಕ್ಟ್ ಅಸೋಸಿಯೇಟ್ ರೋಹಿತ್ ರೆಡ್ಡಿ ವಿವರಿಸಿದರು.


ಅತಿ ಕಡಿಮೆ ಮತ್ತು ಹೆಚ್ಚು ವೋಲ್ಟೇಜ್ ಬಗ್ಗೆಯೂ ಈ ಮೀಟರ್ ಗ್ರಾಹಕರಿಗೆ ಎಚ್ಚರಿಕೆ ನೀಡಲಿದೆ. ಬ್ಲೂಟೂಥ್ ಮೂಲಕ ಸಂಪರ್ಕ ಪಡೆಯುವ ಅವಕಾಶ ಕಲ್ಪಿಸಿರುವುದರಿಂದ ಮೊಬೈಲ್‌ನಲ್ಲೇ ವಿದ್ಯುತ್ ಬಳಕೆಯ ಮಾಹಿತಿ ಲಭ್ಯವಾಗಲಿದೆ. ಭವಿಷ್ಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಈ ಮೀಟರ್ ಮತ್ತಷ್ಟು ಸುಧಾರಣೆ ಕಾಣಬಹುದು ಎಂದು ಮಾಹಿತಿ ನೀಡಿದರು.

ಸಿ–ಡಾಕ್ ದೇಶಿಯವಾಗಿ ಕೃಷಿ ಕ್ಷೇತ್ರ, ಸಮೀಕ್ಷೆಗಾಗಿ ಮತ್ತು ಬೇಹುಗಾರಿಕೆ ಅನುಕೂಲವಾಗಿ ಡ್ರೋನ್‌ಗಳನ್ನು ಸಹ ಅಭಿವೃದ್ಧಿಪಡಿಸಿದೆ.

ಪಾರ್ಶ್ವವಾಯು ರೋಗಿಗಳಿಗೆ ವಿಶೇಷ ಕುರ್ಚಿ

'ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ– ಬೆಂಗಳೂರು' (ಐಐಐಟಿ–ಬಿ) ವಿದ್ಯಾರ್ಥಿ ಜಗನ್, ಪಾರ್ಶ್ವವಾಯು ರೋಗಿಗಳಿಗೆ ತಂತ್ರಜ್ಞಾನ ಅಳವಡಿಸಿದ ವಿಶೇಷ ಕುರ್ಚಿಯನ್ನು ಅಭಿವೃದ್ಧಿಪಡಿಸಿರುವುದು ಗಮನಸೆಳೆಯಿತು.

ಪ್ರೊ. ಮಾಧವ್‌ರಾವ್ ಅವರ ಮಾರ್ಗದರ್ಶನದಲ್ಲಿ ಈ ಕುರ್ಚಿ ತಯಾರಿಸಲಾಗಿದೆ. ಈ ಕುರ್ಚಿಯು ಲ್ಯಾಪ್‌ಟಾಪ್ ಜತೆ ಸಂಪರ್ಕ ಹೊಂದಿರುತ್ತದೆ. ಇದರಿಂದ, ರೋಗಿಯ ವಿವರವಾದ ಮಾಹಿತಿಯನ್ನು ಮನೆಯಿಂದಲೇ ವೈದ್ಯರಿಗೆ ರವಾನಿಸಲು ಸಾಧ್ಯವಾಗಲಿದೆ. ಈ ಕುರ್ಚಿಯ ಕೆಳಭಾಗದಲ್ಲಿ ನಿಯಂತ್ರಿತ ಉಪಕರಣಗಳನ್ನು ಅಳವಡಿಸಲಾಗಿದ್ದು, ರೋಗಿಯ ವಿವರಗಳನ್ನು ಪಡೆಯಲು ಇದರಿಂದ ಸಹಕಾರಿಯಾಗಲಿದೆ. ಈ ಕುರ್ಚಿ ತಯಾರಿಸಲು ಸದ್ಯ ₹80 ಸಾವಿರ ವೆಚ್ಚವಾಗಿದೆ.




ಮಳಿಗೆಯಲ್ಲಿ ಪ್ರದರ್ಶನಕ್ಕೆ ಇಟ್ಟ ವೀಲ್ ಚೇರ್

'ನಿಮ್ಹಾನ್ಸ್ ಸಹಯೋಗದೊಂದಿಗೆ ಈ ಕುರ್ಚಿಯನ್ನು ಅಭಿವೃದ್ಧಿಪಡಿಸುವ ಸಂಶೋಧನೆ ಕಾರ್ಯವನ್ನು ಕೈಗೊಳ್ಳಲಾಗಿದೆ. ರೋಗಿಗಳ ಅಗತ್ಯತೆ ಬಗ್ಗೆ ನಿಮ್ಹಾನ್ಸ್ ನೀಡಿದ ಸಲಹೆಯಂತೆ ಇದನ್ನು ಅಭಿವೃದ್ಧಿಪಡಿಸಲಾಗಿದೆ. ಈ ಕುರ್ಚಿಯ ಕ್ಲಿನಿಕಲ್ ಪ್ರಯೋಗವನ್ನು ಕೈಗೊಂಡು ಯಶಸ್ವಿಯಾದ ಬಳಿಕ ರೋಗಿಗಳ ಬಳಕೆಗೆ ನೀಡಲಾಗುವುದು' ಎಂದು ಜಗನ್ ತಿಳಿಸಿದರು.

ಕೃತಕ ಬುದ್ಧಿಮತ್ತೆಯ ರೋಬೊ

ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಬಳಸಿ ದೆಹಲಿಯ ಮ್ಯಾಜಿಕ್‌ಟ್ಯಾಪ್ ಕಂಪನಿ ವಿಶೇಷ ರೋಬೊ ಅನ್ನು ಅಭಿವೃದ್ಧಿಪಡಿಸಿದೆ. ವ್ಯಕ್ತಿಗಳ ಸ್ಥಳ ಮತ್ತು ಚಲನವನ್ನು ಗುರುತಿಸಿ ಹಿಂಬಾಲಿಸುವ ತಂತ್ರಜ್ಞಾನವನ್ನು ಇದು ಒಳಗೊಂಡಿದೆ. ಇದನ್ನು ಗಡಿ ಪ್ರದೇಶ ಹಾಗೂ ವಿವಿಧ ಸಂದರ್ಭಗಳಲ್ಲಿ ಗಸ್ತು ಕಾರ್ಯಕ್ಕೂ ನಿಯೋಜಿಸಬಹುದಾಗಿದೆ. ಆಸ್ಪತ್ರೆಯಲ್ಲೂ ರೋಗಿಯ ಬಳಿ ಔಷಧವನ್ನು ಕೊಂಡೊಯ್ಯಲು ಬಳಸಬಹುದಾಗಿದೆ. ಈ ರೋಬೊಗೆ ಸಾಧ್ಯವಾದಷ್ಟು ಮಾಹಿತಿ ನೀಡಿದಂತೆ ವಿವಿಧ ಕಾರ್ಯಗಳಿಗೆ ಬಳಸಲು ಸಾಧ್ಯವಿದೆ. ಛಾಯಾಚಿತ್ರಗಳನ್ನು ಸಹ ಇದನ್ನು ಬಳಸಬಹುದಾಗಿದೆ. ಈ ರೋಬೊ ಬೆಲೆ ₹6ಲಕ್ಷ' ಎಂದು ಕಂಪನಿಯ ಶ್ರೀಧರ್ ತಿಳಿಸಿದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣನವಮಿ ಗಂ. 09-34 ನಕ್ಷತ್ರ: ಪೂರ್ವ ಫಲ್ಗುಣಿ ಗಂ. 23-08 ಯೋಗ: ವೈಧೃತಿ ಗಂ. 25-10, ಕರಣ: ಗರಜೆ ಗಂ. 09-34, ವೃಶ್ಚಿಕ ಮಾಸದ 01 ನೇ ದಿನ.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-35 **ಸೂರ್ಯಾಸ್ತ:** 05-57
ಮುಸ್ಲಿಂ ದಿನಾಂಕ: 22 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 5, 9

ಮೇಷ: ನಿಮ್ಮಲ್ಲಿರುವ ವಿದ್ಯೆ ಮತ್ತು ಬುದ್ಧಿವಂತಿಕೆಯನ್ನು ಸರಿಯಾದ ಮಾರ್ಗದಲ್ಲಿ ಬಳಸುವ ಬಗ್ಗೆ ತೀರ್ಮಾನಿಸಿ. ವಾದ ಮಾಡುವ ಅಭ್ಯಾಸದಿಂದಾಗಿ ಸಂಬಂಧಗಳನ್ನು ಹಾಳುಮಾಡಿಕೊಳ್ಳುವ ಲಕ್ಷಣಗಳು ಕಂಡುಬರಲಿದೆ.

ವೃಷಭ: ತಪ್ಪು ತಿಳಿವಳಿಕೆಯಿಂದಾಗಲಿ ಅಥವಾ ಅತಿಯಾದ ಆಸೆಯಿಂದಾಗಲೀ ಹಣವನ್ನು ಕಳೆದುಕೊಳ್ಳುವ ಸನ್ನಿವೇಶಗಳು ಈ ದಿನ ಎದುರಾಗಬಹುದು. ಕೌಟುಂಬಿಕವಾಗಿ ಮೂಡಿದ್ದ ಅನುಮಾನಗಳು ದೂರವಾಗಲಿದೆ.

ಮಿಥುನ: ಖಾಸಗಿ ಉದ್ಯೋಗಿಗಳು ಆದಾಯ ಏರಿಕೆಯ ವಿಚಾರ ಮೇಲಧಿಕಾರಿಗಳಲ್ಲಿ ಪ್ರಸ್ತಾಪಿಸಬಹುದು. ಈ ದಿನ ಸರಿಯಾದ ಸಮಯ. ವಿದೇಶ ಪ್ರಯಾಣದ ಸಿದ್ಧತೆ ನಡೆಯಲಿದೆ. ವಾಹನ ವಹಿವಾಟುಗಳಲ್ಲಿ ಲಾಭ ಪಡೆಯಬಹುದು.

ಕರ್ಕಾಟಕ: ಉದ್ಯೋಗದ ಸಂದರ್ಶನದಲ್ಲಿ ಧೈರ್ಯದಿಂದ ಮುನ್ನುಗ್ಗಿ, ಶುಭಫಲ ಹೊಂದುವಿರಿ. ವೈವಾಹಿಕ ಜೀವನವು ಇಂದು ಸಿಹಿಯ ಅನುಭವ ನೀಡುತ್ತದೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಲಿದೆ.

ಸಿಂಹ: ನಿಮ್ಮ ಆಲೋಚನೆಯನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳಬೇಡಿ. ಸಣ್ಣ ಸಣ್ಣ ವಿಚಾರಗಳೂ ಸಹ ದೊಡ್ಡ ರಾದ್ಧಾಂತವಾಗಿ ಪರಿಣಮಿಸಲಿದೆ. ಮಾನಸಿಕವಾಗಿ ಇಂದು ಗೊಂದಲಗಳಿರುವುದು. ಈಶ್ವರ ಆರಾಧನೆಯನ್ನು ನಡೆಸಿ.

ಕನ್ಯಾ: ವ್ಯಾಪಾರಾಭಿವೃದ್ಧಿಗೆ ಉತ್ತಮ ಕಾಲವಾಗಿದೆ. ಮಕ್ಕಳು ನಿಮಗೆ ಸಂತಸ ತರಲಿದ್ದಾರೆ. ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗಿಗಳಿಗೆ ಕೆಲಸದಲ್ಲಿ ಉನ್ನತಸ್ಥಾನ ಸಿಗಲಿದೆ. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುದು.

ತುಲಾ: ಹಿಂದೆ ಆರಂಭ ಮಾಡಿದ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿ. ಮನೆ ಬದಲಾಯಿಸುವ ಯೋಚನೆಗೆ ಇಂದು ಸರಿಯಾದ ಸಮಯ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಸ್ಥರಿಗೆ ಲಾಭ ಸಿಗುವುದು.

ವೃಶ್ಚಿಕ: ಇನ್ನೊಬ್ಬರನ್ನು ಹೀಯಾಳಿಸುವುದು ಅಥವಾ ಅಪಹಾಸ್ಯ ಮಾಡುವುದು ನಿಮ್ಮ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ರಾಜಕಾರಣದ ರಹಸ್ಯ ಬಯಲಾಗಬಹುದು, ಅದು ಅಧಿಕ ಮಟ್ಟಿಗೆ ಪರಿಣಾಮ ಬೀರಲಿದೆ.

ಧನು: ಪೊಲೀಸ್ ಅಧಿಕಾರಿಗಳಿಗೆ ಅಧಿಕ ಕೆಲಸದ ಒತ್ತಡ ಇರಲಿದೆ. ಕರ್ತವ್ಯ ನಿಷ್ಠೆ, ಸ್ವಾಮಿ ನಿಷ್ಠೆಯನ್ನು ರೂಢಿಸಿಕೊಳ್ಳುವುದು ಉತ್ತಮ. ಹೆಚ್ಚಿನ ಜವಾಬ್ದಾರಿಗಳಿಂದ ವಿರಾಮ ಪಡೆಯಬಹುದು.

ಮಕರ: ಹಿತ ಶತ್ರುಗಳಿಂದ ದಾಂಪತ್ಯದಲ್ಲಿ ಭಿನ್ನಾಭಿಪ್ರಾಯ ಉಂಟಾಗಬಹುದು. ನಿಮ್ಮ ಅನಿವಾರ್ಯಕ್ಕೆ ಸಂಬಂಧಿಕರಲ್ಲಿ ಆರ್ಥಿಕ ಸಹಾಯವನ್ನು ನಿರೀಕ್ಷಿಸಬೇಡಿ. ಸುಖ ಶಾಂತಿಯಸಂಕಲ್ಪದಲ್ಲಿ ಮನೆಯಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ.

ಕುಂಭ: ದೇಹಕ್ಕೆ ಅವಶ್ಯಕತೆ ಇರುವಷ್ಟು ನಿದ್ದೆಯನ್ನು, ವಿಶ್ರಾಂತಿಯನ್ನು ಮಾಡುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಅಮೂಲ್ಯವಾದ ವಸ್ತುವಿನ ಕಾಣೆಯಾಗುವಿಕೆಯು ಮನಸ್ಸಿಗೆ ನೋವುಂಟು ಮಾಡುತ್ತದೆ.

ಮೀನ: ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಹುಡುಕಿಕೊಂಡು ಬರಲಿದೆ. ಈ ದಿನ ವೈದ್ಯ ವೃತ್ತಿಯವರಿಗೆ ಉತ್ತಮ ಹೆಸರುಗಳಿಸುವ ಸಮಯ. ಆಹಾರ ಪದಾರ್ಥದ ಬೆಳೆಯನ್ನು ಬೆಳೆದ ಕೃಷಿಕರಿಗೆ ಉತ್ತಮ ಲಾಭ ಸಿಗುವುದು.



ಹರುಷದ ದಾರಿ

ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು|
ಗುರುತಿಸೊಳಿತಿರುವುದನು ಕೇಡುಗಳ ನಡುವೆ ||
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು |
ಹರುಷಕದೆ ದಾರಿಯೆಲೊ – ಮಂಕುತಿಮ್ಮ || 759||

ಪದ-ಅರ್ಥ: ಬರದಿಹುದರೆಣಿಕೆಯಲಿ = ಬರದೆ + ಇಹುದರ + ಎಣಿಕೆಯಲಿ, ಗುರುತಿಸೊಳಿತಿರುವುದನು = ಗುರುತಿಸು + ಒಳಿತು + ಇರುವುದನು, ಬಾರೆನೆಂಬುದನು = ಬಾರೆನು + ಎಂಬುದನು, ಹರುಷಕದೆ = ಹರುಷಕೆ + ಅದೆ.

ವಾಚ್ಯಾರ್ಥ: ಬರದೆ ಇರುವುದನ್ನು ಅಪೇಕ್ಷಿಸುತ್ತ, ಇರುವುದನ್ನು ಮರೆಯದಿರು. ಅನೇಕ ಕೇಡುಗಳ ಮಧ್ಯೆ ಕೆಲವು ಒಳಿತುಗಳೂ ಇರುವುದನ್ನು ಗುರುತಿಸು. ನಿನಗೆ ಇರುವ ಭಾಗ್ಯವನ್ನು ನೆನೆ, ಬರುವುದಿಲ್ಲ ಎಂಬುದನ್ನು ಬಿಡು. ಅದೇ ಹರುಷದ ದಾರಿ.


ವಿವರಣೆ: ನನ್ನ ಕಿರಿಯ ಸ್ನೇಹಿತನೊಬ್ಬ ಐ.ಟಿ. ಕಂಪನಿಯಲ್ಲಿ ಕೆಲಸಕ್ಕೆ ಸೇರಿದ. ಅವನಿಗೆ ಮದುವೆ ಯಾಯಿತು. ಹೆಂಡತಿ ಅಪರೂಪದ ಸುಂದರಿ. ಮನಶಾಸ್ತ್ರಜ್ಞೆ ಕೂಡ. ಅಮೇರಿಕೆ ಸೇರಿದ. ಪುಟ್ಟಮನೆ. ಮನೆ ತುಂಬ ಪ್ರೀತಿ. ನಾನು ಹೋದಾಗಲೆಲ್ಲ ಮನೆಗೆ ದಂಪತಿಗಳು ಕರೆದುಕೊಂಡು ಹೋಗುತ್ತಿದ್ದರು. ಮನೆಯೊಂದು ಪ್ರೀತಿಯ ಗಣಿ. ಸ್ವರ್ಗ. ಎರಡು ಹೆಣ್ಣುಮಕ್ಕಳಾದವು. ಗಂಡನಿಗೆ ಹಣದಾಸೆ ಬಂದಿತು. ಅದಕ್ಕಾಗಿ ಶೇರ್‌ಗಳಲ್ಲಿ, ಲಾಟರಿಗಳಲ್ಲಿ ಹಣ ಹಾಕತೊಡಗಿದ. ಮನೆಯ ಕಡೆಗೆ ಗಮನ ಕಡಿಮೆಯಾಯಿತು. ಒಂದು ದಿನ ಅವನಿಗೆ ನೂರು ಮಿಲಿಯನ್ ಡಾಲರ್ ಬಂದಿತು. ಪುಟ್ಟ ಮನೆ ಅರಮನೆಯಾಯಿತು. ಸಕಲ ವೈಭೋಗ ಮಲೆತು ನಿಂತಿತು. ಆದರೆ ಅವನಿಗೆ ತೃಪ್ತಿ ಇಲ್ಲ. ಕಳೆದ ಬಾರಿ ಅಮೇರಿಕೆಗೆ ಹೋದಾಗ ನನ್ನನ್ನು ಮನೆಗೆ ಕರೆದೊಯ್ದ. ಅರಮನೆಯೊಳಗೆ ಭೂತದ ಹಾಗೆ ಒಬ್ಬನೇ ಕುಳಿತಿದ್ದಾನೆ. ಹೆಂಡತಿ ಮಕ್ಕಳು ತೊರೆದು ದೂರ ಹೋಗಿದ್ದಾರೆ. ಹಣ ಹರಿದು ಬಂತು. ಸುಖ, ಆನಂದ ಹರಿದು ಹೋಯಿತು. ತನಗಿದ್ದ ಸಂತೋಷವನ್ನು ಮರೆತು ಹಣಕೊಡಬಹುದೆಂದುಕೊಂಡಿದ್ದ ಹಣಕ್ಕೆ ಕೈಚಾಚಿ ಇದ್ದ ಸಂತೋಷವನ್ನು ಕಳೆದುಕೊಂಡಿದ್ದ. ಇದನ್ನೇ ಕಗ್ಗ ತಿಳಿಸುವುದು. ಕೈಗೆಟುಕದ ಮಾಯಾಸುಖಕ್ಕೆ ಕೈಚಾಚಿ, ಜೊಲ್ಲು ಸುರಿಸುತ್ತ ಓಡುವುದರ ಬದಲು ನಿನಗೆ ಈ ದಕ್ಕಿರುವ ಸಂತೋಷವನ್ನು ಅನುಭವಿಸು. ಅದನ್ನು ಮರೆಯಬೇಡ. ಜಗತ್ತಿನಲ್ಲಿ ಒಳಿತುಗಳು ಎಷ್ಟಿವೆಯೋ ಅಷ್ಟೇ ಕೇಡುಗಳೂ ಇವೆ. ನಿನ್ನ ಬದುಕನ್ನು ಸಂತಸಮಯವಾಗಿಸಿಕೊಳ್ಳಲು ಒಳಿತುಗಳನ್ನೇ ಕಾಣಲು ಪ್ರಯತ್ನಿಸು. ಊರಲ್ಲಿ ಕಸದ ಗುಂಡಿಯೂ ಇದೆ, ಗುಲಾಬಿ ತೋಟವೂ ಇದೆ. ಯಾಕೆ ಕಸದ ಗುಂಡಿಯ ಪಕ್ಕ ನಿಂತು ಕೊಳಕುವಾಸನೆ ಎಂದು ಗೊಣಗುತ್ತೀ? ಎದ್ದು ಗುಲಾಬಿಯ ತೋಟಕ್ಕೆ ಹೋಗಿ ಸುವಾಸನೆ ಪಡೆ. ಎರಡೂ ನಿನಗೆ ಲಭ್ಯವಿವೆ. ಆಯ್ಕೆ ನಿನ್ನದು. ನಿನ್ನ ಭಾಗ್ಯ ನಿನ್ನ ಅದೃಷ್ಟ. ಅದಕ್ಕೆ ಸಂತೋಷಪಡು. ಬೇರೆಯವರನ್ನು ಕಂಡು ಅವರಿಗೆ ದೊರೆತ ಭಾಗ್ಯ ತನಗೆ ಸಿಗಲಿಲ್ಲವಲ್ಲ ಎಂಬ ಕೊರಗು ಬಾಳನ್ನು ನರಕಮಾಡುತ್ತದೆ. ಯಾವುದು ಬಂದಿಲ್ಲವೋ ಅದರ ಗೊಡವೆ ಬೇಡ. ಬಂದದ್ದರಲ್ಲಿ ಸಂತೃಪ್ತಿಪಡುವುದೇ ಹರುಷದ ದಾರಿ.

ಪದಬಂಧ 5142

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಕ್ರೂರವಾದ ನೋಟ (4)
4.ನಾಡಿನಲ್ಲಿ ಪ್ರಸಿದ್ಧವಾದ ಲೋಕೋಕ್ತಿ! (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು! (3)
6.ಯುದ್ಧಕ್ಕೊಂದು ಪರ್ಯಾಯ ಪದ (3)
8.ಕಳೆಯುವ ಲೆಕ್ಕವಿದು (5)
10.ಮುಳ್ಳುಗಳ ನಡುವೆ ಅರಳುವ ಹೂವು (3)
12.ವೃಕ್ಷದ ಹತ್ತಿರವೇ ಸಾವು! (3)
13.ಜಡಿಮಳೆಯಲ್ಲಿ ಖರೀದಿಸಿರುವ ವಂದರಿ (3)
15.ತೊಂದರೆ ನಿವಾರಣೆಗಾಗಿ ಮಾಡುವ ಮನವಿ (4)

ಮೇಲಿಂದ ಕೆಳಕ್ಕೆ
1.ಕಡೆದ ಮೊಸರು (2)
2.ಎಳೆಗಂದಿ ಹಾಲಿನಿಂದ ತಯಾರಿಸಿದ ಸಿಹಿ ಪಾಯಸ (2)
3.ತರ್ಕ ಮಾಡುತ್ತಿರುವ ವ್ಯಾಪಾರಿ (3)
4.ನಾಗರೀಕರು ಹಿಡಿದಿರುವ ಎಳೆ (2)
5.ಒಂದುಗೂಡಿಸುವುದು (5)
7.ಇದು ಹೊಸದು (2)
9.ಅಳು ಪದದ ವಿರುದ್ಧ ಪದ (2)
11.ಸೂರ್ಯನ ಕಾವು ಇಲ್ಲಿದೆ (3)
12.ಮಹಡಿಯಲ್ಲಿಯೇ ಮಾಡಿದ ಪಾತಿ! (2)
14.ಕಿರಣವು ಇಲ್ಲಿ ತೂರಿ ಬಂದಿದೆ (2)
16. ಪೂರ್ತಿಯಾದ ಅರ್ಥ ಕೊಡಬಲ್ಲ ಶಬ್ದಗಳ ಗುಂಪು (2)



5141ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.
1.ಕಡುದಾಹ 3.ಮಸಲತ್ತು
5.ಠವಕ 6.ತಡಬಡ
7.ದಳಪತಿ 9.ತರದೂದು
11.ಸಡಗರ 13.ಚಾಕರ
15.ಮದಕರಿ 16.ಸಮೀಕ್ಷಕ

ಮೇಲಿಂದ ಕೆಳಕ್ಕೆ:
1.ಕಪ್ಪ 2.ಹಳವಂಡ
3.ಮಕರಂದ 4.ತ್ತುಸ್ವ
6.ತಡೆತ 8.ತಿಮಿರ
10.ದುರಾಚಾರಿ 11.ಸಮರಸ
12.ಧೂಮ 14.ಚೌಕ

ಸುಡೊಕು 5528


	4				7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5527 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಷೇರುಪೇಟೆ ವಹಿವಾಟು 230



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,409
ಇಂದಿನ ಅಂತ್ಯ	18,343
▼	66
ದಿನದ ಕನಿಷ್ಠ	18,312

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹545
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹545

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1550)
ಸೋಯಾ (ರಿಫೈನ್ಡ್)	₹1330 (1360)
ಸೂರ್ಯಕಾಂತಿ (ರಿಫೈನ್ಡ್)	₹1510 (1530)
ಪಾಮೋಲಿನ್	₹942 (965)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹300-660
ದ್ವಿತಳಿ (ಬಿ.ವಿ) ₹201-851

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹146
ಆರ್‌ಎಸ್‌ಎಸ್-5 ₹138
ಗುಡ್ ಲಾಟ್ ₹131
(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800
ಸಣ್ಣ	₹500-1000

ಜಾಗ್ವಾರ್ ಸಿಇಒ ರಾಜೀನಾಮೆ



ಬೆಂಗಳೂರು (ರಾಯಿಟರ್ಸ್): ಟಾಟಾ ಮೋಟರ್ಸ್ ಮಾಲೀಕತ್ವದ ಐಷಾರಾಮಿ ಕಾರು ತಯಾರಿಕಾ ಕಂಪನಿ ಜಾಗ್ವಾರ್ ಲ್ಯಾಂಡ್ ರೋವರ್‌ನ ಮುಖ್ಯ ಕಾರ್ಯ-ನಿರ್ವಹಣಾ ಅಧಿಕಾರಿ ಥಿಯರಿ ಬೊಲೋರ್ ತಮ್ಮ ಸ್ಥಾನಕ್ಕೆ ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡಲಿದ್ದಾರೆ. ಮಧ್ಯಂತರ ಅವಧಿಗೆ ಆ್ಯಡ್ರಿಯನ್ ಮಾರ್ಡೆಲ್ ಅವರು ಸಿಇಒ ಆಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಕಂಪನಿ ಹೇಳಿದೆ.

‘ಆರ್ಥಿಕ ಹಿಂಜರಿತದಲ್ಲಿ ಬ್ರಿಟನ್’

ಅರ್ಥ ವ್ಯವಸ್ಥೆ ಇನ್ನಷ್ಟು ಕುಗ್ಗಲಿದೆ: ಹಣಕಾಸು ಸಚಿವ ಜೆರೆಮಿ ಹಂಟ್ ಹೇಳಿಕೆ

ಲಂಡನ್ (ಪಿಟಿಐ): ಬ್ರಿಟನ್ ಈಗ ಆರ್ಥಿಕ ಹಿಂಜರಿತದ ಸ್ಥಿತಿಯಲ್ಲಿ ಇದೆ ಎಂದು ದೇಶದ ಹಣಕಾಸು ಸಚಿವ ಜೆರೆಮಿ ಹಂಟ್ ಹೇಳಿದ್ದಾರೆ. ಅಲ್ಲದೆ, ಅರ್ಥ ವ್ಯವಸ್ಥೆಯು ಇನ್ನಷ್ಟು ಕುಗ್ಗುವತ್ತ ಸಾಗಿದೆ ಎಂದೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ತೆರಿಗೆ ಪ್ರಮಾಣವನ್ನು ಹೆಚ್ಚಿಸುವ ತುರ್ತು ಬಜೆಟ್ ಮಂಡನೆ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ. ಹಂಟ್ ಅವರು ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್‌ಗೆ ಸರ್ಕಾರದ ಖರ್ಚು-ವೆಚ್ಚಗಳ ವಿವರವನ್ನೂ ನೀಡಿದ್ದಾರೆ.

ಹೊಸ ಬಜೆಟ್ ಜೊತೆಯಲ್ಲಿ ಸಿದ್ಧಪ-ಡಿಸಲಾಗಿರುವ, ಬಜೆಟ್ ಹೊಣೆಗಾರಿಕೆ ಕಚೇರಿಯ ಸ್ವತಂತ್ರ ವರದಿಯು, ರಷ್ಯಾ-ಉಕ್ರೇನ್ ಸಂಘರ್ಷದ ಕಾರಣದಿಂದಾಗಿ



ಜೆರೆಮಿ ಹಂಟ್ –ಎಎಫ್‌ಪಿ ಚಿತ್ರ

ಇಂಧನ ಬೆಲೆ ಹೆಚ್ಚಳವಾಗಿದ್ದು ಅರ್ಥ ವ್ಯವಸ್ಥೆಯ ಕುಸಿತಕ್ಕೆ ಕಾರಣ ಎಂದು ಹೇಳಿದೆ. 2024ರವರೆಗೂ ಅರ್ಥ ವ್ಯವಸ್ಥೆ ಬೆಳವಣಿಗೆ ಕಾಣುವ ಸಾಧ್ಯತೆ ಇಲ್ಲ ಎಂದು ಅದು ಅಂದಾಜಿಸಿದೆ.

‘ಜಾಗತಿಕ ಮಟ್ಟದಲ್ಲಿ ಇಂಧನ



ಬಿಕ್ಕಟ್ಟು, ಹಣದುಬ್ಬರದ ಸಮಸ್ಯೆ ಮತ್ತು ಆರ್ಥಿಕ ಬಿಕ್ಕಟ್ಟು ಇದೆ’ ಎಂದು ಹಂಟ್ ಹೇಳಿದ್ದಾರೆ. ಅವರು ಮಂಡಿಸಿರುವ ಬಜೆಟ್ ತೆರಿಗೆಗಳನ್ನು ಹೆಚ್ಚಿಸಿದೆ, ಸರ್ಕಾರದ ವೆಚ್ಚವನ್ನು ತಗ್ಗಿಸಿದೆ.

‘ಉಳ್ಳವರು ಹೆಚ್ಚು ಕೊಡುಗೆ ನೀಡಬೇಕು ಎಂದು ಕೇಳಿಕೊಂಡಿದ್ದೇನೆ. ಆರ್ಥಿಕ ಬೆಳವಣಿಗೆಗೆ ತೊಡಕು ಆಗುತ್ತದೆ ಎಂಬಲ್ಲಿ ತೆರಿಗೆ ಹೆಚ್ಚಿಸುವು-ದನ್ನು ತಡೆದಿದ್ದೇನೆ’ ಎಂದು ಹಂಟ್ ಹೇಳಿದ್ದಾರೆ.

ದೇಶದ ಅರ್ಥ ವ್ಯವಸ್ಥೆಯು ಸತತ ಎರಡು ತ್ರೈಮಾಸಿಕಗಳಲ್ಲಿ ಕುಸಿತ ದಾಖಲಿಸಿದರೆ, ಅದು ಹಿಂಜರಿತದ ಸ್ಥಿತಿಯಲ್ಲಿ ಇದೆ ಎಂದು ವ್ಯಾಖ್ಯಾನಿಸ-ಲಾಗುತ್ತದೆ. ಆರ್ಥಿಕ ಹಿಂಜರಿತ ಇದ್ದಾಗ ಕಂಪನಿಗಳ ವರಮಾನ ತಗ್ಗುತ್ತದೆ, ವೇತನ ನೀಡುವ ಸಾಮರ್ಥ್ಯ ತಗ್ಗುತ್ತದೆ ಹಾಗೂ ನಿರುದ್ಯೋಗ ಹೆಚ್ಚಾಗುತ್ತದೆ. ಇವೆಲ್ಲವುಗಳ ಪರಿಣಾಮವಾಗಿ ಸರ್ಕಾರಕ್ಕೆ ಬರುವ ತೆರಿಗೆ ವರಮಾನ ಕಡಿಮೆ ಆಗುತ್ತದೆ.

ಸುದ್ದಿ 2 ನಿಮಿಷ

35 ಲಕ್ಷ ಟನ್ ಸಕ್ಕರೆ ರಫ್ತಿಗೆ ಒಪ್ಪಂದ: ಐಎಸ್‌ಎಂಎ

ನವದೆಹಲಿ (ಪಿಟಿಐ): 2022–23ನೇ ಮಾರುಕಟ್ಟೆ ವರ್ಷದಲ್ಲಿ ಈವರೆಗೆ 35 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ವಿವಿಧ ದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಘ (ಐಎಸ್‌ಎಂಎ) ಗುರುವಾರ ಹೇಳಿದೆ.

ಅಕ್ಟೋಬರ್‌ನಲ್ಲಿ 2 ಲಕ್ಷ ಟನ್ ರಫ್ತು ಮಾಡಲಾಗಿದೆ. ಕಳೆದ ವರ್ಷದ ಅಕ್ಟೋಬ-ರ್‌ನಲ್ಲಿ 4 ಲಕ್ಷ ಟನ್ ಸಕ್ಕರೆ ರಫ್ತು ಮಾಡಲಾಗಿತ್ತು ಎಂದು ಸಂಘವು ಪ್ರಕಟಣೆಯಲ್ಲಿ ತಿಳಿಸಿದೆ.

ಸಕ್ಕರೆ ಮಾರುಕಟ್ಟೆಯು ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗೆ ಇರುತ್ತದೆ.

ನವೆಂಬರ್ 5ರಂದು ಸರ್ಕಾರವು ಘೋಷಿಸಿದ 2022–23ರ ಸಕ್ಕರೆ ರಫ್ತು ನೀತಿಯ ಪ್ರಕಾರ, ಸಿಎಕ್ಸ್‌ಎಲ್ ಮತ್ತು ಟಿಆರ್‌ಕ್ಯೂ ಕೋಟಾದ ಅಡಿ 60 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಮೇ 31ರವರೆಗೆ ಅವಕಾಶ ಇದೆ. ದೇಶಿ ಉತ್ಪಾದನೆಯನ್ನು ಪರಿಶೀಲಿಸಿದ ಬಳಿಕ ಹೆಚ್ಚಿನ ಪ್ರಮಾಣದ ರಫ್ತಿಗೆ ಅವಕಾಶ ಸಿಗಲಿದೆ.



4ಜಿ: ಮುಂಚೂಣಿಯಲ್ಲಿ ಜಿಯೊ

ನವದೆಹಲಿ (ಪಿಟಿಐ): 4ಜಿ ಡೌನ್‌ಲೋಡ್ ಮತ್ತು ಅಪ್‌ಲೋಡ್ ವೇಗಕ್ಕೆ ಸಂಬಂಧಿಸಿದಂತೆ ಜಿಯೊ ಕಂಪನಿಯು ಮೊದಲ ಸ್ಥಾನದಲ್ಲಿ ಇದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಗುರುವಾರ ಹೇಳಿದೆ.

ಬಿಎಸ್‌ಎನ್‌ಎಲ್ ಈಗಷ್ಟೇ 4ಜಿ ಸೇವೆಗಳನ್ನು ಆರಂಭಿಸಿರುವುದರಿಂದ ಪ್ರಾಧಿಕಾರವು ಅಕ್ಟೋಬರ್ ತಿಂಗಳ ಪಟ್ಟಿಯಲ್ಲಿ ಕಂಪನಿಯನ್ನು ಸೇರಿಸಿಲ್ಲ.

ಅಕ್ಟೋಬರ್‌ನಲ್ಲಿ ಜಿಯೊದ ಡೌನ್‌ಲೋಡ್ ವೇಗವು ಪ್ರತಿ ಸೆಕೆಂಡ್‌ಗೆ ಸರಾಸರಿ 20.3 ಎಂ.ಬಿ. ಇದೆ. ಏರ್‌ಟೆಲ್ 15 ಎಂಬಿಪಿಎಸ್ ಮತ್ತು ವೊಡಾಫೋನ್ ಐಡಿಯಾ 14.5 ಎಂಬಿಪಿಎಸ್ ವೇಗ ಹೊಂದಿವೆ.

ಜಿಯೊದ 4ಜಿ ಅಪ್‌ಲೋಡ್ ವೇಗವು ಅಕ್ಟೋಬರ್‌ನಲ್ಲಿ 6.4 ಎಂಬಿಪಿಎಸ್‌ನಿಂದ 6.2 ಎಂಬಿಪಿಎಸ್‌ಗೆ ಅಲ್ಪ ಇಳಿಕೆ ಕಂಡಿದೆ. ಹೀಗಿದ್ದರೂ ಜಿಯೊ ಮೊದಲ ಸ್ಥಾನದಲ್ಲೇ ಇದೆ. ವೊಡಾಫೋನ್ ಐಡಿಯಾ 4.5 ಎಂಬಿಪಿಎಸ್ ಮತ್ತು ಏರ್‌ಟೆಲ್ 2.7 ಎಂಬಿಪಿಎಸ್ ಅಪ್‌ಲೋಡ್ ವೇಗ ಹೊಂದಿದ್ದು, ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ ಎಂದು ಟ್ರಾಯ್ ಮಾಹಿತಿ ನೀಡಿದೆ.

ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ನಕಾರಾತ್ಮಕ ವಹಿವಾಟು

ಲಾಭ ಗಳಿಕೆ: ಸೆನ್ಸೆಕ್ಸ್ 230 ಅಂಶ ಇಳಿಕೆ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದ್ದರಿಂದ ದೇಶದ ಷೇರುಪೇಟೆಗಳು ಗುರುವಾರ ನಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 230 ಅಂಶ ಇಳಿಕೆ ಕಂಡು 61,750 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 66 ಅಂಶ ಇಳಿಕೆಯಾಗಿ 18,343 ಅಂಶಗಳಿಗೆ ತಲುಪಿತು. ಬಿಎಸ್‌ಇ ಮಿಡ್‌ಕ್ಯಾಪ್ ಶೇ 0.33ರಷ್ಟು ಮತ್ತು ಸ್ಮಾಲ್‌ಕ್ಯಾಪ್ ಶೇ 0.27ರಷ್ಟು ಇಳಿಕೆ ಕಂಡಿತು.

‘ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಅಸ್ಥಿರ ಮತ್ತು ದುರ್ಬಲ



ವಹಿವಾಟಿನ ಪರಿಣಾಮದಿಂದಾಗಿ ದೇಶದ ಷೇರುಪೇಟೆಗಳು ಇಳಿಕೆ ಕಂಡವು. ನಿಫ್ಟಿ ಕಡಿಮೆ ಮಟ್ಟದಲ್ಲಿಯೇ ವಹಿವಾಟು ಆರಂಭಿಸಿ, ಅಲ್ಪ ಮಟ್ಟಿನ ಮಾರಾಟದ ಒತ್ತಡ ಎದುರಿಸಿತು’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

ಏಷ್ಯಾದಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಯುರೋಪ್‌ನ ಮಾರುಕಟ್ಟೆಗಳಲ್ಲಿ ಸಹ ನಕಾರಾತ್ಮಕ ವಹಿವಾಟು ನಡೆಯಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 0.46ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 92.43 ಡಾಲರ್‌ಗೆ ತಲುಪಿತು.

ರೂಪಾಯಿ ಮೌಲ್ಯ 38 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಗುರುವಾರ 38 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹81.64ರಂತೆ ವಿನಿಮಯಗೊಂಡಿತು.

ಅಮೆರಿಕದ ಕರೆನ್ಸಿ ಮೌಲ್ಯ ಹೆಚ್ಚಾಗಿರುವುದು ಹಾಗೂ ದೇಶಿ ಮಾರುಕ-ಟ್ಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ರೂಪಾಯಿ ಮೌಲ್ಯ ಇಳಿಕೆ ಕಾಣುವಂತಾಯಿತು.

ಗುಂಡಿನ ದಾಳಿ: 7 ಸಾವು, 10 ಮಂದಿಗೆ ಗಾಯ

ದುಬೈ (ಎಪಿ): ಇರಾನ್‌ನಲ್ಲಿ ಬಂದೂಕುಧಾರಿಗಳು ನಡೆಸಿದ ಪ್ರತ್ಯೇಕ ಗುಂಡಿನ ದಾಳಿಯಲ್ಲಿ ಏಳು ಮಂದಿ ಮೃತಪಟ್ಟು, ಅರೆಸೇನಾ ಪಡೆಯ ಸೇರಿ 10 ಮಂದಿಗೆ ಗಾಯಗಳಾಗಿವೆ ಎಂದು ಸ್ಥಳೀಯ ಮಾಧ್ಯಮಗಳು ಗುರುವಾರ ವರದಿ ಮಾಡಿವೆ.

ನೈರುತ್ಯ ಭಾಗದ ಇಝೆಹ್ ಎಂಬಲ್ಲಿ ಬುಧವಾರ ನಡೆದ ಗುಂಡಿನ ದಾಳಿಯಲ್ಲಿ ಒಬ್ಬ ಯುವತಿ ಸೇರಿ ಐದು ಮಂದಿ ಸಾವನ್ನಪ್ಪಿದ್ದಾರೆ.

ಇಸ್ಫಹಾನ್ ಎಂಬಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಅರೆಸೇನಾ ಪಡೆಯ ಇಬ್ಬರು ಯೋಧರು ಮೃತಪ-ಟ್ಟಿದ್ದಾರೆ. ಈ ಎರಡೂ ಘಟನೆಗಳಲ್ಲಿ, ದುಷ್ಕರ್ಮಿಗಳೂ ಬೈಕ್‌ನಲ್ಲಿ ಬಂದಿದ್ದರು ಎಂದು ಐಆರ್‌ಎನ್‌ಎ ಸುದ್ದಿಸಂಸ್ಥೆ ವರದಿ ಮಾಡಿದೆ.

ಕಳೆದ ಎರಡು ತಿಂಗಳಿನಿಂದ ರಾಷ್ಟ್ರವ್ಯಾಪಿ ನಡೆಯುತ್ತಿರುವ ಪ್ರತಿಭಟ-ನೆಗಳಿಗೂ ಇದಕ್ಕೂ ಸಂಬಂಧವಿದೆಯೇ ಎಂಬ ಬಗ್ಗೆ ತಕ್ಷಣವೇ ಮಾಹಿತಿ ಇಲ್ಲ ಎಂದು ಮೂಲಗಳು ಹೇಳಿವೆ.

‘ನೇಪಾಳದಲ್ಲಿ ಅತಂತ್ರ ಸಂಸತ್ ಸಾಧ್ಯತೆ’


ಕಠ್ಮಂಡು (ಪಿಟಿಐ): ಸಾರ್ವತ್ರಿಕ ಚುನಾವಣೆಯ ನಂತರ ನೇಪಾಳದಲ್ಲಿ ಅತಂತ್ರ ಸಂಸತ್ ರಚನೆಯಾಗುವ ಸಾಧ್ಯತೆ ಹೆಚ್ಚಾಗಿದೆ. ಅಲ್ಲದೇ, ರಾಜಕೀಯ ಸ್ಥಿರತೆ ಕಂಡುಬರುವ ಸಾಧ್ಯತೆಯೂ ಕಡಿಮೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಸಂಸತ್ ಹಾಗೂ ಪ್ರಾಂತೀಯ ಅಸೆಂಬ್ಲಿಗೆ ಇದೇ 20ರಂದು ಮತದಾನ ನಡೆಯಲಿದೆ. ನೇಪಾಳ ಕಾಂಗ್ರೆಸ್ ನೇತೃತ್ವದ ಪ್ರಜಾಸತ್ತಾತ್ಮಕ ಮೈತ್ರಿಕೂಟ ಮತ್ತು ಹಿಂದೂ-ರಾಜಪ್ರಭುತ್ವ ಪರವಾದ ಮೈತ್ರಿಕೂಟ ನಡುವೆ ಪೈಪೋಟಿ ಇದೆ.

ಸಿಪಿಎನ್-ಮಾವೋವಾದಿ, ಸಿಪಿ-ಎನ್-ಏಕೀಕೃತ ಸಮಾಜವಾದಿ ಮತ್ತು ಲೋಕತಾಂತ್ರಿಕ ಸಮಾಜವಾದಿ ಪಕ್ಷಗಳು ನೇಪಾಳಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂ-ಟದಲ್ಲಿವೆ.

ಹಿಂದೂ ಪರ ರಾಷ್ಟ್ರೀಯ ಪ್ರಜಾತಂತ್ರ ಪಕ್ಷ ಮತ್ತು ಜನತಾ ಸಮಾಜವಾದಿ ಪಕ್ಷಗಳು ಸಿಪಿಎಣ್-ಯುಎಂಎಲ್ ನೇತೃತ್ವದ ಮೈತ್ರಿಕೂಟದ ಅಂಗಪಕ್ಷಗಳಾಗಿವೆ.

ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ನೇತೃತ್ವದ ಆಡಳಿತಾರೂಢ



ಮೈತ್ರಿಕೂಟ ಸಂಸತ್ ಚುನಾವಣೆಯಲ್ಲಿ ಜಯಭೇರಿ ಬಾರಿಸಲಿದ್ದು, ನೇಪಾಳಿ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ ಎಂದು ಭವಿಷ್ಯ ನುಡಿದಿದ್ದಾರೆ.

ಕೆ.ಪಿ.ಶರ್ಮಾ ಓಲಿ ನೇತೃತ್ವದ ಸಿಪಿಎ-ನ್-ಯುಎಂಎಲ್, ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಆದರೆ, ಆ ಮೈತ್ರಿಕೂಟವು ಹೊಸ ಸಂಸತ್ತಿನಲ್ಲಿ ಪ್ರಮುಖ ಪಾಲು ಪಡೆಯುವ ಸಾಧ್ಯತೆಯಿಲ್ಲ ಎಂದೂ ವಿಶ್ಲೇಷಿಸಿದ್ದಾರೆ.

‘ಅಧಿಕ ಸ್ಥಾನ ಗಳಿಸುವ ಮೈತ್ರಿಕೂಟ ಸರ್ಕಾರ ರಚಿಸಲಿದ್ದರೂ ನೇಪಾಳದಲ್ಲಿ ರಾಜಕೀಯ ಸ್ಥಿರತೆ ಒದಗಿಸುವ ಸಾಧ್ಯತೆಯಿಲ್ಲ’ ಎಂದು ಹಿರಿಯ ಪತ್ರಕರ್ತ ಮತ್ತು ರಾಜಕೀಯ ವಿಶ್ಲೇಷಕ ಧ್ರುವ ಅಧಿಕಾರಿ ಹೇಳಿದ್ದಾರೆ.

ಮೆಟಾ ಇಂಡಿಯಾ ಮುಖ್ಯಸ್ಥೆಯಾಗಿ ಸಂಧ್ಯಾ

ನವದೆಹಲಿ (ಪಿಟಿಐ): ಮೆಟಾ ಇಂಡಿಯಾದ ಉಪಾಧ್ಯಕ್ಷೆ ಆಗಿ ಸಂಧ್ಯಾ ದೇವನಾಥನ್ ಅವರನ್ನು ನೇಮಕ ಮಾಡಿರುವುದಾಗಿ ಮೆಟಾ ಕಂಪನಿಯು ಗುರುವಾರ ತಿಳಿಸಿದೆ. ಅಜಿತ್ ಮೋಹನ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸಂಧ್ಯಾ ಅವರನ್ನು ನೇಮಕ ಮಾಡಲಾಗಿದೆ. 2023ರ ಜನವರಿ 1ರಂದು ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ಸಂಧ್ಯಾ ದೇವನಾಥನ್ –ಪಿಟಿಐ ಚಿತ್ರ

2016ರಲ್ಲಿ ಮೆಟಾ ಕಂಪನಿ ಸೇರಿದ ಸಂಧ್ಯಾ, ಸಿಂಗಪುರ ಮತ್ತು ವಿಯೆಟ್ನಾಂ ವಹಿವಾಟಿನ ಬೆಳವಣಿಗೆಗೆ ನೆರವಾಗಿದ್ದಾರೆ. ಅಲ್ಲದೆ, ಆಗ್ನೇಯ ಏಷ್ಯಾದಲ್ಲಿ ಕಂಪನಿಯ ಇ-ಕಾಮರ್ಸ್ ವಹಿವಾಟಿನ ಬೆಳವಣಿಗೆ-ಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ. 2020ರಲ್ಲಿ ಅವರು ಇಂಡೊನೇಷ್ಯಾದಲ್ಲಿ ಎಪಿಎಸಿ ಗೇಮಿಂಗ್‌ನ ಮುಖ್ಯಸ್ಥೆಯಾಗಿ ನೇಮಕ ಆಗಿದ್ದರು.

ನಾಳೆ ಬ್ಯಾಂಕ್ ಮುಷ್ಕರ: ಸೇವೆಯಲ್ಲಿ ವ್ಯತ್ಯಯ ಸಂಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘವು (ಎಐಬಿಇಎ) ಶನಿವಾರ ಮುಷ್ಕರಕ್ಕೆ ಕರೆ ನೀಡಿದೆ. ಇದರ ಪರಿಣಾಮವಾಗಿ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಮಾತ್ರ ಸೇವೆಗಳಲ್ಲಿ ತುಸು ವಿಳಂಬ ಆಗುವ ಸಾಧ್ಯತೆ ಇದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಹೊರಗುತ್ತಿಗೆ ಪದ್ಧತಿಯನ್ನು ವಿರೋಧಿಸಿ ಸಂಘವು ಮುಷ್ಕರ ನಡೆಸಲು ನಿರ್ಧರಿಸಿದೆ.

ಬ್ಯಾಂಕ್‌ಗಳ ಅಧಿಕಾರಿಗಳು ಈ ಮುಷ್ಕರದಲ್ಲಿ ಭಾಗವಹಿಸುವುದಿಲ್ಲ. ಆದರೆ, ನೌಕರರಲ್ಲಿ ಕೆಲವರು ಮುಷ್ಕರದಲ್ಲಿ ಭಾಗವಹಿಸುವುದರಿಂದ ಬ್ಯಾಂಕ್ ಶಾಖೆಗಳಲ್ಲಿ ಸಿಬ್ಬಂದಿ ಸಂಖ್ಯೆ ಕಡಿಮೆ ಇರಲಿದೆ. ಇದರಿಂದಾಗಿ ಸೇವೆಯಲ್ಲಿ ವಿಳಂಬ ಆಗುತ್ತದೆಯೇ ಹೊರತು, ಯಾವುದೇ ಶಾಖೆಯಲ್ಲಿ ಕೆಲಸ ಸ್ಥಗಿತವಾಗುವುದಿಲ್ಲ ಎಂದು ಅಧಿ-ಕಾರಿಯೊಬ್ಬರು ತಿಳಿಸಿದ್ದಾರೆ.

ಶಾಖೆಗಳಲ್ಲಿ ಹಣ ವರ್ಗಾವಣೆ, ಸ್ವೀಕೃತಿ, ಸಾಲ ಮಂಜೂರಾತಿ, ಚೆಕ್ ಕ್ಲಿಯರೆನ್ಸ್ ನಂಥ ಸೇವೆಗಳಲ್ಲಿ ವ್ಯತ್ಯಯ ಆಗುವ ಕುರಿತು ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ಒಳಗೊಂಡು ಹಲವು ಬ್ಯಾಂಕ್‌ಗಳು ಈಗಾಗಲೇ ಗ್ರಾಹಕರಿಗೆ ಸೂಚನೆ ನೀಡಿವೆ ಎಂದು ಪಿಟಿಐ ವರದಿ ಮಾಡಿದೆ.

ಮುಂಬೈ ಧಾರಣೆ

ಶೇಂಗಾ

17–11–2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1560)
ಒಂದು ವಾರದ ಡೆಲಿವರಿ	1545 (1555)
ಸೋಯಾ ಕಚ್ಚಾ	1310 (1345)
ಪಾಮ್ ವಾರದ ಡೆಲಿವರಿ	940 (965)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,650 (52,850)
ಬೆಳ್ಳಿ ಕೆ.ಜಿ 61,100 (62,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-55000
ಚಿತ್ರದುರ್ಗ	
ಆಪಿ	25799-33019
ಬೆಟ್ಟೆ	17189-29999
ಕೆಂಪುಗೋಟು	12019-19299
ರಾಶಿ	29509-33109
ಕುಮಟ	
ಚಿಪ್ಪು	24669-33921
ಕೋಕ	14100-31239
ಹೊಸಚಾಲಿ	25100-33109
ಹಳೆಚಾಲಿ	36169-41600
ಸಾಗರ	
ಬಿಳಿಗೋಟು	16669-30589
ಚಾಲಿ	31599-37009
ಕೋಕ	14989-33649
ಕೆಂಪುಗೋಟು	29899-36899
ರಾಶಿ	39299-47589
ಸಿಪ್ಪೆಗೋಟು	5299-19229
ಶಿವಮೊಗ್ಗ	
ಬೆಟ್ಟೆ	47299-52200
ಗೊಬರಲು	18000-35716
ಹೊಸತು	45082-46599
ರಾಶಿ	45059-47619
ಸರಕು	56619-77130
ಸಿದ್ದಾಪುರ	
ಬಿಳಿಗೋಟು	27699-33899
ಚಾಲಿ	36869-40199
ಕೋಕ	26599-31699
ಕೆಂಪುಗೋಟು	31899-31899
ರಾಶಿ	42099-46549
ತಟ್ಟಿಬೆಟ್ಟೆ	38109-40169
ಶಿರಸಿ	
ಬೆಟ್ಟೆ	35099-45009
ಬಿಳಿಗೋಟು	21899-35299
ಚಾಲಿ	36698-41018
ರಾಶಿ	44518-46699
ಯಲ್ಲಾಪುರ	
ಬಿಳಿಗೋಟು	24299-34219
ಚಾಲಿ	35399-40609
ಕೋಕ	16099-28900
ಕೆಂಪುಗೋಟು	27226-33919
ರಾಶಿ	45090-49499
ತಟ್ಟಿಬೆಟ್ಟೆ	36969-44969
ಮುದ್ರೆಮನೆ ಕಾಫಿ (50ಕೆ.ಜಿಗೆ)	
ಎಪಿ	13500
ಎಸಿ	6890
ಆರ್‌ಪಿ	8500
ಆರ್‌ಸಿ	4530

ಗುಜರಾತ್ ಚುನಾವಣೆ: ಪಕ್ಷಗಳ ಬಲಾಬಲ

ಜನತಂತ್ರದ ಹಬ್ಬ 2022

ಗುಜರಾತ್ ವಿಧಾನಸಭೆ ಚುನಾವಣಾ ಪ್ರಚಾರ ರಂಗೇರಿದೆ. ಬಿಜೆಪಿ ಮತ್ತು ಎಎಪಿ ಅಬ್ಬರದ ಪ್ರಚಾರದ ಮೊರೆ ಹೋಗಿವೆ. ಆದರೆ, ಕಾಂಗ್ರೆಸ್ ಪಕ್ಷವು ಪ್ರಚಾರ ತಂತ್ರವನ್ನು ಬದಲಿಸಿದೆ. ದೊಡ್ಡ ಸಮಾವೇಶ, ಅಬ್ಬರದ ಬದಲಾಗಿ ಮನೆ ಮನೆ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಿದೆ. ಗುಜರಾತ್ ಚುನಾವಣೆಯನ್ನು ಎಎಪಿ ಗಂಭೀರವಾಗಿ ಪರಿಗಣಿಸಿದ್ದರಿಂದಾಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಸತತ ಆರು ಬಾರಿ ಗೆದ್ದಿರುವ ಬಿಜೆಪಿಗೆ ಆಡಳಿತ ವಿರೋಧಿ ಅಲೆಯ ಭಯ ಇದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ದೊಡ್ಡ ಮಟ್ಟದಲ್ಲಿ ನೆರವಾಗಬಹುದು. ವಿವಿಧ ಪಕ್ಷಗಳ ಬಲಾಬಲ ಹೀಗಿವೆ:

ಬಿಜೆಪಿಗೆ 7ನೇ ಬಾರಿ ಅಧಿಕಾರ ದಕ್ಕುವುದೇ?

ಪಶ್ಚಿಮ ಬಂಗಾಳದಲ್ಲಿ ಸಿಪಿಎಂ ನೇತೃತ್ವದ ಎಡಪಕ್ಷಗಳ ಸರ್ಕಾರ ಏಳು ಬಾರಿ ಅಧಿಕಾರ ಹಿಡಿದಿತ್ತು. ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರ ಈಗಾಗಲೇ 6 ಬಾರಿ ಸತತವಾಗಿ ಅಧಿಕಾರ ನಡೆಸಿದ್ದು, ಏಳನೇ ಬಾರಿಯೂ ಅಧಿಕಾರ ಹಿಡಿದರೆ, ಸಿಪಿಎಂ ದಾಖಲೆಯನ್ನು ಸರಿಗಟ್ಟಿದಂತಾಗುತ್ತದೆ. ಆಡಳಿತ ವಿರೋಧಿ ಅಲೆಯ ನಡುವೆಯೂ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸನ್ನೇ ಬಿಜೆಪಿ ನೆಚ್ಚಿಕೊಂಡಿದೆ.

ಅನುಕೂಲಕರ ಅಂಶಗಳು:

- ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ
- ತಳಮಟ್ಟದಲ್ಲಿ ಪಕ್ಷದ ಬಲಿಷ್ಠ ಸಂಘಟನೆ
- ತೀವ್ರವಾದಿ ಹಿಂದುತ್ವ ಹಾಗೂ ಅಭಿವೃದ್ಧಿ ರಾಜಕಾರಣದ ಮಿಶ್ರಣ
- 'ಡಬಲ್ ಎಂಜಿನ್' ಸರ್ಕಾರದಿಂದ ಅಧಿಕ ಲಾಭ ಎಂಬುದಾಗಿ ಮನವರಿಕೆ ಯತ್ನ
- ಪಾಟೀದಾರ್ ಸಮುದಾಯದ ಓಲೈಕೆ ಭಾಗವಾಗಿ ಭೂಪೇಂದ್ರ ಯಾದವ್‌ಗೆ ಮುಖ್ಯಮಂತ್ರಿ ಪಟ್ಟ; ಹಾರ್ದಿಕ್ ಪಟೇಲ್‌ಗೆ ಪ್ರಮುಖ ಸ್ಥಾನ

ಅನನುಕೂಲಕರ ಅಂಶಗಳು:

1. ಸ್ಥಳೀಯ ನಾಯಕರ ಕೊರತೆ
2. ಭ್ರಷ್ಟಾಚಾರದ ಆರೋಪ, ಆಡಳಿತ ವಿರೋಧಿ ಅಲೆ
3. ಹಣದುಬ್ಬರ, ನಿರುದ್ಯೋಗ
4. ಕೋವಿಡ್ ನಿರ್ವಹಣೆ, ಮೋರ್ಬಿ ದುರಂತ
5. ಎಎಪಿಯ ತೀವ್ರ ಸ್ವರೂಪದ ಚುನಾವಣಾ ಪ್ರಚಾರ
6. ಪಕ್ಷದ ಆಂತರಿಕ ಸಂಘರ್ಷ

ಈ ಬಾರಿ ಕಾಂಗ್ರೆಸ್ ಪುನಶ್ಚೇತನ ಆದೀತೇ?

1994–95ರ ಒಂದು ವರ್ಷದ ಅವಧಿಯನ್ನು ಹೊರತುಪಡಿಸಿದರೆ, ಗುಜರಾತ್‌ನಲ್ಲಿ ಕಾಂಗ್ರೆಸ್ ಪಕ್ಷವು 1990ರಿಂದ ಅಧಿಕಾರಕ್ಕೆ ಬಂದಿಲ್ಲ. 1 ವರ್ಷ 24 ದಿನ ಅಧಿಕಾರ ನಡೆಸಿದ್ದ ಛಬೀಲ್‌ದಾಸ್ ಮೆಹ್ತಾ ಅವರು ಕಾಂಗ್ರೆಸ್‌ನ ಕೊನೆಯ ಮುಖ್ಯಮಂತ್ರಿ. ಪ್ರತಿ ವಿಧಾನಸಭಾ ಚುನಾವಣೆಯಲ್ಲಿ ಸ್ಥಾನಗಳು ಹಾಗೂ ಮತ ಪ್ರಮಾಣದಲ್ಲಿ ಸತತವಾಗಿ ಏರಿಕೆ ಕಾಣುತ್ತಿದ್ದರೂ ಕಾಂಗ್ರೆಸ್‌ಗೆ ಅಧಿಕಾರ ಮಾತ್ರ ಮರೀಚಿಕೆಯಾಗಿಯೇ ಉಳಿದಿದೆ

ಅನುಕೂಲಕರ ಅಂಶಗಳು:

- ಸಾಂಪ್ರದಾಯಿಕ ಮತದಾರರ ನಿರಂತರ ಬೆಂಬಲ
- ಒಬಿಸಿ ಸಮುದಾಯಗಳಾದ ಕೋಲಿ, ಠಾಕೂರ್, ಎಸ್‌ಸಿ ಹಾಗೂ ಎಸ್‌ಟಿ, ಮುಸ್ಲಿಂ ಮತದಾರರ ಬೆಂಬಲ
- ಅತೃಪ್ತ ಪಟೇಲ್ ಸಮುದಾಯದ ಬೆಂಬಲ ದೊರೆಯುವ ಸಾಧ್ಯತೆ
- ಕೆಎಚ್‌ಎಎಂ (ಕ್ಷತ್ರಿಯ, ಹರಿಜನ, ಆದಿವಾಸಿ, ಮುಸ್ಲಿಂ) ಸಮೀಕರಣ ಕೆಲಸ ಮಾಡುವ ಸಾಧ್ಯತೆ
- ಗ್ರಾಮೀಣ ಮತ್ತು ಬುಡಕಟ್ಟು ಭಾಗದಲ್ಲಿ ಬೆಂಬಲ ಮುಂದುವರಿಕೆ

ಅನನುಕೂಲಕರ ಅಂಶಗಳು:

1. ಇಡೀ ರಾಜ್ಯವನ್ನು ಪ್ರಭಾವಿಸಬಲ್ಲ ನಾಯಕರ ಕೊರತೆ
2. ರಾಜ್ಯ ಘಟಕದಲ್ಲಿ ಅಂತಃಕಲಹ
3. ನಗರ ಭಾಗದಲ್ಲಿ ಬಿಜೆಪಿ ಪ್ರಭಾವವನ್ನು ಸರಿಗಟ್ಟುವಲ್ಲಿ ವೈಫಲ್ಯ
4. 2017ರಲ್ಲಿ ಪಕ್ಷ ತೊರೆದ 16 ಶಾಸಕರು ಬಿಜೆಪಿ ಸೇರ್ಪಡೆ
5. ಎಎಪಿ ಹಾಗೂ ಎಐಎಂಐಎಂ ಕಾಂಗ್ರೆಸ್ ಮತಗಳನ್ನು ಕಸಿಯಬಹುದು

ಎಎಪಿ ಹೊಡೆತ ಕಾಂಗ್ರೆಸ್‌ಗೋ? ಬಿಜೆಪಿಗೋ?

ಕಳೆದ ಚುನಾವಣೆಯಲ್ಲಷ್ಟೇ ರಾಜ್ಯಕ್ಕೆ ಅಡಿಯಿಟ್ಟಿದ್ದ ಆಮ್ ಆದ್ಮಿ ಪಕ್ಷ (ಎಎಪಿ), 29 ಕ್ಷೇತ್ರಗಳಲ್ಲಷ್ಟೇ ಸ್ಪರ್ಧಿಸಿ ಕೈಸುಟ್ಟುಕೊಂಡಿತ್ತು. ಇದೀಗ ಎಲ್ಲ 182 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಈ ಬಾರಿ ಗಮನಾರ್ಹ ಪ್ರದರ್ಶನ ತೋರಿ, ನಗರ ಭಾಗದಲ್ಲಿ ಹೆಚ್ಚು ಮತ ಪಡೆಯಬಹುದು ಎನ್ನುವ ಅಂದಾಜಿದೆ. ಆದರೆ, ಪಕ್ಷವು ಬಿಜೆಪಿ ಮತಗಳನ್ನು ಕಸಿಯಲಿದೆಯೇ ಅಥವಾ ಕಾಂಗ್ರೆಸ್‌ನ ಮತಬ್ಯಾಂಕ್‌ಗೆ ಕನ್ನ ಹಾಕಲಿದೆಯೇ ಎಂಬುದು ಈಗಿರುವ ಪ್ರಶ್ನೆ. ಪಂಜಾಬ್ ವಿಧಾನಸಭಾ ಚುನಾವಣೆಗೂ ಮುನ್ನ ಭಗವಂತ ಮಾನ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿ ಯಶಸ್ಸು ಕಂಡಿರುವ ಎಎಪಿ, ಗುಜರಾತ್‌ನಲ್ಲಿ ಈಸುದಾನ್ ಗಢವಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಹೆಸರಿಸಿ, ದಾಳ ಉರುಳಿಸಿದೆ


ಅನುಕೂಲಕರ ಅಂಶಗಳು:

- ಮಧ್ಯಮ ವರ್ಗದವರ ಓಲೈಕೆ
- ಕೇಜ್ರಿವಾಲ್ ಅವರ ವರ್ಚಸ್ಸು ಹಾಗೂ ದೆಹಲಿ ಸರ್ಕಾರದ ಮಾದರಿ
- ಉಚಿತ ವಿದ್ಯುತ್, ನೀರು, ಶಿಕ್ಷಣ ಹಾಗೂ ಆರೋಗ್ಯದ ಭರವಸೆ
- ಕೆಲವು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆಲುವಿನ ಬಲ

ಅನನುಕೂಲಕರ ಅಂಶಗಳು:

1. ಬೃಹತ್ ಜನಸಮೂಹ ಸೆಳೆಯಬಲ್ಲ ಸ್ಥಳೀಯ ನಾಯಕರ ಕೊರತೆ
2. ತಳಮಟ್ಟದಲ್ಲಿ ಪಕ್ಷದ ಸಂಘಟನೆ ತೃಪ್ತಿದಾಯಕವಾಗಿಲ್ಲ

ಸ್ಥಾನ ಕುಸಿದರೂ ಬಿಜೆಪಿಗೇ ಚುಕ್ಕಾಣಿ




*99: ಕಾಂಗ್ರೆಸ್ ಶಾಸಕರ ಪಕ್ಷಾಂತರದ ಬಳಿಕ ಬಿಜೆಪಿ ಸಂಖ್ಯಾಬಲ 109ಕ್ಕೆ ಏರಿಕೆ

*77: 'ಕೈ' ಶಾಸಕರ ಪಕ್ಷಾಂತರದ ಬಳಿಕ ಕಾಂಗ್ರೆಸ್ ಸದಸ್ಯಬಲ 60ಕ್ಕೆ ಇಳಿಕೆ

*2017ರಲ್ಲಿ ಎಎಪಿಯ ಯಾವ ಅಭ್ಯರ್ಥಿಯೂ ಗೆದ್ದಿರಲಿಲ್ಲ. ಪಕ್ಷ ಶೇ 0.10ರಷ್ಟು ಮತಗಳನ್ನು ಪಡೆದಿತ್ತು

ಕಾಂಗ್ರೆಸ್ ಮತ ಪ್ರಮಾಣ ಹೆಚ್ಚಳ; ಅಧಿಕಾರ ದೂರ




ಮಹಾರಾಷ್ಟ್ರದಲ್ಲಿ 'ಭಾರತ್ ಜೋಡೊ ಯಾತ್ರೆ' ಅಂತ್ಯ ● ರಾಹುಲ್ ಹೇಳಿಕೆಗೆ ಬಿಜೆಪಿ ಆಕ್ರೋಶ

'ಬ್ರಿಟಿಷರಿಗೆ ಸಾವರ್ಕರ್ ಕ್ಷಮಾದಾನ ಪತ್ರ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಿಂದುತ್ವವಾದಿ ವಿ.ಡಿ. ಸಾವರ್ಕರ್ ಅವರು ಬ್ರಿಟಿಷರಿಗೆ ಸಹಾಯ ಮಾಡಿದ್ದರು. ಅಲ್ಲದೆ, ಕ್ಷಮಾದಾನ ಕೋರಿ ಪತ್ರವನ್ನೂ ಬರೆದಿದ್ದರು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ.



ರಾಹುಲ್ ಗಾಂಧಿ

ಮಹಾರಾಷ್ಟ್ರದ ಅಕೋಲಾದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವರ್ಕರ್ ಬರೆದಿದ್ದರು ಎನ್ನಲಾದ ಪತ್ರ ಪ್ರದರ್ಶಿಸಿದರು. ಪತ್ರದ ಕಡೆಯಲ್ಲಿ 'ನಾನು ನಿಮ್ಮ ನಿಷ್ಠಾವಂತ ಸೇವಕ ಎಂದಿದೆ' ಎಂದೂ ಓದಿದರು.

ಮಹಾರಾಷ್ಟ್ರದಲ್ಲಿ 'ಭಾರತ್ ಜೋಡೊ' ಯಾತ್ರೆಯ ಕಡೆಯ ದಿನದಂದು ಸುದ್ದಿಗಾರರ ಜೊತೆಗೆ ಮಾತನಾಡಿ, ದೇಶದಲ್ಲಿ ಪ್ರಸ್ತುತ ಮಹಾತ್ಮಗಾಂಧಿ ಮತ್ತು ವಿ.ಡಿ. ಸಾವರ್ಕರ್ ಅವರ ಚಿಂತನೆಗಳ ನಡುವೆ ಸಂಘರ್ಷವಿದೆ ಎಂದು ಹೇಳಿದರು.

ಸಾವರ್ಕರ್ ಅವರನ್ನು ಕುರಿತ ರಾಹುಲ್‌ಗಾಂಧಿ ಅವರ ಹೇಳಿಕೆಗೆ ನನ್ನ ಸಹಮತವಿಲ್ಲ ಎಂದು ಶಿವಸೇನೆ ನಾಯಕ ಉದ್ಧವ್ ಠಾಕ್ರೆ ಅವರ ಹೇಳಿಕೆಯ ಹಿಂದೆಯೇ ರಾಹುಲ್ ಈ ಪತ್ರವನ್ನು ಪ್ರದರ್ಶಿಸಿದ್ದಾರೆ.

ಭೀತಿ ಇದ್ದ ಕಾರಣ ಅವರು ಕ್ಷಮಾದಾನ ಪತ್ರಕ್ಕೆ ಸಹಿ ಹಾಕಿದ್ದರು. ಹೀಗೇ ಮಾಡುವ ಮೂಲಕ ಅವರು ಮಹಾತ್ಮ ಗಾಂಧಿ, ಜವಹರಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್ ಮತ್ತು ಇತರರಿಗೆ ವಂಚಿಸಿದ್ದರು ಎಂದು ಟೀಕಿಸಿದರು.

ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೂ ತಳ್ಳಿಹಾಕಿದ್ದು, 'ರಾಹುಲ್ ಅವರು ನಾಚಿಕೆಯೂ ಇಲ್ಲದೇ ಸುಳ್ಳು ಹೇಳುತ್ತಿದ್ದಾರೆ' ಎಂದು ಖಂಡಿಸಿದ್ದರು.

'ಸಾವರ್ಕರ್ ಅವರು ಬರೆದಿದ್ದ ಪತ್ರವನ್ನು ಫಡಣವೀಸ್ ಅವರೂ ಓದಬಹುದು. ಈ ವಿಷಯದಲ್ಲಿ ನನ್ನ ನಿಲುವು ಸ್ಪಷ್ಟವಾಗಿದೆ. ಸಾವರ್ಕರ್ ಅವರು ಬ್ರಿಟಿಷಿಗೆ ನೆರವಾಗಿದ್ದರು' ಎಂದು ಹೇಳಿದರು.

ಹಲವು ಕಾಂಗ್ರೆಸ್ಸಿಗರು ಬಿಜೆಪಿ ಸೇರುತ್ತಿದ್ದಾರೆ ಎಂಬ ಪ್ರಶ್ನೆಗೆ, 'ಇಂತಹ ಬೆಳವಣಿಗೆಗಳ ಮೂಲಕ ವಿರೋಧಪಕ್ಷವು ಸ್ವಚ್ಛವಾಗುತ್ತಿದೆ. ಬಿಜೆಪಿಗೆ ಹಣಕ್ಕಾಗಿ ಮಾರಿಕೊಳ್ಳುತ್ತಿರುವವರು ಹೋಗುತ್ತಿದ್ದಾರೆ. ಭ್ರಷ್ಟರಾದವರಿಗೆ ₹20ರಿಂದ 50 ಕೋಟಿವರೆಗೂ ಕೊಟ್ಟು ಕರೆಸಿಕೊಳ್ಳಲಾಗುತ್ತಿದೆ. ಪ್ರಾಮಾಣಿಕರಾದವರು ನಮ್ಮೊಂದಿಗೆ ಸೇರುತ್ತಾರೆ' ಎಂದರು.

ಬಿಜೆಪಿ ದೇಶದಲ್ಲಿ ದ್ವೇಷ, ಭೀತಿ, ಹಿಂಸೆಯ ವಾತಾವರಣ ಸೃಷ್ಟಿಸುತ್ತಿದೆ. ಬಿಜೆಪಿಗೆ ಪ್ರತಿಪಕ್ಷಗಳು ಎದುರಿಸಲಾಗದು ಎಂಬ ನಂಬಿಕೆ ಇದೆ. 'ವಿರೋಧಪಕ್ಷಗಳು ಮಾಧ್ಯಮ, ನ್ಯಾಯಾಂಗ ಮತ್ತು ಇತರೆ ಸಂಸ್ಥೆಗಳನ್ನು ನಿಯಂತ್ರಿಸಲಾಗದ ಕಾರಣ ಈ ನಂಬಿಕೆಯು ಮೇಲ್ನೋಟಕ್ಕೆ ನಿಜವೂ ಹೌದು' ಎಂದು ರಾಹುಲ್ ಹೇಳಿದರು.

ಸಾವರ್ಕರ್‌ಗೆ ಅವಮಾನ: ದೂರು

ಮುಂಬೈ (ಪಿಟಿಐ): ಸ್ವಾತಂತ್ರ್ಯಹೋರಾಟಗಾರ ವಿ.ಡಿ.ಸಾವರ್ಕರ್ ಅವರಿಗೆ ರಾಹುಲ್ ಗಾಂಧಿ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಅವರ ಮೊಮ್ಮಗ ರಂಜಿತ್ ಸಾವರ್ಕರ್ ಅವರು ಇಲ್ಲಿನ ಶಿವಾಜಿಪಾರ್ಕ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಸಾವರ್ಕರ್ ಅವರನ್ನು ಅವಮಾನಿಸಿ ಹೇಳಿಕೆ ನೀಡಿರುವ ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ವಿರುದ್ಧವೂ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಕುರಿತು ಎಫ್‌ಐಆರ್ ದಾಖಲಾಗಿಲ್ಲ.

ಯಾತ್ರೆಯಲ್ಲಿ ನೇಪಾಳದ ರಾಷ್ಟ್ರಗೀತೆ!

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತ್ ಜೋಡೊ ಯಾತ್ರೆಯಲ್ಲಿ ಬುಧವಾರ ರಾತ್ರಿ ಭಾರತದ ರಾಷ್ಟ್ರ ಗೀತೆ ಬದಲಿಗೆ ನೇಪಾಳದ ರಾಷ್ಟ್ರ ಗೀತೆ ಕೇಳಿಬಂದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅನ್ನು ಬಿಜೆಪಿ ಮುಖಂಡರು ಟೀಕಿಸಿದ್ದಾರೆ.

ಮಹಾರಾಷ್ಟ್ರದ ವಾಶಿಮ್‌ನಲ್ಲಿ ಬುಧವಾರ ರಾತ್ರಿ ರಾಹುಲ್ ಗಾಂಧಿ ಅವರ ಭಾಷಣ ಇತ್ತು. ಭಾಷಣ ಮುಗಿದ ಬಳಿಕ, ರಾಹುಲ್ ಅವರು 'ಈಗ ರಾಷ್ಟ್ರ ಗೀತೆ ಹಾಕಲಿದ್ದಾರೆ' ಎಂದು ವೇದಿಕೆಯಲ್ಲಿ ನಿಂತುಕೊಂಡರು. ಆದರೆ, ಭಾರತದ ರಾಷ್ಟ್ರ ಗೀತೆ ಬದಲಿಗೆ, ನೇಪಾಳದ ರಾಷ್ಟ್ರ ಗೀತೆ ಕೇಳಿಬಂದಿತು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತು ಎಂದು ಎನ್‌ಡಿಟಿವಿ ವರದಿ ಮಾಡಿದೆ.

ವೇದಿಕೆಯಲ್ಲಿ ನಿಂತಿದ್ದ ರಾಹುಲ್ ಸೇರಿದಂತೆ ಹಲವು ಮುಖಂಡರು ಒಂದು ಕ್ಷಣ ಅವಕ್ಕಾದರು. ಮಹಾರಾಷ್ಟ್ರದ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ, ಮೊಬೈಲ್‌ನಲ್ಲಿ ಹಾಡು ಹಾಕಿದ ವ್ಯಕ್ತಿಯನ್ನು ಕರೆದು, ಹಾಡನ್ನು ನಿಲ್ಲಿಸುವಂತೆ ಹೇಳಿದರು. ನಂತರ ಭಾರತದ ರಾಷ್ಟ್ರ ಗೀತೆಯನ್ನು ಹಾಕಲಾಯಿತು.

ಬಿಜೆಪಿ ಟೀಕೆ: ಕಾಂಗ್ರೆಸ್ ನಾಯಕ ರಾಹುಲ್ ಅವರು ರಾಷ್ಟ್ರ ಗೀತೆಗೆ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ. ತಮಿಳುನಾಡಿನ ಬಿಜೆಪಿ ಮುಖಂಡ ಅಮರ್ ಪ್ರಸಾದ್ ರೆಡ್ಡಿ ಅವರು ವಿಡಿಯೊವನ್ನು ಟ್ವೀಟ್ ಮಾಡಿ, 'ರಾಹುಲ್ ಗಾಂಧಿ, ಏನಿದು?' ಎಂದಿದ್ದಾರೆ.



ಮಹಾರಾಷ್ಟ್ರದ ಅಕೋಲಾ ಜಿಲ್ಲೆಯಲ್ಲಿ ಗುರುವಾರ ಸಾಗಿದ 'ಭಾರತ್ ಜೋಡೊ ಯಾತ್ರೆ'ಯಲ್ಲಿ ರಾಹುಲ್ ಗಾಂಧಿ ಅವರೊಂದಿಗೆ ಬಾಲಿವುಡ್ ನಟಿ ರಿಯಾ ಸೇನ್ ಹೆಜ್ಜೆ ಹಾಕಿದರು – ಪಿಟಿಐ ಚಿತ್ರ

ಕೊಲಿಜಿಯಂ ವ್ಯವಸ್ಥೆ ವಿರುದ್ಧದ ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನೇಮಕಕ್ಕಾಗಿ ಇರುವ ಕೊಲಿಜಿಯಂ ವ್ಯವಸ್ಥೆಯನ್ನು ರದ್ದುಪಡಿಸಿ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗವನ್ನು (ಎನ್‌ಜೆಎಸಿ) ಪುನಶ್ಚೇತನಗೊಳಿಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಗುರುವಾರ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಜೆ.ಬಿ. ಪಾರ್ದೀವಾಲಾ ಅವರನ್ನು ಒಳಗೊಂಡ ನ್ಯಾಯಪೀಠದ ಮುಂದೆ ವಕೀಲ ಮ್ಯಾಥ್ಯೂಸ್ ಜೆ ನೆಡುಂಪಾರ ಅರ್ಜಿ ಸಲ್ಲಿಸಿದ್ದಾರೆ.

ಎನ್‌ಜೆಎಸಿ ಪ್ರಕರಣದಲ್ಲಿ ಸಂವಿಧಾನ ಪೀಠವು (2015) ನೀಡಿರುವ ತೀರ್ಪನ್ನು ರಿಟ್ ಅರ್ಜಿ ಮೂಲಕ ಮರುಪರಿಶೀಲನೆಗೆ ಒಳಪಡಿಸಲು ಸಾಧ್ಯವೇ ಎಂದು ಪೀಠವು ಪ್ರಶ್ನಿಸಿದೆ. ಹಾಗಿದ್ದರೂ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಲು ಒಪ್ಪಿಕೊಂಡಿದೆ.

ಮುಖ್ಯ ನ್ಯಾಯಮೂರ್ತಿ ಅಧ್ಯಕ್ಷತೆ ವಹಿಸಲಿರುವ ಕೊಲಿಜಿಯಂನಲ್ಲಿ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿಗಳ ಪುತ್ರ ಅಥವಾ ಸೋದರಳಿಯಂದಿರಾಗಿರುವ ಮೂವರು ನ್ಯಾಯಮೂರ್ತಿಗಳು ಇದ್ದಾರೆ ಎಂದು ಮನವಿಯಲ್ಲಿ ಹೇಳಲಾಗಿದೆ.

'ಕೋವ್ಯಾಕ್ಸಿನ್ ಅನುಮೋದನೆ: ರಾಜಕೀಯ ಒತ್ತಡಕ್ಕೆ ಮಣಿದಿಲ್ಲ'

ನವದೆಹಲಿ (ಪಿಟಿಐ): 'ರಾಜಕೀಯ ಒತ್ತಡಕ್ಕೆ ಮಣಿದು ಕೋವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ಕೊಟ್ಟಿಲ್ಲ. ಈ ಕುರಿತು ಮಾಧ್ಯಮಗಳಲ್ಲಿ ಬಿತ್ತರವಾಗಿರುವ ಸುದ್ದಿಗಳು ಸತ್ಯಕ್ಕೆ ದೂರವಾಗಿವೆ. ಅವು ನಾಗರಿಕರ ದಾರಿ ತಪ್ಪಿಸುವಂತಿವೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ಸ್ಪಷ್ಟನೆ ನೀಡಿದೆ.

'ಕೋವ್ಯಾಕ್ಸಿನ್ ಲಸಿಕೆ ತಯಾರಿಸಿದ್ದ ಭಾರತ್ ಬಯೋಟೆಕ್ ಕಂಪನಿಯು ರಾಜಕೀಯ ಒತ್ತಡಕ್ಕೆ ಮಣಿದು ಕೆಲ ಪ್ರಕ್ರಿಯೆಗಳನ್ನು ಕೈಬಿಟ್ಟಿತ್ತು. ತರಾತುರಿಯಲ್ಲಿ ಕ್ಲಿನಿಕಲ್ ಟ್ರಯಲ್ಸ್ ನಡೆಸಿತ್ತು. ಮೂರು ಹಂತದ ಕ್ಲಿನಿಕಲ್ ಟ್ರಯಲ್ಸ್ ವೇಳೆ ಹಲವು ನಿಯಮಗಳನ್ನು ಉಲ್ಲಂಘಿಸಲಾಗಿತ್ತು' ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ.

ಇದನ್ನು ತಳ್ಳಿ ಹಾಕಿರುವ ಸಚಿವಾಲಯ, 'ಮಾಧ್ಯಮಗಳ ವರದಿಗಳು ಸುಳ್ಳು. ಕೇಂದ್ರ ಸರ್ಕಾರ ಹಾಗೂ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ (ಸಿಡಿಎಸ್‌ಸಿಒ) ವೈಜ್ಞಾನಿಕ ವಿಧಾನ ಹಾಗೂ ನಿಗದಿತ ಮಾನದಂಡಗಳಿಗೆ ಬದ್ಧವಾಗಿಯೇ ಕೋವ್ಯಾಕ್ಸಿನ್‌ನ ತುರ್ತು ಮತ್ತು ನಿರ್ಬಂಧಿತ ಬಳಕೆಗೆ ಅನುಮತಿ ನೀಡಿದ್ದವು' ಎಂದಿದೆ.

'ಬಾಹ್ಯ ಒತ್ತಡ ಇರಲಿಲ್ಲ'

ಹೈದರಾಬಾದ್ (ಪಿಟಿಐ): 'ಲಸಿಕೆಯನ್ನು ತುರ್ತಾಗಿ ಅಭಿವೃದ್ಧಿಪಡಿಸುವ ವಿಚಾರದಲ್ಲಿ ತನ್ನ ಮೇಲೆ ಬಾಹ್ಯ ಒತ್ತಡ ಇರಲಿಲ್ಲ' ಎಂದು ಭಾರತ್ ಬಯೋಟೆಕ್ ಕಂಪನಿ ಗುರುವಾರ ಸ್ಪಷ್ಟಪಡಿಸಿದೆ.

'ಲಸಿಕೆ ತಯಾರಿಕೆ ವಿಚಾರದಲ್ಲಿ ಪರಿಣತಿ ಇಲ್ಲದವರು ಹಾಗೂ ವ್ಯಾಕ್ಸಿನಾಲಜಿ ಬಗ್ಗೆ ಗೊತ್ತಿಲ್ಲದ ಕೆಲವರು ಈ ರೀತಿ ಸುಳ್ಳು ಹಬ್ಬಿಸುತ್ತಿದ್ದಾರೆ. ಅದನ್ನೇ ಇಟ್ಟುಕೊಂಡು ಮಾಧ್ಯಮಗಳು ವರದಿ ಮಾಡಿವೆ. ಜನರ ಜೀವ ಉಳಿಸುವ ದಿಸೆಯಲ್ಲಿ ಸುರಕ್ಷಿತ ಮತ್ತು ಪರಿಣಾಮಕಾರಿ ಲಸಿಕೆ ಅಭಿವೃದ್ಧಿಪಡಿಸುವುದು ನಮ್ಮ ಗುರಿಯಾಗಿತ್ತು. ಈ ವಿಚಾರದಲ್ಲಿ ಆಂತರಿಕ ಒತ್ತಡ ಇತ್ತೇ ಹೊರತು ಹೊರಗಿನವರಿಂದ ಯಾವ ಒತ್ತಡವೂ ಇರಲಿಲ್ಲ' ಎಂದೂ ಹೇಳಿದೆ.

ವಾಯುಭಾರ ಕುಸಿತ ಚೆನ್ನೈನಲ್ಲಿ ಮಳೆ ಸಾಧ್ಯತೆ

ಚೆನ್ನೈ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಗುರುವಾರ ವಾಯುಭಾರ ಕುಸಿತು ಉಂಟಾಗಿದ್ದು, ಇದು ಚಂಡಮಾರುತವಾಗಿ ಪರಿವರ್ತನೆಯಾಗಿ ಶನಿವಾರದ ಹೊತ್ತಿಗೆ ತಮಿಳುನಾಡಿನ ಕರಾವಳಿಗೆ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಸಿದೆ.

ಮುಂದಿನ 3 ದಿನಗಳಲ್ಲಿ ತಮಿಳುನಾಡು, ಪುದುಚೇರಿ ಮತ್ತು ಆಂಧ್ರ ಪ್ರದೇಶದತ್ತ ಚಂಡಮಾರುತ ಸಾಗಲಿದೆ.

'ಅಧಿಕಾರಕ್ಕೆ ಬರದಿದ್ದರೆ 2024ರ ಚುನಾವಣೆಯೇ ಕಡೆಯದು'

ಕರ್ನೂಲ್ (ಎಪಿ): '2024ರ ಸಾರ್ವತ್ರಿಕ ಚುನಾವಣೆಯಲ್ಲಿ ತೆಲುಗು ದೇಶಂ ಪಕ್ಷಕ್ಕೆ (ಟಿಡಿಪಿ) ಮತದಾರರು ಅಧಿಕಾರವನ್ನು ನೀಡದಿದ್ದರೆ, ಅದೇ ತಮ್ಮ ಕಡೆಯ ಚುನಾವಣೆಯೂ ಆಗಲಿದೆ' ಎಂದು ಪಕ್ಷದ ಅಧ್ಯಕ್ಷ, ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಹೇಳಿದ್ದಾರೆ.



ಚಂದ್ರಬಾಬು ನಾಯ್ಡು

ಬುಧವಾರ ರಾತ್ರಿ ಇಲ್ಲಿ ನಡೆದ ರೋಡ್‌ಷೋ ವೇಳೆ ಭಾವನಾತ್ಮಕವಾಗಿ ಮಾತನಾಡಿದ ಅವರು, 'ಪಕ್ಷ ಅಧಿಕಾರಕ್ಕೆ ಬರುವವರೆಗೆ ವಿಧಾನಸಭೆ ಮೆಟ್ಟಿಲೇರುವುದಿಲ್ಲ' ಎಂಬ ತಮ್ಮ ಪ್ರತಿಜ್ಞೆಯನ್ನು ಪುನರುಚ್ಚರಿಸಿದರು.

'ವಿಧಾನಸಭೆಗೆ ನಾನು ಮತ್ತೆ ಹೋಗಬೇಕಾದರೆ, ರಾಜಕಾರಣದಲ್ಲೇ ಉಳಿಯಬೇಕಾದರೆ ಮತ್ತು ಆಂಧ್ರಕ್ಕೆ ನ್ಯಾಯ ಒದಗಿಸಲು, ಮುಂದಿನ ಚುನಾವಣೆಯಲ್ಲಿ ನೀವು ಪಕ್ಷವನ್ನು ಗೆಲ್ಲಿಸುವ ಖಾತರಿ ನೀಡಬೇಕು. ಇಲ್ಲವಾದಲ್ಲಿ 2024ರ ಚುನಾವಣೆಯೇ ನನ್ನ ಕಡೇ ಚುನಾವಣೆಯಾಗಲಿದೆ' ಎಂದು ಮತದಾರರನ್ನು ಉದ್ದೇಶಿಸಿ ಹೇಳಿದರು. 'ನೀವು ನಮಗೆ ಆಶೀರ್ವಾದ ಮಾಡುತ್ತೀರಾ? ನನ್ನ ಮೇಲೆ ವಿಶ್ವಾಸ ಇದೆಯಾ' ಎಂದು ಪ್ರಶ್ನಿಸಿದರು.

ಎಎಪಿ ನಾಯಕ ಸತ್ಯೇಂದ್ರ ಜೈನ್‌ಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪ ಎದುರಿಸುತ್ತಿರುವ ಎಎಪಿ ನಾಯಕ ಸತ್ಯೇಂದ್ರ ಜೈನ್ ಮತ್ತು ಇತರ ಇಬ್ಬರು ಆರೋಪಿಗಳ ಜಾಮೀನು ಅರ್ಜಿಯನ್ನು ದೆಹಲಿ ನ್ಯಾಯಾಲಯ ಗುರುವಾರ ವಜಾಗೊಳಿಸಿದೆ.

ಮೂರು ಜಾಮೀನು ಅರ್ಜಿಗಳನ್ನು ವಜಾ ಮಾಡಲಾಗಿದೆ ಎಂದು ವಿಶೇಷ ನ್ಯಾಯಧೀಶ ವಿಕಾಸ್ ಧುಲ್ ತಿಳಿಸಿದ್ದಾರೆ.

ವೈಭವ್ ಜೈನ್ ಮತ್ತು ಅಂಕುಶ್ ಜೈನ್ ಹಾಗೂ ಜಾರಿ ನಿರ್ದೇಶನಾಲಯದ (ಇ.ಡಿ) ವಾದ, ಪ್ರತಿವಾದಗಳನ್ನು ಆಲಿಸಿದ ನ್ಯಾಯಾಧೀಶರು ಆದೇಶವನ್ನು ಕಾಯ್ದಿರಿಸಿದ್ದರು.

ಮಲಾನ್ ಶತಕ ವ್ಯರ್ಥ; ಮಿಂಚಿದ ವಾರ್ನರ್, ಸ್ಮಿತ್

ಕ್ರಿಕೆಟ್: ಆಸ್ಟ್ರೇಲಿಯಾ ಜಯಭೇರಿ

ಅಡಿಲೇಡ್ (ಎಎಫ್‌ಪಿ): ಡೇವಿಡ್ ವಾರ್ನರ್ ಹಾಗೂ ಸ್ಟೀವನ್ ಸ್ಮಿತ್ ಅವರ ಉತ್ತಮ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಗುರುವಾರ ಇಲ್ಲಿ ನಡೆದ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 6 ವಿಕೆಟ್‌ಗಳಿಂದ ಜಯಿಸಿತು.

ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಡೇವಿಡ್ ಮಲಾನ್ (134; 128ಎ, 4X12, 6X4) ಚೆಂದದ ಶತಕದ ಬಲದಿಂದ ಇಂಗ್ಲೆಂಡ್ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 287 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡಕ್ಕೆ ವಾರ್ನರ್ (86; 84ಎ) ಹಾಗೂ ಟ್ರಾವಿಸ್ ಹೆಡ್ (69; 57ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 147 ರನ್ ಸೇರಿಸಿದರು. ಹೆಡ್ ವಿಕೆಟ್ ಗಳಿಸಿದ ಕ್ರಿಸ್ ಜೋರ್ಡಾನ್ ಜೊತೆಯಾಟ ಮುರಿದರು. ಕ್ರೀಸ್‌ಗೆ ಬಂದ ಸ್ಟೀವ್ (80; 78ಎ) ಅಬ್ಬರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ವಾರ್ನರ್ ಅವರೊಂದಿಗೆ 53 ರನ್ ಸೇರಿಸಿದರು. ವಾರ್ನರ್ ಔಟಾದ ನಂತರ ತಂಡವನ್ನು ಗೆಲುವಿನ ದಡ ಸೇರಿಸುವ ಹೊಣೆಯನ್ನು ನಿಭಾಯಿಸಿದರು. ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ 1–0 ಮುನ್ನಡೆ ಸಾಧಿಸಿತು.




ಡೇವಿಡ್ ಮಲಾನ್ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರ್‌ಗಳಲ್ಲಿ 9ಕ್ಕೆ287 (ಡೇವಿಡ್ ಮಲಾನ್ 134, ಜಾಸ್ ಬಟ್ಲರ್ 29, ಡೇವಿಡ್ ವಿಲ್ಲಿ ಔಟಾಗದೆ 34, ಪ್ಯಾಟ್ ಕಮಿನ್ಸ್ 62ಕ್ಕೆ3, ಆ್ಯಡಂ ಜಂಪಾ 55ಕ್ಕೆ3)

ಆಸ್ಟ್ರೇಲಿಯಾ: 46.5 ಓವರ್‌ಗಳಲ್ಲಿ 4ಕ್ಕೆ291 (ಡೇವಿಡ್ ವಾರ್ನರ್ 86, ಟ್ರಾವಿಸ್ ಹೆಡ್ 69, ಸ್ಟೀವನ್ ಸ್ಮಿತ್ ಔಟಾಗದೆ 80, ಅಲೆಕ್ಸ್ ಕ್ಯಾರಿ 21, ಕ್ಯಾಮರಾನ್ ಗ್ರೀನ್ ಔಟಾಗದೆ 20, ಡೇವಿಡ್ ವಿಲಿ 51ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 6 ವಿಕೆಟ್‌ಗಳ ಜಯ.

ಬ್ಯಾಸ್ಕೆಟ್‌ಬಾಲ್ ದಂತಕಥೆ ಅಬ್ಬಾಸ್ ನಿಧನ

ಬೆಂಗಳೂರು / ಮುಂಬೈ: ಭಾರತ ಬ್ಯಾಸ್ಕೆಟ್ ಬಾಲ್ ತಂಡದ ಮಾಜಿ ನಾಯಕ ಗುಲಾಮ್ ಅಬ್ಬಾಸ್ ಮುಂತಾಸಿರ್ (80) ದೀರ್ಘ ಕಾಲದ ಅನಾರೋಗ್ಯದಿಂದಾಗಿ ಮಂಗಳವಾರ ರಾತ್ರಿ ಮುಂಬೈನಲ್ಲಿ ನಿಧನರಾದರು.



ಅಬ್ಬಾಸ್

ಅವರಿಗೆ ಪತ್ನಿ, ಮಗಳು ಹಾಗೂ ಅಣ್ಣ ಇದ್ದಾರೆ.


1969 ಹಾಗೂ 1975ರಲ್ಲಿ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಅಬ್ಬಾಸ್ ಅವರು ಭಾರತ ತಂಡವನ್ನು ಮುನ್ನಡೆಸಿದ್ದರು. 1970ರಲ್ಲಿ ಅವರು ಏಷ್ಯನ್ ಆಲ್ ಸ್ಟಾರ್ ತಂಡದಲ್ಲಿಯೂ ಸ್ಥಾನ ಪಡೆದಿದ್ದರು. ಅದೇ ವರ್ಷ ಅವರಿಗೆ ಅರ್ಜುನ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.

ಮಿಂಚಿನ ವೇಗದ ಆಟಕ್ಕೆ ಹೆಸರಾಗಿದ್ದ ಅಬ್ಬಾಸ್ ಅವರದ್ದು ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಅಚ್ಚಳಿಯದ ಹೆಸರು. ಮುಂಬೈ ಹಾಗೂ ರೈಲ್ವೆ ತಂಡಗಳ ಪ್ರಮುಖ ಆಟಗಾರರಾಗಿದ್ದರು.

ಶ್ರದ್ಧಾ ಹತ್ಯೆ ಪ್ರಕರಣ: ಅಫ್ತಾಬ್ ಐದು ದಿನ ಪೊಲೀಸ್ ಕಸ್ಟಡಿಗೆ

ಮಂಪರು ಪರೀಕ್ಷೆಗೆ ಕೋರ್ಟ್ ಅಸ್ತು

ನವದೆಹಲಿ (ಪಿಟಿಐ): ಸಹಜೀವನ ಸಂಗಾತಿ ಬರ್ಬರ ಹತ್ಯೆ ಮಾಡಿದ ಆರೋಪಿ ಅಫ್ತಾಬ್ ಅಮೀನ್ ಪೂಲಾವಾಲಾನನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲು ದೆಹಲಿ ನ್ಯಾಯಾಲಯವು ಗುರುವಾರ ಮತ್ತೆ ಐದು ದಿನಗಳವರೆಗೆ ಮಹರೌಲಿ ನಗರ ಪೊಲೀಸ್ ಕಸ್ಟಡಿಗೆ ನೀಡಿದ್ದು, ಅಫ್ತಾಬ್ ಮಂಪರು ಪರೀಕ್ಷೆಗೂ ಅನುಮತಿ ಕೊಟ್ಟಿದೆ.



ಅಫ್ತಾಬ್ ಅಮೀನ್

ಈ ಪ್ರಕರಣ ಸಂಬಂಧ ಪೊಲೀಸರು ಆರೋಪಿಯ ಮಂಪರು ಪರೀಕ್ಷೆ ನಡೆಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವಿರಲ್ ಶುಕ್ಲಾ ಅವರು ಆದೇಶ ಹೊರಡಿಸಿದರು.

ಅಫ್ತಾಬ್‌ಗೆ ಮರಣದಂಡನೆ; ವಕೀಲರ ಆಗ್ರಹ: ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿ ಅಫ್ತಾಬ್‌ಗೆ ಮರಣ ದಂಡನೆ ವಿಧಿಸುವಂತೆ ಒತ್ತಾಯಿಸಿ ಸಾಕೇತ್ ಜಿಲ್ಲಾ ನ್ಯಾಯಾಲಯಗಳ ವಕೀಲರ ಸಮೂಹ ಗುರುವಾರ ಪ್ರತಿಭಟನೆ ನಡೆಸಿತು.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವಿರಲ್ ಶುಕ್ಲಾ ಅವರ ಎದುರು ಆರೋಪಿಯನ್ನು ಹಾಜರುಪಡಿಸುವ ಮಾಹಿತಿ ಹೊರಬಿದ್ದಂತೆ, ನ್ಯಾಯಾಲಯದ ಆವರಣದಲ್ಲಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ವಕೀಲರ ಗುಂಪು ಜಮಾಯಿಸಿತು.

ಪ್ರತಿಭಟನನಿರತರ ಪರ ಮಾತನಾಡಿದ ಸುರೇಂದ್ರ ಕುಮಾರ್, 'ಆರೋಪಿಯ ಘೋರ ಅಪರಾಧದ ವಿರುದ್ಧ ಪ್ರತಿಭಟಿಸುತ್ತಿದ್ದೇವೆ. ಈ ಪ್ರಕರಣ ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಆದಷ್ಟು ಶೀಘ್ರ ಆರೋಪಿಗೆ ಶಿಕ್ಷೆಯಾಗಬೇಕು' ಎಂದು ಹೇಳಿದರು.

ಆರೋಪಿಯನ್ನು ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ಕೋರ್ಟ್‌ಗೆ ಹಾಜರುಪಡಿಸಲು ದೆಹಲಿ ಪೊಲೀಸರಿಗೆ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವರು ಬುಧವಾರವೇ ಅನುಮತಿ ನೀಡಿದ್ದರು.

ಕೊಲೆ ರಹಸ್ಯ ಭೇದಿಸಲು ನೆರವಾದ ಶ್ರದ್ಧಾ ಸಕ್ರಿಯ ಖಾತೆ

ಆರೋಪಿಯನ್ನು 'ಚತುರ' ಎಂದಿರುವ ಪೊಲೀಸರು, ಆತನಿಗೆ ಹಿಂದಿ ಗೊತ್ತಿದ್ದರೂ ವಿಚಾರಣೆ ವೇಳೆ ಇಂಗ್ಲಿಷಿನಲ್ಲಿ ಸರಾಗವಾಗಿ ಉತ್ತರಿಸುತ್ತಿದ್ದ. ಅದೃಷ್ಟದಿಂದ ಪಾರಾಗಬಹುದೆಂದು ಭಾವಿಸಿದ್ದ, ಆದರೆ ಅಷ್ಟರಲ್ಲಿ ಆತನ ಮನೆ ಬಾಗಿಲು ತಟ್ಟಿದೆವು. ಸಾಮಾಜಿಕ ಮಾಧ್ಯಮದಲ್ಲಿನ ಶ್ರದ್ಧಾ ಅವರ ಖಾತೆಯಲ್ಲಿ ಆರೋಪಿ ಸಕ್ರಿಯವಾಗಿದ್ದುದೇ ಶ್ರದ್ಧಾ ನಾಪತ್ತೆ– ಭೀಕರ ಹತ್ಯೆಯ ರಹಸ್ಯ ಭೇದಿಸಲು ನೆರವಾಯಿತು ಎನ್ನುತ್ತಾರೆ.

ತನಿಖೆಯಲ್ಲಿ ಮೈಜುಮ್ಮೆನಿಸುವ ಭಯಾನಕ ಸಂಗತಿಗಳು ಒಂದೊಂದೇ ಹೊರಬೀಳುತ್ತಿವೆ. ಇನ್ನೂ ಪತ್ತೆಯಾಗದಿರುವ ಶ್ರದ್ಧಾ ಶವದ ಭಾಗಗಳಿಗೆ ಪೊಲೀಸರ ಶೋಧ ಮುಂದುವರಿದಿದೆ.

ಎರಡು ದಿನಗಳಲ್ಲಿ ಶವ 35 ತುಂಡಾಗಿಸಿದ ಕಟುಕ

ಹೋಟೆಲ್ ನಿರ್ವಹಣೆ ಕೋರ್ಸ್ ಅಧ್ಯಯನ ಮಾಡಿದ್ದ ಅಫ್ತಾಬ್, ಮಾಂಸ ಕತ್ತರಿಸುವ ಬಗ್ಗೆಯೂ ಎರಡು ವಾರಗಳ ತರಬೇತಿ ಪಡೆದಿದ್ದ. ಇದರಿಂದ ತೀಕ್ಷ್ಣ ಹರಿತ ಚಾಕುಗಳನ್ನು ಬಳಸುವುದು ಆತನಿಗೆ ಗೊತ್ತಿತ್ತು. ಆ ಜ್ಞಾನವನ್ನು ಆತ ಶ್ರದ್ಧಾ ದೇಹ ಕತ್ತರಿಸಲು ಬಳಸಿದ್ದಾನೆ. 'ಆಕೆಯ ದೇಹವನ್ನು ಎರಡು ದಿನಗಳ ಕಾಲ 35 ತುಂಡುಗಳಾಗಿ ಕತ್ತರಿಸಿದ್ದೇನೆ' ಎಂದು ಆರೋಪಿಯು ಪೊಲೀಸ್ ವಿಚಾರಣೆಯಲ್ಲಿ ಹೇಳಿದ್ದಾನೆ.

ಸಂಕ್ಷಿಪ್ತ ಸುದ್ದಿ

ಧನುಷ್ಕಾ ಗುಣತಿಲಕಗೆ ಜಾಮೀನು

ಸಿಡ್ನಿ/ ಕೊಲಂಬೊ (ಪಿಟಿಐ): ಲೈಂಗಿಕ ದೌರ್ಜನ್ಯದ ಆರೋಪದಡಿ ಆಸ್ಟ್ರೇಲಿಯಾದಲ್ಲಿ ಬಂಧನದಲ್ಲಿರುವ ಶ್ರೀಲಂಕಾ ಕ್ರಿಕೆಟಿಗ ಧನುಷ್ಕಾ ಗುಣತಿಲಕ ಅವರಿಗೆ ಸಿಡ್ನಿಯ ನ್ಯಾಯಾಲಯ ಜಾಮೀನು ನೀಡಿದೆ.

ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪದಡಿ ಸಿಡ್ನಿಯ ಪೊಲೀಸರು 31 ವರ್ಷದ ಧನುಷ್ಕಾ ಅವರನ್ನು ನ.6 ರಂದು ಬಂಧಿಸಿದ್ದರು. ಈ ಮೊದಲು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದರಿಂದ ಅವರನ್ನು ಪಾರ್ಕ್‌ಲೀ ಜೈಲಿನಲ್ಲಿ ಇರಿಸಲಾಗಿದೆ.

ಸಿಡ್ನಿಯ ಡೌನಿಂಗ್ ಸೆಂಟರ್ ನ್ಯಾಯಾಲಯದಲ್ಲಿ ಗುರುವಾರ ಜಾಮೀನು ಅರ್ಜಿಯ ವಿಚಾರಣೆ ನಡೆಯಿತು. ಗುಣತಿಲಕ ವಿಡಿಯೊ ಲಿಂಕ್ ಮೂಲಕ ವಿಚಾರಣೆಯಲ್ಲಿ ಪಾಲ್ಗೊಂಡರು.

ಸಾಮಾಜಿಕ ಮಾಧ್ಯಮಗಳು, ಡೇಟಿಂಗ್ ಆ್ಯಪ್ ಬಳಸುವಂತಿಲ್ಲ, ₹ 82 ಲಕ್ಷ ಮೊತ್ತದ ಶೂರಿಟಿ ನೀಡಬೇಕು, ಪಾಸ್‌ಪೋರ್ಟ್‌ಅನ್ನು ನ್ಯಾಯಾಲಯದ ವಶಕ್ಕೆ ಒಪ್ಪಿಸಬೇಕು, ದಿನಕ್ಕೆ ಎರಡು ಬಾರಿ ಪೊಲೀಸರಿಗೆ ವರದಿ ಮಾಡಬೇಕು, ರಾತ್ರಿ 9 ರಿಂದ ಬೆಳಿಗ್ಗೆ 6ರ ವರೆಗೆ ಹೊರಗಡೆ ಸಂಚರಿಸಬಾರದು ಹಾಗೂ ಸಂತ್ರಸ್ತೆಯನ್ನು ಸಂಪರ್ಕಿಸಲು ಪ್ರಯತ್ನಿಸಬಾರದು ಎಂಬ ಷರತ್ತುಗಳನ್ನು ನ್ಯಾಯಾಲಯ ವಿಧಿಸಿದೆ.

ಮುಂಬೈಗೆ ಶರಣಾದ ಬಿಎಫ್‌ಸಿ

ಮುಂಬೈ: ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಮತ್ತೆ ಮುಗ್ಗರಿಸಿತು.

ಮುಂಬೈ ಫುಟ್‌ಬಾಲ್ ಅರೆನಾದಲ್ಲಿ ಗುರುವಾರ ನಡೆದ ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ಸಿಟಿ ತಂಡವು 4–0ಯಿಂದ ಬೆಂಗಳೂರು ತಂಡವನ್ನು ಸೋಲಿಸಿತು.

ಸುನಿಲ್ ಚೆಟ್ರಿ ಬಳಗವು ಪಂದ್ಯದಲ್ಲಿ ಒಂದೂ ಗೋಲು ಗಳಿಸಲಿಲ್ಲ. ಮುಂಬೈ ತಂಡಕ್ಕೆ ತಡೆಯೊಡ್ಡುವಲ್ಲಿಯೂ ರಕ್ಷಣಾ ವಿಭಾಗ ವಿಫಲವಾಯಿತು. ಟೂರ್ನಿಯಲ್ಲಿ ಬೆಂಗಳೂರು ತಂಡಕ್ಕೆ ಇದು ನಾಲ್ಕನೇ ಸೋಲು.


ಶೂಟಿಂಗ್: ಮಹಿಳಾ ತಂಡಕ್ಕೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಜೂನಿಯರ್ ಮಹಿಳಾ ತಂಡದವರು ಕೊರಿಯಾದಲ್ಲಿ ನಡೆಯುತ್ತಿರುವ 15ನೇ ಏಷ್ಯನ್ ಏರ್‌ಗನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಪಿಸ್ತೂಲ್ ತಂಡ ಫೈನಲ್‌ನಲ್ಲಿ ಮನು ಭಾಕರ್, ಈಶಾ ಸಿಂಗ್ ಮತ್ತು ಶಿಖಾ ನರ್ವಾಲ್ ಅವರನ್ನೊಳಗೊಂಡ ಭಾರತ 16–12 ರಲ್ಲಿ ಕೊರಿಯಾದ ಕಿಮ್ ಮಿನ್‌ಸಿಯೊ, ಕಿಮ್ ಜುಹೀ ಮತ್ತು ಯಾಂಗ್ ಜಿನ್ ವಿರುದ್ಧ ಗೆದ್ದಿತು.

ಸುಂದರರಾಜನ್ ನಿಧನ

ಬೆಂಗಳೂರು: ಎಲ್ ಆರ್ ಡಿ ಇ ಫುಟ್ ಬಾಲ್ ತಂಡದ ಮಾಜಿ ಆಟಗಾರ ಎಂ.ಸಿ. ಸುಂದರರಾಜನ್ (84) ಅವರು ಬುಧವಾರ ದೊಮ್ಮಲೂರಿನ ತಮ್ಮ ನಿವಾಸದಲ್ಲಿ ನಿಧನರಾದರು.



ಸುಂದರರಾಜನ್

ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿಯರು ಇದ್ದಾರೆ.

ಎಲ್‌ಆರ್‌ಡಿಇ ಸೇರುವ ಮುನ್ನ ಅವರು ಜವಾಹರ್ ಯೂನಿಯನ್ ಎಫ್‌ಸಿ, ಬೆಂಗಳೂರು ಮಾರ್ಸ್ ಎಫ್‌ಸಿ ಮತ್ತು ರೈಲ್ವೇಸ್‌ಅನ್ನು ಪ್ರತಿನಿಧಿಸಿದ್ದರು.

ಯುಎಇ ವಿರುದ್ಧ 5–0 ಗೋಲುಗಳ ಗೆಲುವು; ಜರ್ಮನಿ ಜಯಭೇರಿ

ಅರ್ಜೆಂಟೀನಾ ಗೆಲುವಿನ ಅಭ್ಯಾಸ

ಅಬುಧಾಬಿ/ ದೋಹಾ (ಎಪಿ): ಅರ್ಜೆಂಟೀನಾ ಮತ್ತು ಜರ್ಮನಿ ತಂಡಗಳು ಫಿಫಾ ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ಗೆಲುವು ಪಡೆದು ಆತ್ಮವಿಶ್ವಾಸ ಹೆಚ್ಚಿಸಿಕೊಂಡವು.

ಅಬುಧಾಬಿಯಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಅರ್ಜೆಂಟೀನಾ 5–0 ಗೋಲುಗಳಿಂದ ಯುಎಇ ತಂಡವನ್ನು ಮಣಿಸಿತು. ತಂಡದ ನಾಲ್ಕನೇ ಗೋಲನ್ನು ಸ್ಟಾರ್ ಆಟಗಾರ ಲಯೊನೆಲ್ ಮೆಸ್ಸಿ ಗಳಿಸಿದರು. ಏಂಜೆಲ್ ಡಿ ಮರಿಯಾ ಎರಡು ಗೋಲುಗಳನ್ನು ತಂದಿತ್ತರೆ, ಜೂಲಿಯನ್ ಅಲ್ವಾರೆಜ್ ಮತ್ತು ಜೋಕಿನ್ ಕೊರಿಯಾ ತಲಾ ಒಂದು ಗೋಲು ತಂದುಕೊಟ್ಟರು.

ಅರ್ಜೆಂಟೀನಾ ಕೋಚ್ ಲಯೊನೆಲ್ ಸ್ಕಾಲೊನಿ ಅವರು ಎರಡನೇ ಅವಧಿಯ ಆರಂಭದಲ್ಲಿ ನಾಲ್ಕು ಬದಲಿ ಆಟಗಾರರನ್ನು ಕಣಕ್ಕಿಳಿಸಿದರು. ಆದರೆ ಮೆಸ್ಸಿ ಅವರಿಗೆ ಪೂರ್ಣ 90 ನಿಮಿಷ ಆಡುವ ಅವಕಾಶ ನೀಡಿದರು.


ಅರ್ಜೆಂಟೀನಾ ರಾಷ್ಟ್ರೀಯ ತಂಡದ ಪರ ಮೆಸ್ಸಿ ಗಳಿಸಿದ 91ನೇ ಗೋಲು ಇದು. ಕಳೆದ ಐದು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅವರು ಒಟ್ಟು 10 ಗೋಲುಗಳನ್ನು ಗಳಿಸಿದ್ದಾರೆ.

‘ಸಿ’ ಗುಂಪಿನಲ್ಲಿರುವ ಅರ್ಜೆಂಟೀನಾ ತನ್ನ ಮೊದಲ ಪಂದ್ಯದಲ್ಲಿ ನ.22 ರಂದು ಸೌದಿ ಅರೇಬಿಯಾವನ್ನು ಎದುರಿಸಲಿದೆ. ಆ ಬಳಿಕ ಕ್ರಮವಾಗಿ ಮೆಕ್ಸಿಕೊ ಹಾಗೂ ಪೋಲೆಂಡ್ ತಂಡಗಳ ವಿರುದ್ಧ ಆಡಲಿದೆ.

ಜರ್ಮನಿ ಜಯಭೇರಿ: ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ತಂಡದವರು ಮಸ್ಕತ್‌ನಲ್ಲಿ ನಡೆದ ಅಭ್ಯಾಸ ಪಂದ್ಯದಲ್ಲಿ 1-0 ರಲ್ಲಿ ಒಮಾನ್ ವಿರುದ್ಧ ಗೆದ್ದರು. ನಿಕ್ಲಾಸ್ ಫುಲ್‌ಕ್ರುಗ್ ಅವರು ಗೋಲು ಗಳಿಸಿದರು. ತಮ್ಮ ಕೊನೆಯ ಅಭ್ಯಾಸ ಪಂದ್ಯವನ್ನಾಡಿದ ಜರ್ಮನಿ ಆಟಗಾರರು ಗುರುವಾರ ದೋಹಾಕ್ಕೆ ಬಂದಿಳಿದರು.



ಯುಎಇ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಲಯೊನೆಲ್ ಮೆಸ್ಸಿ ಚೆಂಡಿನೊಂದಿಗೆ ಮುನ್ನುಗ್ಗಲು ಪ್ರಯತ್ನಿಸಿದರು –ಎಎಫ್‌ಪಿ ಚಿತ್ರ



‘ಇ’ ಗುಂಪಿನಲ್ಲಿರುವ ಜರ್ಮನಿ ತಂಡ ಲೀಗ್ ಹಂತದಲ್ಲಿ ಕ್ರಮವಾಗಿ ಜಪಾನ್, ಸ್ಪೇನ್ ಮತ್ತು ಕೋಸ್ಟರಿಕಾ ತಂಡಗಳನ್ನು ಎದುರಿಸಲಿವೆ.

ರಿಯಾದ್‌ನಲ್ಲಿ ನಡೆದ ಪಂದ್ಯದಲ್ಲಿ ಕ್ರೊಯೇಷ್ಯಾ 1-0 ರಲ್ಲಿ ಸೌದಿ ಅರೇಬಿಯಾ ತಂಡವನ್ನು ಮಣಿಸಿತು. ಆಂದ್ರೆ ಕ್ರಾಮರಿಚ್ ಅವರು 82ನೇ ನಿಮಿಷದಲ್ಲಿ ಗೋಲು ಗಳಿಸಿದರು. ತಂಡದ ಸ್ಟಾರ್ ಆಟಗಾರ ಲುಕಾ ಮಾಡ್ರಿಚ್ 25 ನಿಮಿಷ ಮಾತ್ರ ಆಡಿದರು. ಅಬುಧಾಬಿಯಲ್ಲಿ ನಡೆದ ಪಂದ್ಯದಲ್ಲಿ ಘಾನಾ 2–0 ಗೋಲುಗಳಿಂದ ಸ್ವಿಟ್ಜರ್‌ಲೆಂಡ್ ತಂಡವನ್ನು ಪರಾಭವಗೊಳಿಸಿತು. ಮೊಹಮ್ಮದ್ ಸಲಿಸು 70ನೇ ನಿಮಿಷದಲ್ಲಿ ಹಾಗೂ ಕಮಾಲುದೀನ್ ಸುಲೇಮಾನ್ 74ನೇ ನಿಮಿಷದಲ್ಲಿ ಗೋಲು ತಂದಿತ್ತರು.

ವಸ್ತ್ರಸಂಹಿತೆ: ಊಹಾಪೋಹ

ದೋಹಾ (ಎಪಿ): ವಿಶ್ವಕಪ್ ಪಂದ್ಯ ವೀಕ್ಷಿಸಲು ಬರುವ ವಿದೇಶಿಯರು ಕತಾರ್‌ನ ಸಂಸ್ಕೃತಿಯನ್ನು ಗೌರವಿಸುವಂತಹ ಬಟ್ಟೆ ಧರಿಸಬೇಕು ಎಂಬ ಹೇಳಿಕೆಯನ್ನೊಳಗೊಂಡ ಪ್ರಕಟಣೆ-ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಅರಬ್ ರಾಷ್ಟ್ರ ಕತಾರ್‌ನಲ್ಲಿ ಮಹಿಳೆಯರು ತುಂಡುಡುಗೆ ಧರಿಸುವುದಕ್ಕೆ ನಿಷೇಧವಿದೆ. ವಿಶ್ವಕಪ್ ಟೂರ್ನಿಯ ವೇಳೆ ವಿದೇಶಿಯರಿಗೂ ಈ ನಿಯಮ ಅನ್ವಯಿಸಲಿದೆ. ಮಹಿಳೆಯರು ಮಂಡಿಯಿಂದ ಭುಜದವರೆಗೆ ಮುಚ್ಚುವಂತಹ ಬಟ್ಟೆಗಳನ್ನು ಧರಿಸಬೇಕು ಎಂಬ ಸೂಚನೆ ಪ್ರಕಟಣೆಯಲ್ಲಿದೆ.

ಆದರೆ ಇದು ‘ನಕಲಿ’ ಪ್ರಕಟಣೆ ಎಂದು ಸಂಘಟಕರು ಸ್ಪಷ್ಟಪಡಿಸಿದ್ದಾರೆ. ‘ಅಭಿಮಾನಿಗಳು ಕತಾರ್‌ನ ಸಂಸ್ಕೃತಿಯನ್ನು ಗೌರವಿಸಬೇಕು. ಆದರೆ ಬಟ್ಟೆಯ ಆಯ್ಕೆಯ ವಿಚಾರದಲ್ಲಿ ಯಾರನ್ನೂ ಬಂಧಿಸುವ ಅಥವಾ ಟೂರ್ನಿಯಿಂದ ಹೊರಹಾಕುವ ಪ್ರಶ್ನೆ ಉದ್ಭವಿಸದು’ ಎಂದು ಹೇಳಿದ್ದಾರೆ. ಆದರೂ ವಸ್ತ್ರಸಂಹಿತೆಯ ಕುರಿತ ಊಹಾಪೋಹಗಳು ಹರಿದಾಡುತ್ತಲೇ ಇವೆ.

‘ಮಹಿಳೆಯರು ತಮ್ಮಿಷ್ಟದ ಬಟ್ಟೆಗಳನ್ನು ಧರಿಸಬಹುದು. ಆದರೆ ಕತಾರ್‌ನ ನಿಯಮಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು’ ಎಂದು ಫಿಫಾ ವೆಬ್‌ಸೈಟ್ ಹೇಳಿದೆ.

‘ಹೊಸ’ ಆರಂಭದ ನಿರೀಕ್ಷೆ

ಟಿ20 ಕ್ರಿಕೆಟ್: ಭಾರತ–ನ್ಯೂಜಿಲೆಂಡ್ ಹಣಾಹಣಿ ಇಂದು

ವೆಲ್ಲಿಂಗ್ಟನ್ (ಪಿಟಿಐ): ಹೋದ ವಾರ ಟಿ20 ವಿಶ್ವಕಪ್ ಕ್ರಿಕೆಟ್ ಸೆಮಿಫೈನಲ್‌ನಲ್ಲಿ ಸೋತು ಹೊರಬಿದ್ದ ಭಾರತ ತಂಡ ಶುಕ್ರವಾರದಿಂದ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಕಣಕ್ಕಿಳಿಯಲಿದೆ.

ಇನ್ನೆರಡು ವರ್ಷಗಳ ನಂತರ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಭಾರತ ತಂಡವನ್ನು ಸಿದ್ಧಗೊಳಿಸುವ ಪ್ರಯೋಗದ ಮೊದಲ ಹೆಜ್ಜೆ ಈ ಸರಣಿ ಎಂದು ಹೇಳಲಾಗಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಂಡವನ್ನು ಮುನ್ನಡೆಸಲಿದ್ದಾರೆ. ಅನುಭವಿಗಳಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಬೌಲರ್ ಮೊಹಮ್ಮದ್ ಶಮಿ, ಭುವನೇಶ್ವರ್ ಯಾದವ್ ಮತ್ತು ವಿಕೆಟ್‌ಕೀಪರ್ ದಿನೇಶ್ ಕಾರ್ತಿಕ್ ಅವರಿಗೆ ವಿಶ್ರಾಂತಿ ಕೊಡಲಾಗಿದೆ.

ಇದರಿಂದಾಗಿ ಯುವ ಆಟಗಾರರಿಗೆ ಅವಕಾಶ ಸಿಕ್ಕಿದೆ. ಮೂವರು ವಿಕೆಟ್‌ಕೀಪರ್‌ಗಳಾದ ರಿಷಭ್, ಸಂಜು ಸ್ಯಾಮ್ಸನ್ ಹಾಗೂ ಇಶಾನ್ ಕಿಶನ್ ತಂಡದಲ್ಲಿದ್ದಾರೆ. ಸ್ಪಿನ್ನರ್ ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್ ಹಾಗೂ ವೇಗಿ ಉಮ್ರಾನ್ ಮಲಿಕ್ ಅವರೂ ಇದ್ದಾರೆ.

ನ್ಯೂಜಿಲೆಂಡ್ ತಂಡವೂ ವಿಶ್ವಕಪ್ ಟೂರ್ನಿಯ ನಾಲ್ಕರ ಘಟ್ಟದಲ್ಲಿ ಸೋಲನುಭವಿಸಿತ್ತು. ಅಲ್ಲಿ ಆಡಿದ್ದ ತಂಡವನ್ನೇ ಇಲ್ಲಿಯೂ ಉಳಿಸಿಕೊಳ್ಳಲಾಗಿದೆ. ಡೆವೊನ್ ಕಾನ್ವೆ, ಜಿಮ್ಮಿ ನಿಶಾಮ್ ಹಾಗೂ ಗ್ಲೆನ್ ಫಿಲಿಪ್ಸ್ ಉತ್ತಮ ಲಯದಲ್ಲಿದ್ದು ಬ್ಯಾಟಿಂಗ್‌ನಲ್ಲಿ ತಂಡಕ್ಕೆ ಚಿಂತೆ ಇಲ್ಲ. ವೇಗಿ ಟಿಮ್ ಸೌಥಿ ಮೇಲೆ ಹೆಚ್ಚು ಹೊರೆ ಬೀಳಲಿದೆ.

ತಂಡಗಳು: ಭಾರತ: ಹಾರ್ದಿಕ್ ಪಾಂಡ್ಯ (ನಾಯಕ), ರಿಷಭ್ ಪಂತ್, ಇಶಾನ್ ಕಿಶನ್, ಶುಭಮನ್ ಗಿಲ್, ದೀಪಕ್ ಹೂಡಾ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ಭುವನೇಶ್ವರ್ ಕುಮಾರ್, ಆರ್ಷದೀಪ್ ಸಿಂಗ್, ಉಮ್ರಾನ್ ಮಲಿಕ್.

ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಫಿನ್ ಅಲೆನ್, ಮೈಕೆಲ್ ಬ್ರೆಸ್‌ವೆಲ್, ಡೆವೊನ್ ಕಾನ್ವೆ (ವಿಕೆಟ್‌ಕೀಪರ್), ಲಾಕಿ ಫರ್ಗ್ಯುಸನ್, ಡೆರಿಲ್ ಮಿಚೆಲ್, ಆ್ಯಡಂ ಮಿಲ್ನೆ, ಜಿಮ್ಮಿ ನಿಶಾಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್, ಟಿಮ್ ಸೌಥಿ, ಈಶ್ ಸೌಧಿ, ಬ್ಲೇರ್ ಟಿಕ್ನರ್.

ಪಂದ್ಯ ಆರಂಭ: ಮಧ್ಯಾಹ್ನ 12ರಿಂದ

ನೇರಪ್ರಸಾರ: ಅಮೆಜಾನ್ ಪ್ರೈಮ್



ಬ್ಯಾಟಿಂಗ್ ಅಭ್ಯಾಸನಿರತ ಹಾರ್ದಿಕ್ ಪಾಂಡ್ಯ –ಎಎಫ್‌ಸಿ ಚಿತ್ರ

ಚೆಸ್: ಪ್ರಗ್ನಾನಂದಗೆ ಗೆಲುವು

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಅವರು ಮೆಲ್ಟ್‌ವಾಟರ್ ಚಾಂಪಿಯನ್ಸ್ ಟೂರ್ ಫೈನಲ್ಸ್ ಚೆಸ್‌ನಲ್ಲಿ ಮೊದಲ ಗೆಲುವು ದಾಖಲಿಸಿದರು. ಆದರೆ ಅರ್ಜುನ್ ಎರಿಗೈಸಿ ಸತತ ಮೂರನೇ ಪಂದ್ಯದಲ್ಲಿ ಸೋತರು.

ಗುರುವಾರ ನಡೆದ ಮೂರನೇ ಸುತ್ತಿನಲ್ಲಿ ಪ್ರಗ್ನಾನಂದ 3-0 ರಲ್ಲಿ ವಿಯೆಟ್ನಾಂನ ಲಿಯೆ ಕುವಾಂಗ್ ಅವರನ್ನು ಮಣಿಸಿದರು. ಮೊದಲ ಎರಡು ಸುತ್ತುಗಳಲ್ಲಿ ನಿರಾಸೆ ಅನುಭವಿಸಿದ್ದ ಪ್ರಗ್ನಾನಂದ ಕೊನೆಗೂ ಲಯ ಕಂಡುಕೊಂಡರು. ಕುವಾಂಗ್ ವಿರುದ್ಧದ ಮೂರೂ ಗೇಮ್‌ಳನ್ನು ಗೆದ್ದರು.

ಎರಿಗೈಸಿ ಅವರು 0.5-2.5 ಪಾಯಿಂಟ್ಸ್‌ಗಳಿಂದ ಅಮೆರಿಕದ ವೆಸ್ಲಿ ಸೊ ಕೈಯಲ್ಲಿ ಪರಾಭವಗೊಂಡರು. ಮೊದಲ ಗೇಮ್‌ಅನ್ನು ಡ್ರಾ ಮಾಡಿಕೊಂಡ ಭಾರತದ ಗ್ರ್ಯಾಂಡ್‌ಮಾಸ್ಟರ್, ಬಳಿಕದ ಎರಡೂ ಗೇಮ್‌ಗಳಲ್ಲಿ ಸೋತರು.

ಪ್ರಮುಖ ಎಂಟು ಆಟಗಾರರು ಪಾಲ್ಗೊಂಡಿರುವ ಟೂರ್ನಿಯಲ್ಲಿ ಮೂರು ಸುತ್ತುಗಳ ಬಳಿಕ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಪೋಲೆಂಡ್‌ನ ಜಾನ್ ಕ್ರಿಸ್ಟೋಫ್ ದುಡಾ ಅವರು 9 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ಪ್ರಗ್ನಾನಂದ ಅವರು ತಲಾ ನಾಲ್ಕು ಪಾಯಿಂಟ್ಸ್ ಹೊಂದಿದ್ದಾರೆ.

ಗೆಲುವಿನ ಓಟ ಮುಂದುವರಿಸಿದ ಕಾರ್ಲ್‌ಸನ್ 3-0 ರಲ್ಲಿ ಅಜರ್‌ಬೈಜಾನ್‌ನ ಶಕ್ರಿಯಾರ್ ಮಮೆದ್ಯರೊವ್ ಅವರನ್ನು ಮಣಿಸಿದರು. ದುಡಾ ಅವರು 2.5-0.5 ರಲ್ಲಿ ಗಿರಿ ಎದುರು ಗೆದ್ದರು.



ಪ್ರಗ್ನಾನಂದ

ಬ್ಯಾಡ್ಮಿಂಟನ್: ಅನ್ವೇಷಾಗೆ ಸೋಲು

ಸಿಡ್ನಿ (ಪಿಟಿಐ): ಭಾರತದ ಅನ್ವೇಷಾ ಗೌಡ ಅವರು ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಅನ್ವೇಷಾ 7-21, 13-21 ರಲ್ಲಿ ಮಲೇಷ್ಯಾದ ಜಿನ್ ವೀ ಗೊ ಎದುರು ಪರಾಭವಗೊಂಡರು.

ವಿಜಯ್ ಹಜಾರೆ: ಕರ್ನಾಟಕಕ್ಕೆ ನಾಲ್ಕನೇ ಜಯ

ಕೋಲ್ಕತ್ತ: ಮಧ್ಯಮವೇಗಿ ವಿ. ಕೌಶಿಕ್ ಬೌಲಿಂಗ್ ಹಾಗೂ ಆರಂಭಿಕ ಬ್ಯಾಟರ್ ಆರ್. ಸಮರ್ಥ್ ಉತ್ತಮ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ಗುರುವಾರ ನಡೆದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ದೆಹಲಿ ವಿರುದ್ಧ 4 ವಿಕೆಟ್‌ಗಳಿಂದ ಗೆದ್ದಿತು.

ಇದರೊಂದಿಗೆ ಕರ್ನಾಟಕ ತಂಡವು ಬಿ ಗುಂಪಿನಲ್ಲಿ ಆಡಿದ ಎಲ್ಲ ನಾಲ್ಕು ಪಂದ್ಯಗಳಲ್ಲಿಯೂ ಜಯ ಸಾಧಿಸಿದೆ. 16 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ಇನ್ನುಳಿದಿರುವ ಮೂರು ಪಂದ್ಯಗಳಲ್ಲಿ ಅಸ್ಸಾಂ, ಸಿಕ್ಕಿಂ ಹಾಗೂ ರಾಜಸ್ಥಾನ ವಿರುದ್ಧ ಆಡಲಿದೆ.

ಜಾಧವಪುರ ವಿಶ್ವವಿದ್ಯಾಲಯ ಕ್ರೀಡಾಂಗಣದಲ್ಲಿ ನಡೆದ ದೆಹಲಿ ಎದುರಿನ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೌಶಿಕ್ (23ಕ್ಕೆ3) ಹಾಗೂ ಸ್ಪಿನ್ನರ್ ಶ್ರೇಯಸ್ ಗೋಪಾಲ್ (25ಕ್ಕೆ3) ಅವರ ಬೌಲಿಂಗ್ ಮುಂದೆ ದೆಹಲಿ ತಂಡವು 45.4 ಓವರ್‌ಗಳಲ್ಲಿ 159 ರನ್ ಗಳಿಸಿ ಆಲೌಟ್ ಆಯಿತು.

63 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ದೆಹಲಿ ತಂಡಕ್ಕೆ ನಾಯಕ ನಿತೀಶ್ ರಾಣಾ (30; 43ಎ, 4X4) ಹಾಗೂ ಲಲಿತ್ (59; 100ಎ, 4X7)ನೆರವಾದರು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡಕ್ಕೆ ಸಮರ್ಥ್ (59; 73ಎ) ಹಾಗೂ ಬಿ.ಆರ್. ಶರತ್ (12; 26ಎ) ಮೊದಲ ವಿಕೆಟ್‌ಗೆ 33 ರನ್ ಸೇರಿಸಿದರು.

ಮಯಂಕ್ ಯಾದವ್ (47ಕ್ಕೆ4) ಮತ್ತು ನವದೀಪ್ ಸೈನಿ ಎರಡು ವಿಕೆಟ್ ಪಡೆದು ಕರ್ನಾಟಕಕ್ಕೆ ಆತಂಕ ಮೂಡಿಸಿದರು. ಆದರೆ. ಸಮರ್ಥ್ (59; 73ಎ) ತಾಳ್ಮೆಯ ಆಟ ಹಾಗೂ ಮನೀಷ್ ಪಾಂಡೆಯ ಚುರುಕಾದ ಬ್ಯಾಟಿಂಗ್‌ನಿಂದಾಗಿ ತಂಡವು ಜಯದತ್ತ ವಾಲಿತು. 29.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 161 ರನ್ ಗಳಿಸಿ ಗೆದ್ದಿತು.

ಮಯಂಕ್ ಅಗರವಾಲ್ ವಿಶ್ರಾಂತಿ ಪಡೆದ ಕಾರಣ ಕರ್ನಾಟಕ ತಂಡವನ್ನು ಸಮರ್ಥ್ ಮುನ್ನಡೆಸಿದರು.

ರಿಯಾನ್ ಪರಾಗ್ ಶತಕ: ಐಪಿಎಲ್ ಹೀರೊ ರಿಯಾನ್ ಪರಾಗ್ (128; 93ಎ, 4X5, 6X7) ಅವರ ಶತಕದ ಬಲದಿಂದ ಅಸ್ಸಾಂ ತಂಡವು ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಸಿಕ್ಕಿಂ ವಿರುದ್ಧ 180 ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ದೆಹಲಿ: 45.4 ಓವರ್‌ಗಳಲ್ಲಿ 159 (ನಿತೀಶ್ ರಾಣಾ 30, ಲಲಿತ್ ಯಾದವ್ 59, ವಿ. ಕೌಶಿಕ್ 23ಕ್ಕೆ3, ಶ್ರೇಯಸ್ ಗೋಪಾಲ್ 25ಕ್ಕೆ3) ಕರ್ನಾಟಕ: 29.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 161 (ಆರ್. ಸಮರ್ಥ್ 59, ಮನೀಷ್ ಪಾಂಡೆ 48, ಶ್ರೇಯಸ್ ಗೋಪಾಲ್ 26, ಸೈನಿ 31ಕ್ಕೆ2, ಮಯಂಕ್ ಯಾದವ್ 47ಕ್ಕೆ4)